ಸಂಪುಟ : 12 ಸಂಚಿಕೆ : 162 ಆರ್.ಎನ್.ಐ ನಂ. ಕೆ.ಎ.ಆರ್.ಕೆ.ಎ.ಎನ್. 2014/58282 - KA/SK/CTA 80322015-2017 ದಾವಣಗೆರೆ ದಿನಾಂಕ : 11-03-2026 ಬುಧವಾರ ಪುಟ : 06 ಬೆಲೆ : 3/- ರೂ.

9743483637
9844093312

vismayavani regional kannada daily
Emai:vismayavanidaily@gmail

VV
ವಿಸ್ಮಯ ವಾಣಿ
ಕನ್ನಡಿಗರ ದೈನಂದಿನ ದನಿ
ಪ್ರಾದೇಶಿಕ ಕನ್ನಡ ದಿನ ಪತ್ರಿಕೆ

ಡಾ. ಬಿ. ವಾಸುದೇವ ಸಾರಥ್ಯದಲ್ಲಿ

ವಿ
ನಮಗೆ ಅವಮಾನ ಮಾಡಿದವರ ಮೇಲೆ ಸೇಡು ತೀರಿಸಿಕೊಳ್ಳುವ ಯೋಗ್ಯ ವಿಧಾನವೆಂದರೆ, ಅವರೆದುರೇ ಯಶಸ್ಸು ಸಂಪಾದಿಸಿಕೊಂಡು ತಲೆಯೆತ್ತಿ ನಡೆಯುವುದು!......

ದಾವಣಗೆರೆ | ಹುಬ್ಬಳ್ಳಿ-ಧಾರವಾಡ | ಶಿವಮೊಗ್ಗ | ಬಳ್ಳಾರಿ | ವಿಜಯನಗರ | ಕೊಪ್ಪಳ | ಗದಗ, ಚಿತ್ರದುರ್ಗ | ಮಂಗಳೂರು | ದಕ್ಷಿಣ ಕನ್ನಡ

ದೇಶದಲ್ಲಿ LPG ಸಿಲಿಂಡರ್ ಕೊರತೆ: ಧ್ವನಿ ಎತ್ತದ ಬಿಜೆಪಿ ಸಂಸದರ ವಿರುದ್ಧ ಡಿಸಿಎಂ ಡಿಕೆ ಶಿವಕುಮಾರ್ ಕಿಡಿ!

₹14,885	₹16,235	₹2,90,000
1 ಗ್ರಾಮ ದರ	1 ಗ್ರಾಮ ದರ	1 ಕೆ.ಜಿ
22 ಕ್ಯಾರೆಟ್	24 ಕ್ಯಾರೆಟ್	ಬೆಳ್ಳಿ ದರ
(ಆಭರಣ ಚಿನ್ನ)	(ಗಟ್ಟಿ ಚಿನ್ನ)	(ಜಿ.ಎಸ್.ಟಿ. ಪ್ರತ್ಯೇಕ)

ಹಾಸನ ಜಿಲ್ಲೆ ಕೌಶಿಕ ಗ್ರಾಮದ ಕೊಳವೆ ಬಾವಿ ನೀರು ಪರೀಕ್ಷೆಗೆ ಖಂಡ್ರೆ ಸೂಚನೆ

ಮಧ್ಯಪ್ರಾಚ್ಯ ಯುದ್ಧದ ಹಿನ್ನೆಲೆ: ದೋಹಾ ಬಂದರಿನಲ್ಲಿ ಸಿಲುಕಿದ ಕರ್ನಾಟಕದ 8 ಪ್ರವಾಸಿಗರ ರಕ್ಷಣೆಗೆ ಕೇಂದ್ರಕ್ಕೆ ಮನವಿ



ವಿಸ್ಮಯವಾಣಿ ಸುದ್ದಿ ದಾವಣಗೆರೆ ; ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಹಿನ್ನೆಲೆಯಲ್ಲಿ ಕರ್ನಾಟಕದ ಎಂಟು ಮಂದಿ ಭಾರತೀಯ ಪ್ರವಾಸಿಗರು ಹಳೆಯ ದೋಹಾ ಬಂದರಿನಲ್ಲಿ ಸಿಲುಕಿಕೊಂಡಿರುವ ಮಾಹಿತಿ ಲಭ್ಯವಾಗಿದೆ. ಅವರ ಸುರಕ್ಷತೆ ಕುರಿತು ಆತಂಕ ವ್ಯಕ್ತವಾಗಿದ್ದು, ತಕ್ಷಣ ಕ್ರಮ ಕೈಗೊಳ್ಳುವಂತೆ ಭಾರತ ಸರ್ಕಾರದ ವಿದೇಶಾಂಗ ವ್ಯವಹಾರಗಳ ಸಚಿವಾಲಯಕ್ಕೆ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್ ಎಸ್ ಮಲ್ಲಿಕಾರ್ಜುನ್ ಹಾಗೂ ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ಮನವಿ ಮಾಡಿದ್ದಾರೆ.
ಕೇಂದ್ರ ವಿದೇಶಾಂಗ ಸಚಿವರಾದ ಡಾ. ಸುಬ್ರಹ್ಮಣ್ಯಂ ಜೈಶಂಕರ್ ಅವರಿಗೆ ಈ ಕುರಿತು ಮನವಿ ಸಲ್ಲಿಸಲಾಗಿದ್ದು, ಸಂಬಂಧಿತ ರಾಯಭಾರಿ ಕಚೇರಿ ಅಧಿಕಾರಿಗಳಿಗೆ ಅಗತ್ಯ ಸೂಚನೆ ನೀಡಿ ಪ್ರವಾಸಿಗರನ್ನು ಶೀಘ್ರದಲ್ಲೇ ಸುರಕ್ಷಿತವಾಗಿ ಭಾರತಕ್ಕೆ ಕರೆತರಲು ಕ್ರಮ ಕೈಗೊಳ್ಳುವಂತೆ ವಿನಂತಿಸಿದ್ದಾರೆ.
ಸಿಲುಕಿಕೊಂಡಿರುವ ಪ್ರವಾಸಿಗರ ಸುರಕ್ಷತೆ ಹಾಗೂ ಶೀಘ್ರ ವಾಪಸ್ಸಿಗಾಗಿ ಕೇಂದ್ರ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂಬ ನಿರೀಕ್ಷೆ ವ್ಯಕ್ತವಾಗಿದೆ ಎಂದು ಸಚಿವರು ಹಾಗೂ ಸಂಸದರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸರ್ಕಾರಿ ವೈದ್ಯರ ಮುಷ್ಕರ: ಶೀಘ್ರ ಸಮಸ್ಯೆ ಪರಿಹರಿಸುವುದಾಗಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಭರವಸೆ

ವಿಸ್ಮಯವಾಣಿ ಸುದ್ದಿ ಬೆಂಗಳೂರು: ವಿವಿಧ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ (ಕೆಜಿ-ಎಂಒಎ) ಮತ್ತು ಇತರ ಆರೋಗ್ಯ ಇಲಾಖೆ ನೌಕರರ ಸಂಘಗಳು ಬುಧವಾರದಿಂದ ರಾಜ್ಯಾದ್ಯಂತ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿದ್ದು, ಅವರು ಎತ್ತಿರುವ ಸಮಸ್ಯೆಗಳನ್ನು ಶೀಘ್ರ ಪರಿಹರಿಸಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಮಂಗಳವಾರ ಭರವಸೆ ನೀಡಿದ್ದಾರೆ.
ಕೆಜಿಎಂಒಎ ಹಂತಹಂತವಾಗಿ ರಾಜ್ಯಾದ್ಯಂತ ನಡೆಸುತ್ತಿರುವ ಪ್ರತಿಭಟನೆಯ ಭಾಗವಾಗಿ, ಮಾರ್ಚ್ 11 ರಿಂದ ಎಲ್ಲಾ ಹೊರರೋಗಿ ವಿಭಾಗ(ಒಪಿಡಿ)ದ ಸೇವೆಗಳನ್ನು ಬಂದ್ ಮಾಡುತ್ತಿದೆ. ಸರ್ಕಾರ ಕ್ರಮ ಕೈಗೊಳ್ಳಲು ವಿಫಲವಾದರೆ ಮಾರ್ಚ್ 16 ರಿಂದ ವೈದ್ಯರು ತುರ್ತು ಸೇವೆಗಳು ಸೇರಿದಂತೆ ಎಲ್ಲಾ ಆರೋಗ್ಯ ಸೇವೆಗಳನ್ನು ಸಂಪೂರ್ಣವಾಗಿ ಬಹಿಷ್ಕರಿಸಲು ಯೋಜಿಸಿದ್ದಾರೆ.

ಮಾಜಿ ಸೈನಿಕರಿಗೆ ನಿವೇಶನ ನೀಡಿ: ವಿಧಾನಸಭೆ ಕಲಾಪದಲ್ಲಿ ಶಾಸಕ ಬಿ.ಪಿ. ಹರೀಶ್ ಆಗ್ರಹ

ವಿಸ್ಮಯವಾಣಿ ಸುದ್ದಿ ಹರಿಹರ: 'ಮಾಜಿ ಸೈನಿಕರಿಗೆ ನಿವೇಶನ, ಜಮೀನನ್ನು ಆದಷ್ಟು ಬೇಗ ಮಂಜೂರು ಮಾಡಬೇಕು' ಎಂದು ಶಾಸಕ ಬಿ.ಪಿ.ಹರೀಶ್ ಅವರು ಸೋಮವಾರ ವಿಧಾನಸಭೆಯಲ್ಲಿ ನಡೆದ ಬಜೆಟ್ ಅಧಿವೇಶನದಲ್ಲಿ ಚುಕ್ಕೆ ಪ್ರಶ್ನೆ ಚರ್ಚೆಯಲ್ಲಿ ಸರ್ಕಾರಕ್ಕೆ ಆಗ್ರಹಿಸಿದರು.
'ದಾವಣಗೆರೆ ಜಿಲ್ಲೆಯಲ್ಲಿ ಜಮೀನು, ನಿವೇಶನಕ್ಕಾಗಿ ಮಾಜಿ ಸೈನಿಕರಿಂದ 338 ಅರ್ಜಿ ಸಲ್ಲಿಕೆಯಾಗಿವೆ. ಹಲವು ವರ್ಷಗಳಿಂದ ಜಿಲ್ಲಾಧಿಕಾರಿ, ತಹಶೀಲ್ದಾರ್ ಕಚೇರಿಗಳಿಗೆ ಅಲೆದಾಡಿಸಲಾಗುತ್ತಿದೆ. ಈ ಅರ್ಜಿಗಳನ್ನು ಪರಿಗಣಿಸಲಾಗಿದೆಯೇ? ತಿರಸ್ಕರಿಸಲಾಗಿದೆಯೇ? ಎಂಬ ಮಾಹಿತಿಯನ್ನೂ ನೀಡುತ್ತಿಲ್ಲ. ತಾಲ್ಲೂಕಿನ ಮಲೆಬೆನ್ನೂರಿನಲ್ಲಿ ಕೆಲವು ಫಲಾನುಭವಿಗಳಿಗೆ ಗುಡ್ಡದ ಮೇಲೆ ನಿವೇಶನ ಮಂಜೂರು ಮಾಡಿದ್ದು, ಅಲ್ಲಿ ಚಿರತೆ, ಕರಡಿಯೊಂದಿಗೆ ವಾಸಿಸಲು ಹೇಗೆ ಸಾಧ್ಯ' ಎಂದು ಸಭಾಧ್ಯಕ್ಷರ ಗಮನ ಸೆಳೆದರು.
'ಸಲ್ಲಿಕೆಯಾಗಿರುವ ಅರ್ಜಿಗಳ ಮಾಹಿತಿಯನ್ನು ಪಡೆಯಲು ಈ ಮುಂಚೆ ರಾಜ್ಯದ ಎಲ್ಲ ತಹಶೀಲ್ದಾರ್‌ಗಳಿಗೆ ಪತ್ರ ಬರೆಯಬೇಕಿತ್ತು. ಈಗ ಆನ್‌ಲೈನ್ ಅರ್ಜಿ ಸಲ್ಲಿಕೆಗೆ ವ್ಯವಸ್ಥೆ ಮಾಡಿದ್ದು, ಅರ್ಜಿದಾರರ ಸಂಖ್ಯೆ ಲಭ್ಯವಿದೆ. ದಾವಣಗೆರೆ ಜಿಲ್ಲೆಯಲ್ಲಿ 14 ಎಕರೆ ಜಮೀನು ಗುರುತಿಸಿದೆ. ಈ ವರ್ಷ ಅಲ್ಲಿ ಬಡಾವಣೆ ರೂಪಿಸುತ್ತೇವೆ. ಮಾಜಿ ಸೈನಿಕರಿಗೆ ನಿವೇಶನ ವಿತರಿಸುತ್ತೇವೆ' ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ಉತ್ತರಿಸಿದರು.

ಪದ್ಮಭೂಷಣ' ಪುಟ್ಟರಾಜರ ಜೀವನ ಅದು ಸಂಗೀತ ಶ್ರೀಗಂಧವಾಗಿತ್ತು: ಚನ್ನವೀರಸ್ವಾಮಿಜಿ

ವಿಸ್ಮಯವಾಣಿ ಸುದ್ದಿ ದಾವಣಗೆರೆ: 'ಪದ್ಮಭೂಣ' ಡಾ. ಪಂ. ಪುಟ್ಟರಾಜರ ಜೀವನ ಅದು



ಸಂಗೀತದ ಶ್ರೀಗಂಧವಾಗಿತ್ತು. ಶ್ರೀಗಂಧವು ತೇಯಿದಾಗ ಹೇಗೆ ಪರಿಮಳ ಬೀರಿ ಪರಿಸರವನ್ನು ಆಹ್ಲಾದಕರವಾಗಿ ಮಾಡುತ್ತದೆಯೋ ಹಾಗೆ ಪುಟ್ಟರಾಜ ಗುರುವರ್ಯರು, ತಮ್ಮ ಜೀವನವನ್ನು ಸಂಗೀತಕ್ಕೆ ತೇಯಿದು, ಸಂಗೀತದ ಪರಿಮಳವನ್ನು ತಮ್ಮ ಶಿಷ್ಯ ಪ್ರಶಿಷ್ಯರಿಂದ ವಿಶ್ವದ ತುಂಬೆಲ್ಲಾ ಪಸರಿಸಿದರು. ಸಂಗೀತದ ಮೂಲಕ ಶಿವಯೋಗವನ್ನು ಸಾಧಿಸಿ ಶಿವಯೋಗಿಯನಿಸಿದರು. ಅವರ ಲಿಂಗ ಪೂಜೆ ಸಂಗೀತಯುಕ್ತವಾಗಿರುತಿತ್ತು. ಇಂತಹ ಪೂಜ್ಯರ ಪ್ರೀತಿಗೆ ಪಾತ್ರರಾದ ದಾವಣಗೆರೆ ಭಕ್ತರೇ ಧನ್ಯರು ಎಂದು ವೇ. ಚನ್ನವೀರ ಸ್ವಾಮಿ ಹಿರೇಮಠ, (ಕಡಣಿ) ಸಂಸ್ಥಾಪಕರು, ಡಾ. ಪಂ. ಪುಟ್ಟರಾಜ ಸೇವಾ ಸಮಿತಿ, ಗದಗ ಇವರು ಹೇಳಿದರು.
ಅವರು ದಿನಾಂಕ, 08 ರಂದು ಬಾನುವಾರ ಸಂಜೆ 6 ಗಂಟೆಗೆ, ದಾವಣಗೆರೆ ನಗರದ ಶ್ರೀಗಂಧ ರೆಸಿಡೆನ್ಸಿಯ 'ಗಿಹನ' ಬ್ಯಾಂಕ್ವೆಟ್ ಹಾಲಿನಲ್ಲಿ, ಗದುಗಿನ ಡಾ. ಪಂ. ಪುಟ್ಟರಾಜ ಸೇವಾ ಸಮಿತಿ, ಮತ್ತು ನಗರದ ಶ್ರೀಗಂಧ ರೆಸಿಡೆನ್ಸಿ, ಸಂಯುಕ್ತವಾಗಿ ಆಯೋಜಿಸಲಾಗಿದ್ದ ಪದ್ಮಭೂಷಣ ಡಾ. ಪಂ. ಪುಟ್ಟರಾಜರ 112ನೆಯ ಜಯಂತಿ ಹಾಗೂ ಪುಟ್ಟರಾಜರ ಮಾಸದ ನೆನಪು ಸಂಗೀತ ಶ್ರೀಗಂಧ ಮಾಸಿಕ ಕಾರ್ಯಕ್ರಮದ ಸಮ್ಮುಖವನ್ನು ವಹಿಸಿಕೊಂಡು ಮಾತನಾಡಿದರು.

ಬಿಜೆಪಿ ಸುಳ್ಳು ಕೇಸ್ ಗಳನ್ನು ಹಾಕಿ ಬಗೆಬಗೆಯ ಕಿರುಕಳ ನೀಡಿದ್ದಾರೆ

ವಿಸ್ಮಯವಾಣಿ ಸುದ್ದಿ ಬೆಂಗಳೂರು: ಕೆಪಿಸಿಸಿ ಅಧ್ಯಕ್ಷರಾಗಿ 6 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿರುವ ಉಪಮುಖ್ಯಮಂತ್ರಿ, ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದಿಸಿದ್ದಾರೆ.
ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಮುಖ್ಯಮಂತ್ರಿ, ಶಿವಕುಮಾರ್ ಅವರ ಸಂಘಟನಾ ಚಾತುರ್ಯ, ಸೈದ್ಧಾಂತಿಕ ಬದ್ಧತೆ ಮತ್ತು ಕಠಿಣ ಶ್ರಮ ನಮ್ಮ ಪಕ್ಷದ ಎಲ್ಲ ಯುವನಾಯಕರಿಗೆ ಮಾದರಿಯಾದುದು ಎಂದಿದ್ದಾರೆ. ವಿರೋಧ ಪಕ್ಷವಾದ ಬಿಜೆಪಿ ಸುಳ್ಳು ಕೇಸ್ ಗಳನ್ನು ಹಾಕಿ ಬಗೆಬಗೆಯ ಕಿರುಕಳ ನೀಡಿದರೂ ಶಿವಕುಮಾರ್ ಅವರು ಮಣಿಯದೆ ಪಕ್ಷಕ್ಕೆ ನಿಷ್ಠರಾಗಿ ಉಳಿದಿರುವುದು ಕಾಂಗ್ರೆಸ್ ಪಕ್ಷದ ಬಗ್ಗೆ ಅವರಲ್ಲಿರುವ ರಾಜಿಯಿಲ್ಲದ ನಿಷ್ಠೆಗೆ ಸಾಕ್ಷಿಯಾಗಿದೆ. ಇದು ಕಾಂಗ್ರೆಸ್ ಪಕ್ಷದ ಲಕ್ಷಾಂತರ ಕಾರ್ಯಕರ್ತರಿಗೆ ಸ್ಫೂರ್ತಿದಾಯಕ ನಡವಳಿಕೆ ಆಗಿದೆ ಎಂದು ಶ್ಲಾಘಿಸಿದ್ದಾರೆ.
ಕೋಮುವಾದಿ ಶಕ್ತಿಗಳನ್ನು ಸೋಲಿಸಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಪಕ್ಷದ ನಾಯಕರು ಮತ್ತು ಕಾರ್ಯಕರ್ತರ ಜೊತೆಯಲ್ಲಿ ಡಿ.ಕೆ. ಶಿವಕುಮಾರ್ ಹಗಲಿರುಳು ದುಡಿದಿದ್ದಾರೆ.ನನಗಿಂತ ಕಿರಿಯರಾದ ಶಿವಕುಮಾರ್ ಅವರಿಗೆ ಉಜ್ವಲವಾದ ರಾಜಕೀಯ ಭವಿಷ್ಯವಿದೆ. 2028ರಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕು ಎನ್ನುವುದು ನಮ್ಮೆಲ್ಲರ ಬಯಕೆಯಾಗಿದೆ. ಇದಕ್ಕಾಗಿ ನಡೆಯುವ ಪಕ್ಷದ ಸಂಘಟನೆ ಮತ್ತು ಹೋರಾಟದಲ್ಲಿ ನಾನು ಕೂಡಾ ಜೊತೆಯಿರುತ್ತೇನೆ ಎಂದು ಹೇಳಿದ್ದಾರೆ.
ಈ ಮೂಲಕ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷೆಯಲ್ಲಿರುವ ಡಿಕೆ ಶಿವಕುಮಾರ್ ಅವರಿಗೆ ಈ ಬಾರಿ ಮುಖ್ಯಮಂತ್ರಿ ಪಟ್ಟ ಇಲ್ಲ. 2028ರಲ್ಲಿ ಸಿಗಬಹುದು ಎಂಬುದನ್ನು ಸೂಚ್ಯವಾಗಿ ಸಿದ್ದರಾಮಯ್ಯ ಹೇಳಿದ್ದಾರೆ.



ಹಾಸನ ಜಿಲ್ಲೆ ಕೌಶಿಕ ಗ್ರಾಮದ ಕೊಳವೆ ಬಾವಿ ನೀರು ಪರೀಕ್ಷೆಗೆ ಖಂಡ್ರೆ ಸೂಚನೆ

ವಿಸ್ಮಯವಾಣಿ ಸುದ್ದಿ ಬೆಂಗಳೂರು: ಹಾಸನ ಜಿಲ್ಲೆಯ ಕೌಶಿಕ ಗ್ರಾಮದ ಅಂತರ್ಜಲ ಕೈಗಾರಿಕಾ ತ್ಯಾಜ್ಯದಿಂದ ಕಲುಷಿತವಾಗಿದ್ದರೆ, ಕೇಂದ್ರದಿಂದ ತಂಡ ಕಳಿಸಿ ಮತ್ತೊಮ್ಮೆ ಪರಿಶೀಲನೆ ನಡೆಸಿ, ನ್ಯೂನತೆ ಇದ್ದರೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ವಿಧಾನಪರಿಷತ್ತಿಗಿಂದು ತಿಳಿಸಿದ್ದಾರೆ. ಪ್ರಶ್ನೋತ್ತರ ಕಲಾಪದಲ್ಲಿ ಸೂರಜ್ ರೇವಣ್ಣ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕೌಶಿಕ ಗ್ರಾಮಸ್ಥರಿಂದ ಕೊಳವೆ ಬಾವಿಗಳಿಗೆ ಕೈಗಾರಿಕಾ ತ್ಯಾಜ್ಯ ಬಿಡುತ್ತಿರುವ ಬಗ್ಗೆ ದೂರು ಸ್ವೀಕೃತವಾಗಿಲ್ಲ ಎಂದರು. ಕೌಶಿಕ ಗ್ರಾಮದಿಂದ 2 ಕಿ.ಮೀ. ದೂರದಲ್ಲಿರುವ ಕೆ.ಐ.ಎ.ಡಿ.ಬಿ. ಕೈಗಾರಿಕಾ ಪ್ರದೇಶದಲ್ಲಿ ಕೆಲವು ಕೈಗಾರಿಕೆಗಳು ಮಂಡಳಿಯಿಂದ ಸಮ್ಮತಿ ಪತ್ರ ಪಡೆದು ಕಾರ್ಯನಿರ್ವಹಿಸುತ್ತಿವೆ. ವರದಿ ಪ್ರಕಾರ ಕೊಳವೆ ಬಾವಿಗಳ ನೀರು ಕಲುಷಿತವಾಗಿರುವುದಿಲ್ಲ ಮತ್ತು ಕುಡಿಯುವ ನೀರಿನ ಗುಣಮಟ್ಟಕ್ಕೆ ಅನುಮತಿಸಿದ ಮಿತಿಯೊಳಗಿದೆ ಎಂದು ತಿಳಿಸಿದರು.
ನೀರಿನ ಪರೀಕ್ಷೆಗೆ ಖಂಡ್ರೆ ಸೂಚನೆ: ಸೂರಜ್ ರೇವಣ್ಣ ಅವರು ಬಾಟಲಿಯಲ್ಲಿ ತಂದಿದ್ದ ನೀರನ್ನು ಸದನದಲ್ಲಿ ಪ್ರದರ್ಶಿಸಿದರು. ನಂತರ ಆ ನೀರಿನ ಬಾಟಲಿಯನ್ನು ಪಡೆದುಕೊಂಡ ಸಚಿವರು, ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳಿಗೆ ನೀರಿನ ಗುಣಮಟ್ಟ ಪರೀಕ್ಷಿಸಿ 3 ದಿನಗಳ ಒಳಗಾಗಿ ವರದಿ ನೀಡುವಂತೆ ಸೂಚಿಸಿದರು.

ವಾಣಿಜ್ಯ ಬಳಕೆಯ ಸಿಲಿಂಡರ್ ಕೊರತೆ: ಕೇಂದ್ರಕ್ಕೆ ಪತ್ರ ಬರೆದ ಸಿಎಂ ಸಿದ್ದರಾಮಯ್ಯ

ವಿಸ್ಮಯವಾಣಿ ಸುದ್ದಿ ಬೆಂಗಳೂರು: ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಪೂರೈಕೆ ಸ್ಥಗಿತಗೊಂಡಿದ್ದರಿಂದ ಬೆಂಗಳೂರು ಮಹಾನಗರದಲ್ಲಿ ಹೋಟೆಲ್, ರೆಸ್ಟೋರೆಂಟ್, ಕೆಟರಿಂಗ್‌ಗಳಿಗೆ ತೊಂದರೆಯಾಗುತ್ತಿದೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಅವರಿಗೆ ಬರೆದ ಪತ್ರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕಳವಳ ವ್ಯಕ್ತಪಡಿಸಿದ್ದಾರೆ.
ಈಗ ತಲೆದೋರಿರುವ ಸಮಸ್ಯೆಗೆ ತಕ್ಷಣ ಪರಿಹಾರ ಸೂಚಿಸುವಂತೆ ಸಚಿವರಿಗೆ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ.
'ತೈಲ ಮಾರುಕಟ್ಟೆ ಕಂಪನಿಗಳು ಪೂರೈಸುವ ಎಲ್‌ಪಿಜಿಯನ್ನು ಕೇವಲ ಗೃಹ ಬಳಕೆದಾರರಿಗೆ ಮಾತ್ರ ಮಾರಾಟ ಮಾಡಬೇಕೆಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಆದೇಶಿಸಿದೆ. ದೇಶದ ಪ್ರತಿ ಮನೆಗಳಿಗೆ ಅಡೆತಡೆಯಿಲ್ಲದೆ ಅಡುಗೆ ಅನಿಲ ಪೂರೈಕೆ ಮಾಡಬೇಕೆಂಬುದು ಈ ಆದೇಶದ ಹಿಂದಿನ ಉದ್ದೇಶವಾದರೂ, ಇದರ ಅನುಷ್ಠಾನದಿಂದಾಗಿ ಬೆಂಗಳೂರಿನಲ್ಲಿ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಕೊರತೆಯಾಗಿದೆ' ಎಂದು ಅವರು ಪತ್ರದಲ್ಲಿ ವಿವರಿಸಿದ್ದಾರೆ.
'ವಾಣಿಜ್ಯ ಬಳಕೆಯ ಸಿಲಿಂಡರ್ ಪಡೆಯಲು ಸಾಧ್ಯವಾಗುತ್ತಿಲ್ಲ ಎಂದು ಹೋಟೆಲ್ ಮತ್ತು ರೆಸ್ಟೋರೆಂಟ್ ಸಂಘಗಳು ವರದಿ ಮಾಡಿವೆ. ಸಿಲಿಂಡರ್ ಪೂರೈಕೆ ಶೀಘ್ರವಾಗಿ ಪುನರಾರಂಭಗೊಳ್ಳದಿದ್ದರೆ ಅನೇಕ ಹೋಟೆಲ್‌ಗಳು ತಮ್ಮ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಬೇಕಾಗಬಹುದು ಎಂಬ ಆತಂಕವನ್ನೂ ವ್ಯಕ್ತಪಡಿಸಿವೆ' ಎಂದಿದ್ದಾರೆ.
'ರಾಜ್ಯದಲ್ಲಿ ವಾಣಿಜ್ಯ ಬಳಕೆಯ ಸಿಲಿಂಡರ್ ಬೇಡಿಕೆಯು ಸಾಂಪ್ರದಾಯಿಕವಾಗಿ ಐಒಸಿಎಲ್, ಎಚ್‌ಪಿಸಿಎಲ್, ಮತ್ತು ಬಿಪಿಸಿಎಲ್ ಕಂಪನಿಗಳ ಪೂರೈಕೆಯನ್ನು ಅವಲಂಬಿಸಿದೆ.ಈ ಪೂರೈಕೆಯಲ್ಲಿ ದಿಢೀರ್ ಉಂಟಾಗಿರುವ ವ್ಯತ್ಯಯವು ಬೆಂಗಳೂರಿನ ಹೋಟೆಲ್‌ಗಳು, ಕೆಟರಿಂಗ್‌ಗಳ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ' ಎಂದು ಹೇಳಿದ್ದಾರೆ.
'ಪ್ರತಿದಿನ ಊಟಕ್ಕಾಗಿ ಹೋಟೆಲ್ ಮತ್ತು ಮೆಸ್ ಸೌಲಭ್ಯಗಳನ್ನು ಅವಲಂಬಿಸಿರುವ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಮತ್ತು ಉದ್ಯೋಗಿಗಳ ಮೇಲೆಯೂ ಇದು ಪರಿಣಾಮ ಬೀರುತ್ತದೆ. ಇದರ ಜೊತೆಗೆ, ಆಹಾರ ತಯಾರಿಕೆಗಾಗಿ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳನ್ನು ಅವಲಂಬಿಸಿರುವ ಕಲ್ಯಾಣ ಮಂಟಪಗಳು, ವಸತಿ ನಿಲಯಗಳು ಸಹ ಅನಿಶ್ಚಿತತೆಯನ್ನು ಎದುರಿಸುತ್ತಿವೆ. ವಿಶೇಷವಾಗಿ ನಿಗದಿತ ಕಾರ್ಯಕ್ರಮಗಳಿಗೆ ಇದರಿಂದ ತೊಂದರೆಯಾಗುತ್ತಿದೆ' ಎಂದು ಹೇಳಿದ್ದಾರೆ.
'ಬೆಂಗಳೂರಿನಂತಹ ಮಹಾನಗರದಲ್ಲಿ ವಾಣಿಜ್ಯ ಬಳಕೆಯ ಸಿಲಿಂಡರ್ ಮೇಲಿನ ಅವಲಂಬನೆಯ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು, ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ಛತ್ರಗಳು, ಸಮುದಾಯ ಭವನಗಳು ಮತ್ತು ಇತರ ವಾಣಿಜ್ಯ ಸಂಸ್ಥೆಗಳಿಗೆ ಸಾಕಷ್ಟು ಸಿಲಿಂಡರ್ ಪೂರೈಕೆಯಾಗುವುದನ್ನು ನೀವು ಖಚಿತಪಡಿಸಬೇಕು' ಎಂದು ಸಚಿವರಿಗೆ ಮನವಿ ಮಾಡಿದ್ದಾರೆ.

ದೇಶದಲ್ಲಿ LPG ಸಿಲಿಂಡರ್ ಕೊರತೆ: ಧ್ವನಿ ಎತ್ತದ ಬಿಜೆಪಿ ಸಂಸದರ ವಿರುದ್ಧ ಡಿಸಿಎಂ ಡಿಕೆ ಶಿವಕುಮಾರ್ ಕಿಡಿ!

ವಿಸ್ಮಯವಾಣಿ ಸುದ್ದಿ ಬೆಂಗಳೂರು: ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ಪೂರೈಕೆಯಲ್ಲಿ ಉಂಟಾಗಿರುವ ತೀವ್ರ ವ್ಯತ್ಯಯ ಸುಧಾರಣೆಯಾಗದಿದ್ದಲ್ಲಿ, ಬೆಂಗಳೂರು ಹೋಟೆಲ್‌ಗಳ ಸಂಘವು ನಗರದಾದ್ಯಂತ ಹೋಟೆಲ್‌ಗಳನ್ನು ಬಂದ್ ಮಾಡಲು ತೀರ್ಮಾನಿಸಿದೆ.
ಈ ಮಧ್ಯೆ ಸಿಲಿಂಡರ್ ಕೊರತೆಯು ರಾಜ್ಯದಲ್ಲಿ ಗಂಭೀರ ಕಳವಳಕಾರಿಯಾಗಿದೆ ಎಂದು ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಮಂಗಳವಾರ ಹೇಳಿದ್ದಾರೆ.
ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಶಿವಕುಮಾರ್, ಈ ಸಮಸ್ಯೆ ಕುರಿತು ಸಂಸತ್ತಿನಲ್ಲಿ ಚರ್ಚಿಸಬೇಕು. ಕೊರತೆಯ ಉದ್ಯಮಗಳು ಮತ್ತು ಸಾರ್ವಜನಿಕರ ಮೇಲೆ ಪರಿಣಾಮ ಬೀರುವುದರಿಂದ ಸಂಸತ್ತಿನ ಸದಸ್ಯರು ಈ ವಿಷಯವನ್ನು ಪ್ರಸ್ತಾಪಿಸಬೇಕೆಂದು ಒತ್ತಾಯಿಸಿದರು. ಈ ಬಗ್ಗೆ ಸರ್ಕಾರ ಸಂಸತ್ತಿನಲ್ಲಿ ಚರ್ಚಿಸಬೇಕು. ಅವರು ಇಂದು ಚರ್ಚೆಗೆ ಅವಕಾಶ ನೀಡಬೇಕು. ಇಂದಿನಿಂದ ನಾವು ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಅಡುಗೆ ಅನಿಲ ಸಿಲಿಂಡರ್ ಸಂಗ್ರಹ ಇಲ್ಲ ಎಂದು ಅವರು ಹೇಳಿದರು.
ಹೋಟೆಲ್‌ಗಳಂತಹ ವ್ಯವಹಾರದ ಮೇಲೆ ಎಲ್‌ಪಿಜಿ ಕೊರತೆ ಪರಿಣಾಮ ಬೀರಿದ್ದರೂ ಬಿಜೆಪಿ ಸಂಸದರು ಅದರ ಬಗ್ಗೆ ಮಾತನಾಡುತ್ತಿಲ್ಲ. ಪೂರೈಕೆ ಕೊರತೆಯಿಂದ ಹೋಟೆಲ್ ಮಾಲೀಕರು ಈಗಾಗಲೇ ತಮ್ಮ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸುತ್ತಿದ್ದಾರೆ ಎಂದು ಅವರು ತಿಳಿಸಿದರು.
ಅಡುಗೆ ಅನಿಲ ದರ ಏರಿಕೆ ಹಾಗೂ ಕೊರತೆಯಿಂದಾಗಿ ಈಗ ಜನರು ಪ್ರತಿಭಟನೆಗೆ ಇಳಿದಿದ್ದಾರೆ. ಆದರೆ, ಬಿಜೆಪಿ ಸಂಸದರು ಇದರ ಬಗ್ಗೆ ಮಾತನಾಡುತ್ತಿಲ್ಲ. ಬೇರೆ ಬೇರೆ ವಿಷಯಗಳ ಬಗ್ಗೆ ಸಾಕಷ್ಟು ಮಾತನಾಡುವ ಬಿಜೆಪಿ ಸಂಸದರು ಈಗ ಸಿಲಿಂಡರ್ ಬಗ್ಗೆ ಮೌನ ವಹಿಸಿದ್ದಾರೆ. ತೈಲ ಬೆಲೆ ಏರಿಕೆಯಾಗುತ್ತಿದ್ದಂತೆ ಡೀಸೆಲ್ ಬೆಲೆಯೂ ಇತ್ತೀಚೆಗೆ ಹೆಚ್ಚಾಗಿದ್ದು, ವ್ಯವಹಾರದ ಮತ್ತಷ್ಟು ಪರಿಣಾಮ ಬೀರಿದೆ ಎಂದರು.
ಇಂಧನ ಬೆಲೆ ಏರಿಕೆ ಮತ್ತು ಎಲ್‌ಪಿಜಿ ಸಿಲಿಂಡರ್ ಕೊರತೆಯ ಪರಿಣಾಮ ಆತಿಥ್ಯ ಕ್ಷೇತ್ರದ ಮೇಲೆ ಪರಿಣಾಮ ಬೀರುತ್ತಿದೆ. ಮಾಜಿ ಪ್ರಧಾನಿ ಹೆಚ್ ಡಿ ದೇವೇಗೌಡರು ಕೂಡ ಕರ್ನಾಟಕಕ್ಕೆ ಸಂಬಂಧಿಸಿದ ಕೆಲವು ವಿಷಯಗಳ ಬಗ್ಗೆ ಮಾತನಾಡಿದ್ದು, ಚರ್ಚೆಗೆ ಒತ್ತಾಯಿಸಿದ್ದಾರೆ. ಮೇಕೆದಾಟು, ಎತ್ತಿನಹೊಳೆ ಯೋಜನೆಗಳ ಬಗ್ಗೆ ಮಾತನಾಡುತ್ತಿದ್ದಾರೆ. ಸಂಸತ್ತಿನಲ್ಲಿ ಈಗ ಇಂಧನ ಕೊರತೆ ಬಗ್ಗೆ ಮಾತನಾಡುವಂತೆ ಅವರು ತಮ್ಮ ಪಕ್ಷದ ಸಂಸದರಿಗೆ ನಿರ್ದೇಶನ ನೀಡಲಿ. ಅವರ ವಯಸ್ಸನ್ನು ಪರಿಗಣಿಸಿ ಅವರ ವಿರುದ್ಧ ಮಾತನಾಡಲ್ಲ. ಮೇಕೆದಾಟು ಮತ್ತು ಎತ್ತಿನಹೊಳೆಗೆ ಪರಿಹಾರ ಸೂಚಿಸಲಿ. ಅವರ ಪಕ್ಷದ ಶಾಸಕರು, ಅವರ ಪಕ್ಷ ಏನು ಮಾಡಿದೆ ಎಂಬುದರ ಬಗ್ಗೆ ಮಾತನಾಡಲಿ, ನಾವು ಏನು ಮಾಡಿದ್ದೇವೆ ಎಂಬುದನ್ನು ಹೇಳುತ್ತವೆ ಎಂದು ಶಿವಕುಮಾರ್ ಹೇಳಿದರು.

ಸಹಪಾಠಿ ಹತ್ಯೆಗೈದ ಬಾಲಕ ಪೊಲೀಸರ ಸುಪರ್ದಿಗೆ

ವಿಸ್ಮಯವಾಣಿ ಸುದ್ದಿ ಬಳ್ಳಾರಿ: ಬಳ್ಳಾರಿಯ ಖಾಸಗಿ ವಸತಿ ಶಾಲೆಯಲ್ಲಿ ಸಹಪಾಠಿಗಳ ಮೇಲೆ ಹಲ್ಲೆ ನಡೆಸಿ, ಒಬ್ಬನ ಸಾವಿಗೆ ಕಾರಣವಾದ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನನ್ನು ಪೊಲೀಸರು ಸೋಮವಾರ ತಮ್ಮ ಸುಪರ್ದಿಗೆ ಪಡೆದಿದ್ದಾರೆ.
ಬಾಲಕನು ಹತಾಶೆಯಿಂದ ಈ ಕೃತ್ಯವೆಸಗಿರುವುದು ಗೊತ್ತಾಗಿದೆ. ಆತನನ್ನು ನಗರದ ಶ್ರೀರಾಮಪುರ ಕಾಲೊನಿಯ ರೂಪನಗುಡಿ ರಸ್ತೆಯಲ್ಲಿ ವಶಕ್ಕೆ ಪಡೆಯಲಾಯಿತು ಎಂದು ಪೊಲೀಸ್ ಮೂಲಗಳು ತಿಳಿಸಿವೆ.
ಹಾಸ್ಟೆಲ್ ವಾತಾವರಣ ತನಗೆ ಸಹ್ಯವಾಗಿರಲಿಲ್ಲ ಎಂದು ಬಾಲಕ ಪ್ರಾಥಮಿಕ ವಿಚಾರಣೆ ವೇಳೆ ಹೇಳಿಕೊಂಡಿದ್ದಾನೆ ಎಂದು ಪೊಲೀಸ್ ಮೂಲಗಳು ಮಾಹಿತಿ ನೀಡಿವೆ.
'ಬಾಲಕನ ವಿಚಾರಣೆಯನ್ನು ಅತ್ಯಂತ ಎಚ್ಚರಿಕೆಯಿಂದ ಮಾಡುತ್ತಿದ್ದೇವೆ. ಇದಕ್ಕಾಗಿ ವೈದ್ಯಕೀಯ ತಜ್ಞರು, ಅಧಿಕಾರಿಗಳ ತಂಡ ರಚನೆ ಮಾಡಿಕೊಳ್ಳುತ್ತಿದ್ದೇವೆ. ಇದರಲ್ಲಿ ಪೊಲೀಸರು, ಮಾನಸಿಕ ತಜ್ಞರು, ವೈದ್ಯರು, ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ಇರಲಿದ್ದಾರೆ. ಈ ಬಗ್ಗೆ ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರ (ವಿಮ್ಸ್) ಜತೆಗೆ ಮಾತನಾಡಿದ್ದೇವೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಸುಮನ್ ಡಿ.ಪಿ ತಿಳಿಸಿದರು.
'ಘಟನೆಗೆ ಕಾರಣವೇನು ಎಂಬುದರ ತನಿಖೆ ನಡೆಯುತ್ತಿದೆ. ಶಾಲೆಯವರು ಹಾಸ್ಟೆಲ್‌ಗೆ ಅನುಮತಿ ಪಡೆದಿದ್ದರೇ ಎಂಬುದರ ಬಗ್ಗೆ ಪರಿಶೀಲಿಸಲು ಜಿಲ್ಲಾ ಪಂಚಾಯಿತಿ ಸಿಇಒ ಅವರಿಗೆ ಪತ್ರ ಬರೆಯಲಾಗಿದೆ. ಶಾಲೆಯ ವೈಫಲ್ಯದ ಬಗ್ಗೆಯೂ ತನಿಖೆ ಮಾಡುತ್ತೇವೆ' ಎಂದು ಹೇಳಿದರು.
ಘಟನೆ ಬಳಿಕ ಬಾಲಕ ಬಳ್ಳಾರಿ ನಗರದಲ್ಲೇ ಇದ್ದ. ದೇವಸ್ಥಾನಗಳಲ್ಲಿ ನೀಡುವ ಪ್ರಸಾದ ಸೇವಿಸುತ್ತಾ ಎರಡು ದಿನ ಕಳೆದಿದ್ದ ಎನ್ನಲಾಗಿದೆ.

ಕಾರಾಗೃಹ ಕೈದಿಗಳ ಭೇಟಿಗೆ ಹೊಸ ನಿಯಮ ಜಾರಿ

ವಿಸ್ಮಯವಾಣಿ ಸುದ್ದಿ ಬೆಂಗಳೂರು: ರಾಜ್ಯದ ಬೇರೆ ಬೇರೆ ಕಾರಾಗೃಹಗಳಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಲು, ಕಾರಾಗೃಹದಲ್ಲಿ ಸುಧಾರಣೆ ತರಲು ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯು ಹೊಸ ಮಾರ್ಗಸೂಚಿಗಳನ್ನು ಸೋಮವಾರ ಪ್ರಕಟಿಸಿದೆ. ಹೊಸ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಇಲಾಖೆಯ ಡಿಜಿಪಿ ಅಲೋಕ್ ಕುಮಾರ್ ಅವರು ಜೈಲಿನ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.
ಅಲ್ಲದೇ, ಮಾರ್ಗಸೂಚಿ ಪಾಲನೆ ಮಾಡದ ಅಧಿಕಾರಿಗಳು ಹಾಗೂ ಸಿಬ್ಬಂದಿಯ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಕಬೀರ ವಾಣಿ

ಕಬೀರ್, ಪ್ರೇಮೀ ಢೂಂಢತ್ ಮೈ ಫಿರೂಂ,
ಪ್ರೇಮೀ ಮಿಲಿಯಾ ನ ಕೋಯ್।
ಪ್ರೇಮೀ ಕೋ ಪ್ರೇಮೀ ಮಿಲೇ,
ತಬ್ ವಿಷ್ ಅಮೃತ್ ಹೋಯ್॥

ನಾನು ನಿಜವಾದ ಪ್ರೇಮಿಯನ್ನು (ದೇವರನ್ನು ಪ್ರೀತಿಸುವವರನ್ನು) ಹುಡುಕುತ್ತಾ ಜಗತ್ತಿನಲ್ಲೆಲ್ಲಾ ಅಲೆದೆ, ಆದರೆ ನನಗೆ ಯಾರೂ ಸಿಗಲಿಲ್ಲ. ಯಾವಾಗ ಒಬ್ಬ ನಿಜವಾದ ಪ್ರೇಮಿಗೆ ಇನ್ನೊಬ್ಬ ಪ್ರೇಮಿ ಸಿಗುತ್ತಾನೋ (ಅಂದರೆ ಜೀವಾತ್ಮ ಮತ್ತು ಪರಮಾತ್ಮನ ಮಿಲನ), ಆಗ ಎಲ್ಲಾ ವಿಷವೂ (ದುಃಖ) ಅಮೃತವಾಗಿ (ಸಂತೋಷ) ಬದಲಾಗುತ್ತದೆ.

ವಿಸ್ಮಯ ಸುದ್ದಿ

ಮೊಬೈಲ್ ನೋಡುತ್ತಾ ಊಟ ಮಾಡಿದರೆ ಏನಾಗುತ್ತದೆ ಗೊತ್ತಾ?

ಮಕ್ಕಳು ಮಾತ್ರವಲ್ಲ ದೊಡ್ಡವರು ಸಹ ಊಟ ಮಾಡುವಾಗ ಮೊಬೈಲ್ ನೋಡುತ್ತಾರೆ. ಈ ರೀತಿ ಊಟ ಮಾಡುವಾಗ ಮೊಬೈಲ್ ಅಥವಾ ಟಿವಿ ನೋಡೋದು ಒಳ್ಳೆಯ ಅಭ್ಯಾಸ ಅಲ್ಲವಂತೆ, ಇದರಿಂದ ಸಾಕಷ್ಟು ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ನೀವು ಕೂಡ ಹೀಗೆ ಊಟ ಮಾಡುವ ಸಂದರ್ಭದಲ್ಲಿ ಮೊಬೈಲ್ ನೋಡ್ತೀರಾ? ಹಾಗಿದ್ರೆ ಈ ಒಂದು ಅಭ್ಯಾಸ ಆರೋಗ್ಯದ ಮೇಲೆ ಏನೆಲ್ಲಾ ಪರಿಣಾಮಗಳನ್ನು ಬೀರುತ್ತದೆ ಎಂಬುದನ್ನು ನೋಡಿ. ಊಟ ಮಾಡುವಾಗ ಗಮನ ಆಹಾರದ ಮೇಲೆ ಇರಬೇಕು, ಊಟವನ್ನು ಆನಂದಿಸಿ ನಿಧಾನವಾಗಿ ತಿನ್ನಬೇಕು ಇದರಿಂದ ಆರೋಗ್ಯವೂ (ೃಜಚಿಟಣು) ತುಂಬಾ ಚೆನ್ನಾಗಿರುತ್ತದೆ ಎಂದು ಹೇಳಲಾಗುತ್ತದೆ. ಹಿಂದಿನ ಕಾಲದಲ್ಲಿ ನಮ್ಮ ಹಿರಿಯರು ಇದೇ ರೀತಿ ಊಟ ಮಾಡ್ತಿದ್ರು. ಆದ್ರೆ ಇಂದು ಪುಟ್ಟ ಮಕ್ಕಳಿಂದ ಹಿಡಿದು ದೊಡ್ಡವರವರೆಗೆ ಬಹುತೇಕ ಎಲ್ಲರೂ ಊಟ ಮಾಡುವಾಗ ಟಿವಿ, ಮೊಬೈಲ್ ನೋಡೇ ನೋಡುತ್ತಾರೆ. ಹೀಗೆ ಮೊಬೈಲ್ ನೋಡುತ್ತಾ ಊಟ ಮಾಡುವ ಅಭ್ಯಾಸ ಆರೋಗ್ಯದ ಮೇಲೆ ಗಂಭೀರ ಪರಿಣಾಮವನ್ನು ಉಂಟು ಮಾಡುತ್ತದಂತೆ. ನೀವು ಕೂಡ ಇದೇ ಸೋಷಿಯಲ್ ಮೀಡಿಯಾದಲ್ಲಿ ರೀಲ್ಸ್, ವಿಡಿಯೋ ಸ್ಕ್ರೋಲ್ ಮಾಡುತ್ತಾ ಊಟ ಮಾಡ್ತೀರಾ? ಈ ಅಭ್ಯಾಸ ನಿಮ್ಮ ಮೇಲೆ ಏನೆಲ್ಲಾ ಪರಿಣಾಮವನ್ನು ಬೀರುತ್ತದೆ ಎಂಬುದನ್ನು ತಪ್ಪದೆ ತಿಳಿಯಿರಿ.
ಊಟ ಮಾಡುವಾಗ ಮೊಬೈಲ್ ನೋಡುವುದರಿಂದ ಏನಾಗುತ್ತದೆ?
ಬೊಜ್ಜು ಹೆಚ್ಚಾಗಬಹುದು: ಊಟ ಮಾಡುವಾಗ ಟಿವಿ ನೋಡುವುದು ಅಥವಾ ಮೊಬೈಲ್ ಫೋನ್ ನೋಡುವುದರಿಂದ ನಮ್ಮ ಆಹಾರದಿಂದ ಗಮನ ಬೇರೆಡೆಗೆ ಸೆಳೆಯುತ್ತದೆ.

8 ತಾಸು ವಿದ್ಯುತ್ ಗೆ ಒತ್ತಾಯಿಸಿ ಮಾ.12 ರಂದು ಪ್ರತಿಭಟನೆ

ವಿಸ್ಮಯವಾಣಿ ಸುದ್ದಿ ಜಗಳೂರು: ಹಗಲು ವೇಳೆ 8 ತಾಸು ವಿದ್ಯುತ್ ಗೆ ಒತ್ತಾಯಿಸಿ ಮಾ.12 ರಂದು ಪ್ರತಿಭಟನೆ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘ (ಹುಚ್ಚವ್ವನಹಳ್ಳಿ ಮಂಜುನಾಥ್ ಬಣದ) ತಾಲೂಕು ಪ್ರಧಾನ ಕಾರ್ಯರ್ಶಿ ರಾಜು ಹೇಳಿದರು.

ಪಟ್ಟಣದ ವಿದ್ಯಾನಗರದಲ್ಲಿರುವ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ತಾಲೂಕಿನಲ್ಲಿ ವಿದ್ಯುತ್ ಸಮಸ್ಯೆ ಹೆಚ್ಚಾಗಿದ್ದು, ರೈತರು ಕಂಗಾಲಾಗಿದ್ದಾರೆ. ದಿನನಿತ್ಯ 7 ತಾಸು ನೀಡುತ್ತಿದ್ದ ವಿದ್ಯುತ್ ಹಲವು ದಿನಗಳಿಂದ ರಾತ್ರಿ 2.30 ತಾಸು, ಹಗಲು 2.30 ತಾಸು ಒಟ್ಟು 5 ತಾಸು ವಿದ್ಯುತ್ ನೀಡುತ್ತಿದ್ದು, ಇದರಿಂದ ರೈತರು ತಮ್ಮ ಜಮೀನುಗಳಲ್ಲಿ ತೋಟಗಳನ್ನು ಉಳಿಸಿಕೊಳ್ಳಲು ಕಷ್ಟವಾಗುತ್ತಿದೆ, ಆದ್ದರಿಂದ ನಿತ್ಯ 8 ತಾಸು ವಿದ್ಯುತ್ ನೀಡಬೇಕು ಎಂದು ಒತ್ತಾಯಿಸಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಮಾ.12 ರಂದು ಬೆಳ್ಳಿಗೆ 11 ಗಂಟೆಗೆ ಪ್ರವಾಸಿ ಮಂದಿರದಿಂದ ಬೇಸ್ಕಾಂ ಕಛೇರಿವರೆಗೆ ಮೆರವಣಿಗೆ ಮೂಲಕ ತೆರಳಿ ಕಛೇರಿಗೆ ಮುತ್ತಿಗೆ ಹಾಕಲಾಗುವುದು. ತಾಲೂಕಿನ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಸೊಕ್ಕೆ ಹೋಬಳಿ ಅಧ್ಯಕ್ಷ ತಿಪ್ಪೇಸ್ವಾಮಿ, ಕಾರ್ಯದರ್ಶಿ ಪರಶುರಾಮಪ್ಪ, ಮಲ್ಲಣ್ಣ, ಹಾಲೇಶ್, ರಂಗಾಪುರ ನಿಂಗಪ್ಪ ಸೇರಿದಂತೆ ಮತ್ತಿತರರು ಹಾಜರಿದ್ದರು.

ಮಹಿಳೆಯರು ಇತಿಹಾಸ ನಿರ್ಮಿಸುತ್ತಿದ್ದಾರೆ : ಬಿಜೆಪಿ ಮುಖಂಡ ಕೆ.ಎಸ್.ಈಶ್ವರಪ್ಪ

ವಿಸ್ಮಯವಾಣಿ ಸುದ್ದಿ ಶಿವಮೊಗ್ಗ: ಪ್ರತಿ ಕ್ಷೇತ್ರದಲ್ಲೂ ಮಹಿಳೆಯರು ಯಶಸ್ವಿಯಾಗಿ ಮುನ್ನಡೆಯುತ್ತ ಇತಿಹಾಸ ನಿರ್ಮಿಸುತ್ತಿದ್ದಾರೆ ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಹೇಳಿದರು.ನವುಲೆಯ ರೋಟರಿ ರಿವರ್ ಸೈಡ್ ಸಭಾಂಗಣದಲ್ಲಿ ಮಲೆನಾಡು ಮಲ್ಲಿಗೆ ವೇದಿಕೆ ಶಿವಮೊಗ್ಗ, ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ಇಲಾಖೆ, ನೌಕರರ ಸಂಘ ತಾಲೂಕು ಘಟಕ ಶಿಕಾರಿಪುರ ಮತ್ತು ಜಿಲ್ಲಾ ಘಟಕ ಶಿವಮೊಗ್ಗ, ರೋಟರಿ ಕ್ಲಬ್ ನವಲೆ ಸಹಯೋಗದೊಂದಿಗೆ ಏರ್ಪಡಿಸಿದ್ದ ವಿಶ್ವ ಮಹಿಳಾ ದಿನಾಚರಣೆ ಹಾಗೂ ಸಾಹಿತ್ಯ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿ, ಮಹಿಳೆಯರ ಸಮರ್ಪಣೆ ಮತ್ತು ಕಠಿಣ ಪರಿಶ್ರಮ ಬಲಿಷ್ಠ ಮತ್ತು ಅದ್ಭುತ ಎಂದು ತಿಳಿಸಿದರು.ಮಲೆನಾಡು ಮಲ್ಲಿಗೆ ವೇದಿಕೆ ಶಿವಮೊಗ್ಗ ಮುಖ್ಯಸ್ಥೆ ಆಶಾ ರಾಣಿ ಮಾತನಾಡಿ, ನಿಮ್ಮ ಶಕ್ತಿ, ಧೈರ್ಯ ಮತ್ತು ಬುದ್ಧಿವಂತಿಕೆಯು ನಿಮ್ಮ ಸುತ್ತಲಿನ ಎಲ್ಲರಿಗೂ ಸ್ಫೂರ್ತಿ ನೀಡುತ್ತಲೇ ಇರಬೇಕು. ಮಹಿಳೆಯ ದೃಢಸಂಕಲ್ಪವು ಯಾವುದೇ ಸವಾಲನ್ನು ಜಯಿಸಬಹುದು. ಪ್ರತಿಯೊಬ್ಬ ಯಶಸ್ವಿ ಮಹಿಳೆಯ ಹಿಂದೆ ಆಕೆಯ ಸ್ವಂತ ದೃಢಸಂಕಲ್ಪವಿದೆ ಎಂದರು.

ಇಸಿಒ ಶಶಿರೇಖಾ ಮಾತನಾಡಿ, ಬೇರೆ ಯಾರೂ ನಂಬದಿದ್ದಾಗ ನೀವು ನಿಮ್ಮ ಮೇಲೆ ನಂಬಿಕೆ ಇಡಬೇಕು. ಎಂದು ತಿಳಿಸಿದರು.

ಅಹಮದೀಯ ಮುಸ್ಲಿಂ ಮಹಿಳಾ ಸಂಘಟನೆ ರಿಜ್ವಾನ್ ಸಿದ್ದಿಕ್ಕಿ ಮಾತನಾಡಿ, ಮನೆಯಲ್ಲಿ ಶಾಂತಿ ಸಮೃದ್ಧಿಯನ್ನು ಸ್ಥಾಪಿಸುವುದು ಮಹಿಳೆಯರಿಂದ ಮಾತ್ರ ಸಾಧ್ಯ. ಭವಿಷ್ಯವು ಮಹಿಳೆಯದ್ದಾಗಿದೆ. ದೊಡ್ಡ ಕನಸು ಕಾಣಿರಿ ಎಂದರು.

ಲೆಕ್ಕ ಪರಿಶೋಧಕ ಆರ್.ಮನೋಹರ ಮಾತನಾಡಿ, ವಿವಿಧ ಕ್ಷೇತ್ರಗಳಲ್ಲಿ ಯಶಸ್ಸು ಸಾಧಿಸಿದ ಮಹಿಳೆಯರು ಇತರ ಮಹಿಳೆಯರಿಗೂ ಮಾರ್ಗದರ್ಶನ ನೀಡಿ ಪ್ರೋತ್ಸಾಹಿಸಬೇಕು ಎಂದು ಹೇಳಿದರು.

ಸಮಾಜ ಸೇವಕ ಕೆ.ಇ.ಕಾಂತೇಶ್ ಅವರು ಅಹಮದೀಯ ಮುಸ್ಲಿಂ ಮಹಿಳಾ ಸಂಘಟನೆ ಅವರು ಕೊಡುಗೆಯಾಗಿ ನೀಡಿದ ಪೋಡಿಯಂಅನ್ನು ಅಬ್ಬಲಗೆರೆ ಸರ್ಕಾರಿ ಶಾಲೆಗೇ ಹಸ್ತಾಂತರಿಸಿದರು.

ಜಯಮ್ಮ, ಶಿವಮೂರ್ತಿ, ಶಿವಶಂಕರ, ಗುಡ್ಡದಯ್ಯ, ಮಲೆನಾಡು ಮಲ್ಲಿಗೆ ವೇದಿಕೆಯ ತ್ರಿವೇಣಿ, ಪೂರ್ಣಿಮಾ, ನಾಗರತ್ನ, ಶೋಭಾ, ಹರೀಶ್ ಇತರರಿದ್ದರು.

ಸುದ್ದಿ ಚೂರು

ವಿಸ್ಮಯವಾಣಿ ಸುದ್ದಿ ; ಶರಾವತಿ ಪಂಪ್ಡ್ ಸ್ಟೋರೇಜಿಯೋಜನೆ ವಿರೋಧಿಸಿ ಬರುವ ಮಾರ್ಚ್ 24 ರಂದು ಹಮ್ಮಿಕೊಂಡಿರುವ ಬೃಹತ್ ಅಹೋರಾತ್ರಿ ಧರಣಿ ಪ್ರಯುಕ್ತ ರಾಷ್ಟ್ರ ಭಕ್ತ ಬಳಗದಿಂದ ಮಾಜಿ ಉಪಮುಖ್ಯಮಂತ್ರಿ ಶ್ರೀ ಕೆ.ಎಸ್. ಈಶ್ವರಪ್ಪ ಅವರ ನೇತೃತ್ವದಲ್ಲಿ ಇಂದು ಪೂರ್ವಭಾವಿ ಸಭೆ ನಿವಾಸದ ಆವರಣದಲ್ಲಿ ನಡೆಸಲಾಯಿತು. ... ಶಿವಮೊಗ್ಗದ 35 ವಾರ್ಡ್ ಗಳಿಂದ 200 ಕ್ಕೂ ಮೇಲ್ಪಟ್ಟು ರಾಷ್ಟ್ರ ಭಕ್ತ ಕಾರ್ಯಕರ್ತರು ಸಭೆಯಲ್ಲಿ ಪಾಲ್ಗೊಂಡಿದ್ದರು. ...

ಈ ಸಂದರ್ಭದಲ್ಲಿ ಪ್ರಮುಖರಾದ ಮಹಾನಗರ ಪಾಲಿಕೆ ಮಾಜಿ ಸದಸ್ಯ ವಿಶ್ವಾಸ್ ಶ್ರೀಕಾಂತ್ ,ಜಾಧವ್ , ಬಾಲು , ಶಿವಾಜಿ ಮತ್ತು ಇನ್ನಿತರು ಉಪಸ್ಥಿತರಿದ್ದರು.

ಕಥೆಗಳು ಕಣ್ಮರೆಯಾಗುತ್ತಿದೆ – ಡಾ. ವಿಜಯಾದೇವಿ

ವಿಸ್ಮಯವಾಣಿ ಸುದ್ದಿ ಶಿವಮೊಗ್ಗ: ಈ ಹೊತ್ತಿಗೆ ಮಕ್ಕಳಿಂದ ಹಿಡಿದು ಎಲ್ಲರಲ್ಲೂ ನೈತಿಕತೆ ಪ್ರಜ್ಞೆ ಮೂಡಲು ಕಥೆಗಳು ಸಹಾಯಕವಾಗಿವೆ. ಆಧುನಿಕತೆಯಲ್ಲಿ ಕಣ್ಮರೆಯಾಗುತ್ತಿರುವುದು ದುರಂತಕ್ಕೆ ಕಾರಣವಾಗುತ್ತಿದೆ. ಎಂದು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಎಮಿರೇಟ್ಸ್ ಪ್ರಾಧ್ಯಾಪಕರಾದ ಡಾ. ವಿಜಯ ದೇವಿ ಹೇಳಿದರು. ಅವರು ಇಂದು ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಭದ್ರಾವತಿ ಆಕಾಶವಾಣಿ ಕೇಂದ್ರದ ಕೇಳುಗರ ಬಳಗ, ರೇಣುಕಪ್ಪಗೌಡ ಪ್ರತಿಷ್ಠಾನ, ಜಿಲ್ಲಾ ಸರ್ವೋದಯ ಮಂಡಲ, ಕಾಲೇಜಿನ ಕನ್ನಡ ವಿಭಾಗ, ಸಾಂಸ್ಕೃತಿಕ ವೇದಿಕೆ ಸಹಯೋಗದಲ್ಲಿ ಆರ್ ಜೆ ಗಣೇಶ್ ಕೆಂಚನಾಲ್ ಅವರ ಬಾನುಲಿ ಯಿಂದ 'ಕಥೆ ನಿಮ್ಮ ಜೊತೆ' ಪುಸ್ತಕವನ್ನು ಆಕಾಶವಾಣಿ ಕೇಳು ಗರೊಂದಿಗೆ ಬಿಡುಗ-'ಡೆ ಮಾಡಿ ಮಾತನಾಡಿದರು.ಓದುವ ಜಗತ್ತಿನಲ್ಲಿ ಬುದ್ಧಿವಂತಿಕೆ ಮತ್ತು ಮಾನವೀಯತೆಗಳು ಮುಖ್ಯವಾಗುತ್ತವೆ ಎಂದರು. ಮುಖ್ಯ ಅತಿ-ಥಿಯಾಗಿ ಆಗಮಿಸಿದ ಖ್ಯಾತ ಮನೋವೈದ್ಯ ಕೆ.ಎಸ್ ಪವಿತ್ರ ಮಾತನಾಡಿ ಜನಪದರ ಕತೆಗಳು ಮಾನಸಿಕ ಮತ್ತು ಸಾಮಾಜಿಕ ಆರೋಗ್ಯಕ್ಕೆ ಪೂರಕವಾದುದು. ಕೇಳುವುದರ ಮೂಲಕ ಹೊಸದೊಂದು ಸನ್ನಿವೇಶ ತಂದು ಹೇಳಬಹುದು ಆದರೆ ಬರಹ ಸವಾಲಿನದು. ಅದನ್ನು ಗಣೇಶ ಕೆಂಚನಾಲ ಕೇಳುಗರ ಮೂಲಕ ಸಾಧ್ಯವಾಗಿಸಿದ್ದಾರೆ ಎಂದರು. ಯುವಜನತೆ ಒಳ್ಳೆಯದನ್ನು ಕೇಳುವ, ನೋಡುವ, ಓದುವ ಕೆಲಸದಲ್ಲಿ ನಿರತರಾಗಬೇಕು ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಶಶಿಧರ ಎಸ್ ವಹಿಸಿದ್ದರು. ಕುವೆಂಪು ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರಾದ ಬಸವರಾಜ ನೆಲ್ಲಿಸರ, ಕೇಳುಗ ಬಳಗದ ಸಂಚಾಲಕರಾದ ವಿಜಯಕುಮಾರ, ಆರ್ ಮನೋಹರ, ಕನ್ನಡ ವಿಭಾಗದ ಮುಖ್ಯಸ್ಥ ರವಿ ಎನ್., ಪ್ರಾಧ್ಯಾಪಕರಾದ ಕೆ.ಪಿ ಪವಿತ್ರ, ಡಾ. ಚಿಕ್ಕ ಹೆಗಡೆ, ಮಂಜುಳ, ಶ್ವೇತ ಉಪಸ್ಥಿತರಿದ್ದರು. ಶ್ರೀಮತಿ ನಂದಿನಿ ನಿರೂಪಿಸಿ, ಡಾ. ಮಂಜುನಾಥ ಪ್ರಾರ್ಥಿಸಿ, ಡಾ. ಅಣ್ಣಪ್ಪ ಎನ್. ಮಳೀಮಠ್ ವಂದಿಸಿದರು.

ಆಕಾಶವಾಣಿ ಆರ್ ಜೆ ಬಳಗ ಸೇರಿದಂತೆ ಆಕಾಶವಾಣಿ ಕೇಳುಗರು, ಸಾಹಿತ್ಯಾಸಕ್ತರು. ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿದ್ದರು.

ರೂಪ್‌ಚಂದ್ ಮೀನು ಸಾಕಾಣಿಕೆಗೆ ಅನುಮತಿ ಕಡ್ಡಾಯ

ವಿಸ್ಮಯವಾಣಿ ಸುದ್ದಿ ಬಳ್ಳಾರಿ : ಜಿಲ್ಲೆಯಲ್ಲಿ ರೂಪ್‌ಚಂದ್ ಮೀನು ಸಾಕಾಣಿಕೆ ಮಾಡಬಯಸುವ ಪ್ರತಿಯೊಬ್ಬ ರೈತರು ಮತ್ತು ಮೀನು ಕೃಷಿಕರು ಮೀನುಗಾರಿಕೆ ಇಲಾಖೆಯಿಂದ ಕಡ್ಡಾಯವಾಗಿ ಅನುಮತಿ ಪಡೆಯಬೇಕು ಎಂದು ಮೀನುಗಾರಿಕೆ ಉಪನಿರ್ದೇಶಕ ಶಿವಣ್ಣ ಅವರು ತಿಳಿಸಿದ್ದಾರೆ.

ಜಿಲ್ಲೆಯ ಸಿರುಗುಪ್ಪ, ಕಂಪ್ಲಿ ಮತ್ತು ಕುರುಗೋಡು ತಾಲ್ಲೂಕುಗಳಲ್ಲಿ ಕೆಲವು ಸ್ಥಳೀಯ, ಆಂಧ್ರ ಮೂಲದ ವ್ಯಕ್ತಿಗಳು ಸರ್ಕಾರಿ, ಪರಂಪೋಕು ಮತ್ತು ಖಾಸಗಿ ಜಮೀನಿನಲ್ಲಿ ಮೀನು ಕೃಷಿ ಕೊಳಗಳನ್ನು ನಿರ್ಮಿಸಿಕೊಂಡು ಅನಧಿಕೃತವಾಗಿ ರೂಪ್ ಚಂದ್ ಜಾತಿಯ ಮೀನು ಸಾಕಾಣಿಕೆ ಮಾಡುತ್ತಿರುವುದು ಮತ್ತು ಕೊಳಗಳಲ್ಲಿ ಚಿಕನ್ ವೇಸ್ಟ್, ಸತ್ತ ಕೋಳಿ, ಕೊಳೆತ ಮೊಟ್ಟೆ, ಮಾಂಸದ ಹೋಟೆಲ್ ಮತ್ತು ಹಾಸ್ಟೆಲ್ ವೇಸ್ಟ್ ಇತ್ಯಾದಿ ನಿಷೇಧಿತ ಆಹಾರ ಪದಾರ್ಥಗಳನ್ನು ಬಳಸುತ್ತಿರುವುದು ಕಂಡುಬಂದಿದೆ. ಈ ಕುರಿತು ಸಾರ್ವಜನಿಕರು ಮತ್ತು ಮೀನುಗಾರಿಕೆ ಸಹಕಾರ ಸಂಘದವರು ದೂರುಗಳನ್ನು ಸಹ ನೀಡಿರುತ್ತಾರೆ ಎಂದು ಅವರು ತಿಳಿಸಿದ್ದಾರೆ.

ಒಂದು ವೇಳೆ ಯಾರಾದರೂ ಮೀನು ಕೃಷಿ ಕೊಳಗಳಲ್ಲಿ ನಿಷೇಧಿತ ಆಹಾರ ಪದಾರ್ಥಗಳನ್ನು ರೂಪ್ ಚಂದ್ ಮೀನುಗಳಿಗೆ ಆಹಾರವನ್ನಾಗಿ ಬಳಸುತ್ತಿರುವುದು ಕಂಡುಬಂದಲ್ಲಿ ಅಂತಹವರ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುವುದು ಎಂದು ಅವರು ಎಚ್ಚರಿಸಿದ್ದಾರೆ.

ಮಾಹಿತಿಗಾಗಿ ಮೊ.9449593156 ಗೆ ಕರೆ ಮಾಡಿ ತಿಳಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿರುಗುಪ್ಪ ನಗರಸಭೆ: ಅರ್ಜಿ ಆಹ್ವಾನ

ವಿಸ್ಮಯವಾಣಿ ಸುದ್ದಿ ಬಳ್ಳಾರಿ ; ಸಿರುಗುಪ್ಪ ನಗರಸಭೆ ವತಿಯಿಂದ 2021-22ನೇ ಸಾಲಿನ ನಗರೋತ್ಥಾನ ಹಂತ-4 ರ ಯೋಜನೆಯಡಿ ಶೇ.05 ರ ಅನುದಾನದಲ್ಲಿ ವಿಶೇಷಚೇತನ ವ್ಯಕ್ತಿಗಳಿಗೆ ವ್ಯಾಪಾರ ನಡೆಸುವುದಕ್ಕಾಗಿ ರೆಡಿಮೆಡ್ ಟಿನ್‌ಶೆಡ್ ವಾಣಿಜ್ಯ ಮಳಿಗೆ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.ಸಿರುಗುಪ್ಪ ನಗರಸಭೆ ವ್ಯಾಪ್ತಿಯಲ್ಲಿ 19 ಜನ ವಿಶೇಷಚೇತನರಿದ್ದು, ಅವರ ಜೀವನೋಪಾಯಕ್ಕಾಗಿ ಸ್ವಯಂ ವ್ಯಾಪಾರ ಮಾಡಿಕೊಳ್ಳಲು ಈ ಸೌಲಭ್ಯ ಕಲ್ಪಿಸಲಾಗುತ್ತಿದ್ದು, ಅರ್ಹರು ಮಾ.16 ರೊಳಗಾಗಿ ಅರ್ಜಿ ಸಿರುಗುಪ್ಪ ನಗರಸಭೆ ಕಚೇರಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ಬೇಕಾದ ದಾಖಲೆ:

ಇತ್ತೀಚಿನ 2-ಭಾವಚಿತ್ರ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ರೇಷನ್ ಕಾರ್ಡ್, ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ಚಾಲ್ತಿ ವರ್ಷದ ಆಸ್ತಿ ತೆರಿಗೆ ಪ್ರತಿ, ಚಾಲ್ತಿ ವರ್ಷದ ನಮೂನೆ-3 ಪ್ರತಿ, ಬ್ಯಾಂಕ್ ಪಾಸ್‌ಬುಕ್ ಪ್ರತಿ, ಅಂಗವಿಕಲತೆಯ ಬಗ್ಗೆ ವೈದ್ಯಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರದ ಪ್ರತಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಸಿರುಗುಪ್ಪ ನಗರಸಭೆ ಕಾರ್ಯಾಲಯಕ್ಕೆ ಸಂಪರ್ಕಿಸಬಹುದು ಎಂದು ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮತದಾರರ ಪಟ್ಟಿ ಮ್ಯಾಪಿಂಗ್: ಮಾರ್ಚ್ 20ರ ಗಡುವು

ವಿಸ್ಮಯವಾಣಿ ಸುದ್ದಿ ಚಿತ್ರದುರ್ಗ ; ಮತದಾರರ ಪಟ್ಟಿಗಳ ಸಮಗ್ರ ಪರಿಷ್ಕರಣೆ (ಎಐಆರ್)-2026ರ ಸಂಬಂಧ ಬಾಕಿ ಇರುವ ಮತದಾರರ ಪಟ್ಟಿಗಳ ಮ್ಯಾಪಿಂಗ್ ಕಾರ್ಯವನ್ನು ಇದೇ ಮಾರ್ಚ್ 20ರೊಳಗಾಗಿ ಶೇ.100ರಷ್ಟು ಪೂರ್ಣಗೊಳಿಸಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸೂಚನೆ ನೀಡಿದ್ದಾರೆ.2002ರ ಮತದಾರರ ಪಟ್ಟಿಗೆ 2025ರ ಮತದಾರರ ಪಟ್ಟಿಯನ್ನು ಮ್ಯಾಪಿಂಗ್ ಮಾಡುವ ಪ್ರಕ್ರಿಯೆಯು ಜಿಲ್ಲೆಯ ಆರು ವಿಧಾನಸಭಾ ಕ್ಷೇತ್ರಗಳಲ್ಲಿ ಈಗಾಗಲೇ ಪ್ರಗತಿಯಲ್ಲಿದೆ. 2025ರ ಸೆಪ್ಟೆಂಬರ್ ಮಾಹೆಯಿಂದ ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಈ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಕೆಲವು ಮತಗಟ್ಟೆ ಮಟ್ಟದ ಅಧಿಕಾರಿಗಳು ಶೇ.50 ರಿಂದ 80ರಷ್ಟು ಪೂರ್ಣಗೊಳಿಸಿದ್ದು, ಇನ್ನೂ ಬಾಕಿ ಇರುವ ಮತದಾರರ ಮ್ಯಾಪಿಂಗ್ ಕಾರ್ಯವನ್ನು ಇದೇ ಮಾರ್ಚ್ 20ರೊಳಗಾಗಿ ಶೇ.100ರಷ್ಟು ಪೂರ್ಣಗೊಳಿಸಬೇಕು.

ಮತದಾರರ ಪಟ್ಟಿಗಳ ಮ್ಯಾಪಿಂಗ್ ಕಾರ್ಯವನ್ನು ಬಾಕಿ ಉಳಿಸಿಕೊಂಡು ನಿರ್ಲಕ್ಷ್ಯ ತೋರುವ ಮತಗಟ್ಟೆ ಮಟ್ಟದ ಅಧಿಕಾರಿಗಳ ವಿರುದ್ಧ ಪ್ರಜಾ ಪ್ರಾತಿನಿಧ್ಯ ಕಾಯ್ದೆಯಡಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ತಿಳಿಸಿದ್ದಾರೆ.

ಜಿಲ್ಲಾ ಮಟ್ಟದ ಬ್ಯಾಂಕರ್ಸ್ ಕಾರ್ಯಾಗಾರದಲ್ಲಿ ಡಿಸಿ ನಾಗೇಂದ್ರ ಪ್ರಸಾದ್.ಕೆ ಖಡಕ್ ಸೂಚನೆ

ವಿಸ್ಮಯವಾಣಿ ಸುದ್ದಿ ಬಳ್ಳಾರಿ ; ಸಾರ್ವಜನಿಕರಿಗೆ ಅರ್ಹತೆ ಮಾನದಂಡಗಳಡಿ ಸಾಲ-ಸೌಲಭ್ಯ ನೀಡಬೇಕು. ಬ್ಯಾಂಕ್ ಸೌಲಭ್ಯ ನೀಡುವಲ್ಲಿ ವಿಳಂಬವಾದಲ್ಲಿ ಆಯಾ ಬ್ಯಾಂಕ್ ವ್ಯವಸ್ಥಾಪಕರ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಹೇಳಿದರು.

ನಗರದ ಜಿಲ್ಲಾ ಪಂಚಾಯತ್ ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಸೋಮವಾರ ಜಿಲ್ಲಾ ಮಟ್ಟದ ಎಲ್ಲಾ ಬ್ಯಾಂಕ್ ವ್ಯವಸ್ಥಾಪಕರಿಗೆ ಆಯೋಜಿಸಿದ್ದ ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ರಾಜ್ಯ ಮತ್ತು ಕೇಂದ್ರ ಸರ್ಕಾರದ ಯೋಜನೆಗಳಡಿ ಸೌಲಭ್ಯ ಪಡೆಯುವಲ್ಲಿ ಬಳ್ಳಾರಿ ಜಿಲ್ಲೆ ಕಡಿಮೆ ಪ್ರಗತಿ ಸಾಧಿಸಿದೆ. ರಾಜ್ಯದ ಇತರೆ ಜಿಲ್ಲೆಗಳು ಹೆಚ್ಚು ಹೆಚ್ಚು ಪ್ರಗತಿ ಸಾಧಿಸುವಲ್ಲಿ ಯಶಸ್ವಿಯಾಗಿವೆ. ಮುಂಬರುವ ದಿನಗಳಲ್ಲಿ ಬಳ್ಳಾರಿ ಜಿಲ್ಲೆಯೂ ಪ್ರಗತಿ ಸಾಧಿಸುವಲ್ಲಿ ಬ್ಯಾಂಕ್ ಗಳ ಸಹಕಾರ ಅತಿ ಅಗತ್ಯವಿದೆ ಎಂದು ಅವರು ತಿಳಿಸಿದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಅವರು ಮಾತನಾಡಿ, ಕೌಶಲ್ಯಾಭಿವೃದ್ಧಿ ಉದ್ಯಮ ಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ರಾಷ್ಟ್ರೀಯ ಜೀವನೋಪಾಯ ಅಭಿಯಾನವನ್ನು ಜಿಲ್ಲೆಯ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯ ನಿವೃತ್ತ ಡಿಜಿಎಂ ಹಾಗೂ ಹೈದರಾಬಾದ್ ಎನ್.ಐ.ಆರ್.ಡಿ.ಪಿ.ಆರ್ ರಾಷ್ಟ್ರ ಸಂಪನ್ಮೂಲ ವ್ಯಕ್ತಿ ಕೊಟಗೇರಿ ಶ್ರೀನಿವಾಸ್ ರಾವ್ ಅವರು ಸ್ವ-ಸಹಾಯ ಗುಂಪಿನ ಮಹಿಳೆಯರಿಗೆ ಉಳಿತಾಯ ಖಾತೆ, ವೈಯಕ್ತಿಕ ಸಾಲ ಮತ್ತು ಗುಂಪು ಸಾಲದ ಕುರಿತು ಬ್ಯಾಂಕ್ ವ್ಯವಸ್ಥಾಪಕರಿಗೆ ಸವಿವರ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಶಶಿಕಾಂತ್ ಶಿವಪುರೆ, ನಬಾರ್ಡ್ ನ ಡಿಡಿಎಂ ಯುವರಾಜ್, ಕೆನರಾ ಬ್ಯಾಂಕ್ ನ ಎಲ್‌ಡಿಎಂ ಗಿರೀಶ್ ಕುಲಕರ್ಣಿ ಸೇರಿದಂತೆ ಎನ್.ಆರ್.ಎಲ್.ಎಂ ಯೋಜನೆಯ ಸಿಬ್ಬಂದಿಗಳು, 180 ಕ್ಕೂ ಹೆಚ್ಚು ಬ್ಯಾಂಕ್ ವ್ಯವಸ್ಥಾಪಕರು, 80 ಕ್ಕೂ ಹೆಚ್ಚು ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟದ ಸಂಪನ್ಮೂಲ ವ್ಯಕ್ತಿಗಳು ಹಾಗೂ ಇತರರು ಹಾಜರಿದ್ದರು.

ಜೋಗ;ಮೆಸ್ಕಾಂ ಜನ ಸಂಪರ್ಕ ಸಭೆ

ವಿಸ್ಮಯವಾಣಿ ಸುದ್ದಿ ಶಿವಮೊಗ್ಗ ; ಜೋಗ ಮೆಸ್ಕಾಂ ಉಪವಿಭಾಗ ಕಛೇರಿಯಲ್ಲಿ ಮಾ.12 ರಂದು ಸಮಯ ಬೆಳಿಗ್ಗೆ 11.00 ರಿಂದ 01.00 ರವರೆಗೆ ಜನ ಸಂಪರ್ಕ ಸಭೆ ನಡೆಯಲಿದೆ. ಈ ಸಭೆಯಲ್ಲಿ ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಲ್ಲಿದ್ದು, ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲುಗಳನ್ನು ಸ್ವೀಕರಿಸುವುದರಿಂದ ಈ ಅವಕಾಶವನ್ನು ಗ್ರಾಹಕರು ಸದುಪಯೋಗಪಡಿಸಿಕೊಳ್ಳುವಂತೆ ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ:.9448289520

ಆಳ್ವಾಸ್ ಸ್ಪರ್ಧೆಯಲ್ಲಿ ಡಿವಿಎಸ್ ಬಿಕಾಂ ವಿದ್ಯಾರ್ಥಿಗಳ ಸಾಧನೆ

ವಿಸ್ಮಯವಾಣಿ ಸುದ್ದಿ ಶಿವಮೊಗ್ಗ: ದೇಶೀಯ ವಿದ್ಯಾಶಾಲಾ ಸಮಿತಿಯ ಡಿವಿಎಸ್ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ಬಿಕಾಂ ವಿದ್ಯಾರ್ಥಿಗಳು ಇತ್ತೀಚೆಗೆ ಮೂಡಬಿದರೆ ಆಳ್ವಾಸ್ ಕಾಲೇಜಿನಲ್ಲಿ ಆಯೋಜಿಸಿದ್ದ ಕ್ಷಿತಿವಂಶ್ ಅಂತರ ಕಾಲೇಜು ಸ್ಪರ್ಧೆಯಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾಗಿದ್ದಾರೆ.

ಪೇಪರ್ ಪ್ರೆಸೆಂಟೇಷನ್, ಫ್ಯಾಷನ್ ವಾಕ್ ಸ್ಪರ್ಧೆಗಳಲ್ಲಿ ಪ್ರಥಮ ಬಹುಮಾನ, ಇಂಗ್ಲಿಷ್ ಡಿಬೇಟ್, ಪ್ಲಾಗಿಂಗ್ ಡ್ರೈವ್, ಗ್ರೂಪ್ ಡ್ಯಾನ್ಸ್ ನಲ್ಲಿ ದ್ವಿತೀಯ ಬಹುಮಾನ ಗಳಿಸಿದ್ದಾರೆ. ದೇಶಿಯ ವಿದ್ಯಾಶಾಲಾ ಸಮಿತಿ ಅಧ್ಯಕ್ಷ ಕೆ.ಬಸಪ್ಪ ಗೌಡ, ಕಾರ್ಯದರ್ಶಿ ಎಸ್.ಪಿ.ದಿನೇಶ್, ಕಾಲೇಜಿನ ಪ್ರಾಂಶುಪಾಲ ಡಾ. ಎಂ.ವೆಂಕಟೇಶ್ ವಿದ್ಯಾರ್ಥಿಗಳಿಗೆ ಅಭಿನಂದಿಸಿದರು. ವಿಭಾಗದ ಮುಖ್ಯಸ್ಥ ರುದ್ರೇಶ.ಸಿ.ಇ., ಪ್ರಾಧ್ಯಾಪಕರಾದ ಡಾ. ಚಂದ್ರಶೇಖರಪ್ಪ.ಯು ಮತ್ತು ಸರ್ವಜ್ಞಮೂರ್ತಿ ಉಪಸ್ಥಿತರಿದ್ದರು.

ಗೌರವ ಧನ ಹೆಚ್ಚಳಕ್ಕೆ ಆಗ್ರಹಿಸಿ ಸರ್ಕಾರಕ್ಕೆ ಮನವಿ

ವಿಸ್ಮಯವಾಣಿ ಸುದ್ದಿ ಬಳ್ಳಾರಿ : ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಗೌರವಧನ ಹೆಚ್ಚಿಸುವಂತೆ ಆಗ್ರಹಿಸಿ ಇಂದು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದರು.

ಫೆಡರೇಷನ್ ನ ಜಿಲ್ಲಾಧ್ಯಕ್ಷೆ ಎಸ್.ಅರ್ಕಾಣಿ ಅವರು ಈ ವೇಳೆ ಮಾತನಾಡಿ, ರಾಜ್ಯ ಸರ್ಕಾರ ಮಂಡಿಸಿರುವ ಇತ್ತೀಚಿನ ಬಜೆಟ್‌ನಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಗೌರವಧನ ಹೆಚ್ಚಳ ಕುರಿತು ಯಾವುದೇ ಘೋಷಣೆ ಮಾಡಿಲ್ಲ. ಕೇವಲ ಸೀರೆ ವಿತರಿಸುವ ಮಾತಾಗಿದೆ. ಇದು ನಿರಾಶೆ ಉಂಟುಮಾಡಿದೆ ಎಂದು ಫೆಡರೇಷನ್ ಸರ್ಕಾರ ನೀಡಿದ ಭರವಸೆಯಂತೆ ಮಾಸಿಕ ರೂ. 15,000 ಗೌರವಧನ ನೀಡುವ ಘೋಷಣೆ ಇನ್ನೂ ಜಾರಿಯಾಗಿಲ್ಲ. 2011 ರಿಂದ ಸೇವೆ ಸಲ್ಲಿಸಿ ನಿವೃತ್ತರಾದ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಗ್ರಾಚ್ಯುಟಿ ಸೌಲಭ್ಯ ನೀಡಲಾಗಿಲ್ಲ. 2020ರ ನಂತರ ನಿವೃತ್ತರಾದವರಿಗೆ ಮಾತ್ರ ಈ ಸೌಲಭ್ಯ ಅನ್ವಯವಾಗುತ್ತಿದೆ. ಇದರಿಂದ ಸಾವಿರಾರು ವಯೋವೃದ್ಧರಿಗೆ ನ್ಯಾಯ ಸಿಗುತ್ತಿಲ್ಲ.

ಈ ಹಿನ್ನೆಲೆಯಲ್ಲಿ ಬಜೆಟ್ ಅಂಗೀಕಾರಗೊಳ್ಳುವ ಮೊದಲು ಸೀರೆ ನೀಡುವ ಪ್ರಸ್ತಾಪವನ್ನು ಕೈಬಿಟ್ಟು ಅದೇ ಅನುದಾನವನ್ನು ಗೌರವಧನ ಹೆಚ್ಚಳಕ್ಕೆ ಬಳಸುವಂತೆ ಫೆಡರೇಷನ್ ಸರ್ಕಾರವನ್ನು ಒತ್ತಾಯಿಸಿದೆ. ಈ ಕುರಿತು ಮಾರ್ಚ್ 7ರಂದು ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು 'ಸೀರೆ ಬೇಡ, ಗೌರವಧನ ಹೆಚ್ಚಿಸಿ' ಎಂಬ ಘೋಷಣೆಗಳೊಂದಿಗೆ ಪ್ರತಿಭಟನೆ ನಡೆಸಿ ಸರ್ಕಾರದ ಗಮನ ಸೆಳೆದಿರುವುದಾಗಿ ಹೇಳಿದರು.

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ ನ ಕಾನೂನು ಸಲಹೆಗಾರರಾದ ಎ.ಆರ್.ಎಂ.ಇಸ್ಮಾಯಿಲ್, ತಾಲೂಕು ಘಟಕದ ಅಧ್ಯಕ್ಷೆ ಇ.ಮಂಗಮ್ಮ, ಪದಾಧಿಕಾರಿಗಳಾದ ರೈಮ್ಮ, ಮೀನಾ, ಇಂದಿರಾ, ವೀರಮ್ಮ ಹಿರೇಮಠ ಮತ್ತಿತರರು ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಆನೆಗೊಂದಿಯಲ್ಲಿ ಶ್ರೀ ವ್ಯಾಸರಾಜರ ಆರಾಧನೆ

ವಿಸ್ಮಯವಾಣಿ ಸುದ್ದಿ ಬಳ್ಳಾರಿ: ಶ್ರೀವ್ಯಾಸರಾಜ ಗುರುಸಾರ್ವಭೌಮರ 487ನೇ ಆರಾಧನಾ ಮಹೋತ್ಸವದ ನಿಮಿತ್ತ ಬಳ್ಳಾರಿ ಶ್ರೀವ್ಯಾಸರಾಜ ಭಜನಾಮಂಡಲಿ ಯ ಸುಮಾರು 70 ಸದಸ್ಯರ ತಂಡದಿಂದ ಆನೆಗುಂದಿ ನವವೃಂದಾವನದಲ್ಲಿ ಮಧ್ಯಾರಾಧನೆಯಂದು "ಶ್ರೀವ್ಯಾಸನಮನ" ಎಂಬ ಎರಡು ತಾಸಿನ ನೃತ್ಯರೂಪಕ ಜರುಗಿತು.

ಶ್ರೀಮತಿ ವಿಜಯಲಕ್ಷ್ಮಿ ಸತ್ಯನಾರಾಯಣರಾವ್ ಇವರ ನೇತೃತ್ವದಲ್ಲಿ ವೈಭವೋಪೂರಿತವಾಗಿ ನೆರವೇರಿಸಿಕೊಟ್ಟರು. ಬಳ್ಳಾರಿ ಶ್ರೀ ವ್ಯಾಸರಾಜ ಮಠದಲ್ಲಿ ಆರಾಧನೆಯ ಪ್ರಯುಕ್ತ ಅಷ್ಟೋತ್ತರ ಪಂಚಾಮೃತಾಭಿಷೇಕ,

ಅಲಂಕಾರ ಬ್ರಾಹ್ಮಣ ಭೋಜನಾದಿಗಳು ಸಂಜೆ ಶ್ರೀ ಸಮೀರಾಚಾರ್ ಅವರ ದಾಸವಾಣಿ ಕಾರ್ಯಕ್ರಮ ಪಂಚಾಂಗ ಬಿಡುಗಡೆ ಸ್ವಸ್ತಿವಾಚನ ಮುಂತಾದ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ವೈಭವೋಪೇತವಾಗಿ ಜರುಗಿದವು. ಅಲ್ಲದೇ ದ ವರ್ಲ್ಡ್ ಫೋರಂ ಆಫ್ ವ್ಯಾಸರಾಜ ಮುನಿತ್ರಯ ಯುಟ್ಯೂಬ್ ಮೂಲಕ ವ್ಯಾಸರಾಜ ಭಜನಾ ಮಂಡಳಿ ಅವರು ನೃತ್ಯ ಹಾಗೂ ಭಜನಾ ಕಾರ್ಯಕ್ರಮ ವನ್ನು ಶ್ರೀ ವ್ಯಾಸರಾಜರ ಉತ್ತರಾಧನೆ ಪ್ರಯುಕ್ತ ಪ್ರಸ್ತುತ ಪಡಿಸಲಾಗಿದೆ. ಶ್ರೀ ವ್ಯಾಸರಾಜರ 487ನೇ ಆರಾಧನಾ ಮಹೋತ್ಸವದ ಅಂಗವಾಗಿ ದ ವರ್ಲ್ಡ್ ಫಾರ್ಮ ಆಫ್ ವ್ಯಾಸರಾಜ ಡಿವೋಟೀಸ್ ಮುನಿತ್ರಯ ಯೂಟೂಬ್ ಯು ಎಸ್ ಎ ಇವರ ಅಪೇಕ್ಷೆಯಂತೆ ಬಳ್ಳಾರಿ ಶ್ರೀ ವ್ಯಾಸರಾಜ ಭಜನಾ ಮಂಡಲಿ ವತಿಯಿಂದ ವಿಜಯಲಕ್ಷ್ಮಿ ಸತ್ಯನಾರಾಯಣರಾವ್ ಇವರ ನೇತೃತ್ವದಲ್ಲಿ ನೃತ್ಯಸೇವೆ ಮತ್ತು ಭಜನಾ ಸೇವೆಯನ್ನು ಸಲ್ಲಿಸಲಾಯಿತು.

ಮಾ.23ರಂದು ಅಂಚೆ ಅದಾಲತ್

ವಿಸ್ಮಯವಾಣಿ ಸುದ್ದಿ ವಿಜಯಪುರ ; ಅಂಚೆ ವಿಭಾಗದ 2025-26ನೇ ಸಾಲಿನ 4ನೇ ತ್ರೈಮಾಸಿಕ ಅಂಚೆ ಅದಾಲತ್ ಕಾರ್ಯಕ್ರಮ ಮಾ.23 ರಂದು ಮಧ್ಯಾಹ್ನ 3 ಗಂಟೆಗೆ ವಿಜಯಪುರ ವಿಭಾಗದ ಅಂಚೆ ಅಧೀಕ್ಷಕರ ಕಾರ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲೆಯ ಬಬಲೇಶ್ವರ, ಬಸವನ ಬಾಗೇವಾಡಿ,ಚಡಚಣ, ದೇವರಹಿಪ್ಪರಗಿ,ಇಂಡಿ, ಕೊಲ್ಹಾರ, ಮುದ್ದೇಬಿಹಾಳ, ನಿಡಗುಂದಿ, ಸಿಂದಗಿ, ತಾಳಿಕೋಟೆ,ತಿಕೋಟಾ, ಆಲಮೇಲ ಹಾಗೂ ವಿಜಯಪುರ ತಾಲೂಕುಗಳ ವ್ಯಾಪ್ತಿಯ ಅಂಚೆ ಸೇವೆಗಳಿಗೆ ಸಲಹೆ-ಸೂಚನೆ ಹಾಗೂ ದೂರುಗಳನ್ನು ಅಂಚೆ ಅದಾಲತ್‌ನಲ್ಲಿ ವಿಚಾರಣೆಗೆ ಎಂದು ಮೇಲ್ಬರಹ ಬರೆದು ದಿನಾಂಕ: 16-03-2026ರೊಳಗೆ ಯಾವುದೇ ಅಂಚೆ ಕಚೇರಿಯಲ್ಲಿ ಸಲ್ಲಿಸಬಹುದಾಗಿದೆ.

ಇಂತಹ ದೂರು ಮತ್ತು ಸಲಹೆಯ ಲಕೋಟೆಗೆ ಯಾವುದೇ ಅಂಚೆ ವೆಚ್ಚ ಭರಿಸುವ ಅಗತ್ಯವಿರುವುದಿಲ್ಲ.

ಅಂಚೆ ಅದಾಲತ್‌ನಲ್ಲಿ ಅಂಚೆ ಇಲಾಖೆಯಿಂದ ಒದಗಿಸಲಾಗುತ್ತಿರುವ ಸೇವೆಗಳಲ್ಲಿ ಇರುವ ಕೊರತೆಗಳನ್ನು ಮತ್ತು ಸುಧಾರಿಸುವ ಸಲಹೆ ಸೂಚನೆಗಳ ಕುರಿತು ಚರ್ಚಿಸಲಾಗುವುದು ಎಂದು ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮಾಜದ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಅಪಾರ

ವಿಸ್ಮಯವಾಣಿ ಸುದ್ದಿ ಶಿವಮೊಗ್ಗ: ಪ್ರತಿಯೊಂದು ದಿನವು, ಮಹಿಳೆಯರ ಸಾಧನೆಯನ್ನು ಗುರುತಿಸುವಂತಹ ದಿನವಾಗಬೇಕು ಎಂದು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಆಯುಕ್ತೆ ಡಾ. ಅರುಂಧತಿ ಚಂದ್ರಶೇಖರ್ ಹೇಳಿದರು.

"ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ" ಭಾರತೀಯ ವೈದ್ಯಕೀಯ ಸಂಘದ ಶಿವಮೊಗ್ಗ ಮಹಿಳಾ ಘಟಕದ ವತಿಯಿಂದ ಆಯೋಜಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಾತನಾಡಿ, 'ಕೊಟ್ಟು ಪಡೆದುಕೊಳ್ಳೋಣ' ಎಂಬ ಘೋಷ ವಾಕ್ಯದೊಂದಿಗೆ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸುತ್ತಿದ್ದೇವೆ. ಮಹಿಳೆಯರಿಗೆ ಗೌರವ, ಅವಕಾಶ, ಧ್ವನಿ ಮತ್ತು ಸುರಕ್ಷತೆ ಕೊಡಬೇಕಿದೆ. ಜಾಸ್ತಿ ಕೊಟ್ಟಷ್ಟು ನಮ್ಮ ಸಮಾಜ ಪಡೆದುಕೊಳ್ಳುವುದು ಹೆಚ್ಚುತ್ತದೆ ಎಂದು ತಿಳಿಸಿದರು.

ವೈದ್ಯರಾಗಿದ್ದಂತಹ ನನ್ನ ಪಾಲಕರು ಶಿವಮೊಗ್ಗ ಜಿಲ್ಲೆಯ ಮೆಗ್ಗಾನ್ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು ಎಂಬುದು ಹೆಮ್ಮೆಯ ಸಂಗತಿ ಎಂದರು. ಭಾರತೀಯ ಆಡಳಿತ ಸೇವೆಯಲ್ಲಿ ಮಹಿಳೆಯರ ಸಮಾನತೆಗೆ ಯಶಸ್ವಿಯಾಗಿ ಹೋರಾಡಿದ ಯುಪಿಎಸ್‌ಸಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಪ್ರಥಮ ಮಹಿಳೆ ಸಿ.ಬಿ.ಮುತ್ತಮ್ಮ ಅವರ ಕೊಡುಗೆ ಸ್ಮರಿಸಿದರು. ಐಎಂಎ ಶಿವಮೊಗ್ಗ ವರ್ಷವಿಡೀ ನಡೆಸುತ್ತಿರುವ ವಿವಿಧ ಕಾರ್ಯಕ್ರಮಗಳಾದ ಮಹಿಳೆಯರ ಆರೋಗ್ಯದ ಕುರಿತು ವಿವಿಧ ಮಾಧ್ಯಮಗಳ ಮೂಲಕ ಮಾಹಿತಿ, ಅಗತ್ಯವಿರುವಲ್ಲಿ ಆರೋಗ್ಯ ತಪಾಸಣಾ ಶಿಬಿರಗಳು, ಶಾಲಾ ಹೆಣ್ಣು ಮಕ್ಕಳಿಗೆ ನೈರ್ಮಲ್ಯ ಕುರಿತು ನಡೆಸುತ್ತಿರುವ ಕಾರ್ಯಕ್ರಮ ಶ್ಲಾಘನೀಯ ಎಂದರು.

ಐಎಂಎ ಮಹಿಳಾ ಸದಸ್ಯರಾದ ಡಾ. ರಕ್ಷಾ ರಾವ್, ಡಾ. ವಿದ್ಯಾ ರಮೇಶ್ ಮತ್ತು ಡಾ. ಅಖಿಲಾ ಅವರಿಂದ ಚಾರಣ, ಕ್ರೀಡೆ, ಹಣಕಾಸು ವಿಷಯಗಳ ಬಗ್ಗೆ ಪ್ರಸ್ತುತಿ, ಕನ್ನಡ, ಹಿಂದಿ ಸಿನಿತಾರೆಯರ ಶೈಲಿ ಅನುಕರಿಸಿ ಅವರನ್ನು ವೇದಿಕೆಯ ಮೇಲೆ ಮರುಕಲ್ಪಿಸಲಾಯಿತು.

ಐನಬೈಲು ಪರಮೇಶ್ವರ ಹೆಗಡೆ ಅವರ ನಿರ್ದೇಶನದಲ್ಲಿ 'ಶತಗಜತ್ರಾಣಿ' ಯಕ್ಷಗಾನ ಪ್ರಸಂಗವನ್ನು ಮಹಿಳಾ ಸದಸ್ಯೆಯರು ಸುಂದರವಾಗಿ ಅಭಿನಯಿಸಿದರು.

ಐಎಂಎ ಶಿವಮೊಗ್ಗ ಶಾಖೆ ಅಧ್ಯಕ್ಷ ಡಾ. ಕೆ.ಆರ್.ರವೀಶ್, ಕಾರ್ಯದರ್ಶಿ ಡಾ. ಕೆ.ಎಸ್.ಶುಭ್ರತಾ, ಖಜಾಂಚಿ ಡಾ. ಎಚ್. ಎಲ್.ಶಶಿಧರ್, ಮಹಿಳಾ ಘಟಕದ ಅಧ್ಯಕ್ಷೆ ಡಾ. ಕೌಸ್ತುಭಾ ಅರುಣ್, ಕಾರ್ಯದರ್ಶಿ ಡಾ. ಶ್ವೇತಾ ಬಾದಾಮಿ, ಹಿರಿಯ ಕಿರಿಯ ಸದಸ್ಯರು, ಕುಟುಂಬ ವರ್ಗದವರು ಉಪಸ್ಥಿತರಿದ್ದರು.

'ಪದ್ಮಭೂಷಣ' ಪುಟ್ಟರಾಜರಜೀವನಅದು ಸಂಗೀತ ಶ್ರೀಗಂಧವಾಗಿತ್ತು.-ಚನ್ನವೀರಸ್ವಾಮಿಜಿ

ವಿಸ್ಮಯವಾಣಿ ಸುದ್ದಿ :'ಪದ್ಮಭೂಣ' ಡಾ. ಪಂ. ಪುಟ್ಟರಾಜರ ಜೀವನಅದು ಸಂಗೀತದ ಶ್ರೀಗಂಧವಾಗಿತ್ತು. ಶ್ರೀಗಂಧವು ತೇಯಿದಾಗ ಹೇಗೆ ಪರಿಮಳ ಬೀರಿ ಪರಿಸರವನ್ನು ಆಹ್ಲಾದಕರವಾಗಿ ಮಾಡುತ್ತದೆಯೋ ಹಾಗೆ ಪುಟ್ಟರಾಜ ಗುರುವರ್ಯರು, ತಮ್ಮ ಜೀವನವನ್ನು ಸಂಗೀತಕ್ಕೆ ತೆಯಿದು, ಸಂಗೀತದ ಪರಿಮಳವನ್ನು ತಮ್ಮ ಶಿಷ್ಯ ಪ್ರಶಿಷ್ಯರಿಂದ ವಿಶ್ವದ ತುಂಬೆಲ್ಲಾ ಪಸರಿಸಿದರು. ಸಂಗೀತದ ಮೂಲಕ ಶಿವಯೋಗವನ್ನು ಸಾಧಿಸಿ ಶಿವಯೋಗಿಯನಿಸಿದರು.

ಅವರುದಿನಾಂಕ, 08 ರಂದು ಬಾನುವಾರ ಸಂಜೆ 6 ಗಂಟೆಗೆ, ನಗರದ ಶ್ರೀಗಂಧ ರೆಸಿಡೆನ್ಸಿಯ 'ಗಿಹನ' ಬ್ಯಾಂಕ್ವೆಟ್ ಹಾಲಿನಲ್ಲಿ, ಗದುಗಿನಡಾ. ಪಂ.



ಪುಟ್ಟರಾಜ ಸೇವಾ ಸಮಿತಿ, ಮತ್ತುನಗರದಶ್ರೀಗಂಧ ರೆಸಿಡೆನ್ಸಿ, ಸಂಯುಕ್ತವಾಗಿ ಆಯೋಜಿಸಲಾಗಿದ 'ಪದ್ಮಭೂಷಣಡಾ. ಪಂ. ಪುಟ್ಟರಾಜರ 112ನೆಯ ಜಯಂತಿ ಹಾಗೂ ಪುಟ್ಟರಾಜರ ಮಾಸದ ನೆನಪು ಸಂಗೀತ ಶ್ರೀಗಂಧ ಮಾಸಿಕ ಕಾರ್ಯಕ್ರಮದ ಸಮ್ಮುಖವನ್ನು ವಹಿಸಿಕೋಂಡು ಮಾತನಾಡಿದರು. ಮನೆ ಮನೆಯಲ್ಲಿ ಸಂಗೀತಆರಾಧನೆಯಾಗಬೇಕು. ಸಂಗೀತಆರಾಧನೆಯ ನೆಲದಲ್ಲಿ ಸುಖ ಶಾಂತಿ ನೆಮ್ಮದಿ ಲಕ್ಷ್ಮಿವಾಸವಾರುತ್ತಾಳೆ ಎಂದುಅಭಿಪ್ರಾಯ ಪಟ್ಟರು.ಅಭಿಷೇಕಎಸ್. ಆರ್.ಉಪಸ್ಥಿತರಿರುವರು.

ಪ್ರತಿ ತಿಂಗಳು ನಡೆಸಿಕೊಂಡು ಬಂದಿರುವಪಂ. ಪುಟ್ಟರಾಜರ ಮಾಸದ ನೆನಪು ಸಂಗೀತ ಶ್ರೀಗಂಧ ಸಂಗೀತಕಾರ್ಯಕ್ರಮದಲ್ಲಿ ಬೆಂಗಳೂರಿನ ಯುವರಾಘವೇಂದ್ರ ಕೃಷ್ಣಾಜಿಕ್ಷತ್ರೀಯ ಇವರ ಭಾನ್ಸುರಿ ವಾದನ ಕೇಳುಗರನ್ನು ಮಂತ್ರಮುಗ್ಧರನ್ನಾಗಿ ಮಾಡಿತು, ಖ್ಯಾತತಬಲಾ ವಾದಕಸುರೇಶ ಕೊಪ್ಪಳ, ಸಮರ್ಥತಬಲಾಸಾಥ ನೀಡಿದರು.

ಸುದ್ದಿ ಚೂರು

ವಿಸ್ಮಯವಾಣಿ ಸುದ್ದಿ ; ಸಮರ್ಥ ಶಾಮನೂರು ಅವರಿಂದು ಮುಸ್ಲಿಂ ಧರ್ಮದ ಪವಿತ್ರ ತಿಂಗಳು ರಂಜಾನ್ ಮಾಸದಲ್ಲಿ ಉಪವಾಸ ಆಚರಿಸುವ ಮುಸ್ಲಿಂ ಸಮಾಜದವರಿಗೆ ಏರ್ಪಡಿಸಿದ್ದ ಇಫ್ತಿಯಾರ್ ಕೂಟದಲ್ಲಿ ಭಾಗವಹಿಸಿ ಶುಭ ಹಾರೈಸಿದರು.ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ಮುಸ್ಲಿಂ ಸಮಾಜದ ಮುಖಂಡರ ಆಹ್ವಾನದ ಮೇರೆಗೆ ಇಂದು ಅವರ ಮನೆಗಳಿಗೆ ಭೇಟಿ ನೀಡ ಯೋಗಕ್ಷೇಮ ವಿಚಾರಿಸಿದರು.

ದ್ವಿತೀಯ ಪಿಯುಸಿ ಅರ್ಥಶಾಸ್ತ್ರ ಪರೀಕ್ಷೆ: 6364 ವಿದ್ಯಾರ್ಥಿಗಳು ಹಾಜರು

ವಿಸ್ಮಯವಾಣಿ ಸುದ್ದಿ ಚಿತ್ರದುರ್ಗ ; ಜಿಲ್ಲೆಯಲ್ಲಿ ಮಂಗಳವಾರ ನಡೆದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಅರ್ಥಶಾಸ್ತ್ರ ವಿಷಯಕ್ಕೆ 6364 ವಿದ್ಯಾರ್ಥಿಗಳು ಹಾಜರಾಗಿದ್ದಾರೆ.

26 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಸುಗಮವಾಗಿ ನಡೆದಿದೆ. ಅರ್ಥಶಾಸ್ತ್ರ ವಿಷಯಕ್ಕೆ 6660 ವಿದ್ಯಾರ್ಥಿಗಳು ನೋಂದಣಿಯಾಗಿದ್ದು, ಈ ಪೈಕಿ 6364 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 296 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಜಿಲ್ಲೆಯಲ್ಲಿ ಯಾವುದೇ ಡಿಬಾರ್ ಪ್ರಕರಣ ಇರುವುದಿಲ್ಲ ಎಂದು ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಉಪನಿರ್ದೇಶಕ ಕೆ.ತಿಮ್ಮಯ್ಯ ತಿಳಿಸಿದ್ದಾರೆ.

ಸಾಧನೆ ಮಾಡುವ ಗುರಿಯನ್ನು ಮಕ್ಕಳು ಹೊಂದಬೇಕು: ಹೊನ್ನಪ್ಪ ಗಾಂಜಿ

ಸುನಂದಾ ಚಿನ್ನಾಪುರ, ವಿಸ್ಮಯ ವಾಣಿ ಸುದ್ದಿ

ಸವಣೂರ : ಉತ್ತಮ ಹವ್ಯಾಸ ನೈತಿಕ ಮೌಲ್ಯಗಳು ಸಂಸ್ಕಾರದ ಗುಣ ಬೆಳೆಸಿಕೊಂಡು ಜೀವನದಲ್ಲಿ ಏನಾದರು ಒಂದು ಒಳ್ಳೆಯ ಸಾಧನೆ ಮಾಡುವ ಗುರಿಯನ್ನು ಹೊಂದಬೇಕು ಎಂದು ಎಸ್ ಡಿ ಎಮ್ ಸಿ ಅಧ್ಯಕ್ಷರಾದ ಹೊನ್ನಪ್ಪ ಗಾಂಜಿಯವರು ಹೇಳಿದರು.

ತಾಲೂಕಿನ ತಳ್ಳಿಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜರುಗಿದ ಸರಸ್ವತಿ ಪೂಜಾ ಹಾಗೂ 7ನೇ ತರಗತಿಯ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಶಿಕ್ಷಕರಾದ ವಿರೂಪಾಕ್ಷಯ್ಯ ಹಿರೇಮಠ ವಿದ್ಯಾರ್ಥಿಗಳು ಓದುವುದರ ಕಡೆ ಹೆಚ್ಚು ಗಮನವನ್ನು ಹರಿಸಿ ಹೊಸ ಹೊಸ ಆಲೋಚನೆ ಕಠಿಣ ಶ್ರಮ ಸತತ ಪ್ರಯತ್ನದಿಂದ ಸಾಧಿಸುವ ಮಕ್ಕಳಾಗಿ ಬೆಳೆಯಬೇಕು ಎಂದು ಹೇಳಿದರು.

ಶಾಲೆಯ ಬಿಸಿಯೂಟ ಮುಖ್ಯ ಅಡುಗ–ದಾರರಾದ ಶಾಂತವ್ವ ಈರಣ್ಣನವರ ಸೇವಾನಿವೃತ್ತಿ ಹೊಂದಿದ ಕಾರಣ ಕಾರ್ಯಕ್ರಮದಲ್ಲಿ ಗೌರವಿಸಿ ಸನ್ಮಾನಿಸಲಾಯಿತು.

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಶಾಲೆಯಲ್ಲಿ ಮಕ್ಕಳಿಗೆ, ತಾಯಂದಿರಿಗಾಗಿ ಮ್ಯುಜಿಕಲ್ ಚೇರ್, ಸೋಬಾನ ಪದ, ಚಿತ್ರಕಲೆ ರಂಗೋಲಿ ಸ್ಪರ್ಧೆ ಏರ್ಪಡಿಸಿ ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಎಸ್ ಡಿ ಎಂ ಸಿ ಉಪಾಧ್ಯಕ್ಷರಾದ ಅನಿತಾ ನಿಂಗನಗೌಡ ಸದಸ್ಯರುಗಳಾದ ಸುರೇಶ ಈರಣ್ಣನವರ, ಮಂಜು ಹರ್ಜಪ್ಪನವರ, ಜಗದೀಶ ಗೌಡಗೇರಿ, ಆರತಿ ಪವಾರ, ಮುತ್ತವ್ವ ಕುರಿ, ನಿಂಗವ್ವ ಮಾಯಣ್ಣನವರ, ರತ್ನವ್ವ ಅರಳಿಕಟ್ಟಿ, ಶಿಕ್ಷಕರಾದ ಶಿವಕುಮಾರ ಅವಟಿ, ಜಿ ಎಚ್ ಮೇಲಿನಮನಿ, ಪರ್ವೀನ್ ಕೆ, ದಿವ್ಯಾ ಸವದತ್ತಿ, ಮತ್ತು ಪ್ರಮುಖರು ಮಕ್ಕಳು ಭಾಗವಹಿಸಿದ್ದರು.

ಶಾಲೆಯ ಪ್ರಧಾನ ಗುರುಗಳಾದ ಎಂ.ಬಿ ಈರಗೊಂಡ , ಎಂ.ಎಸ್. ಮಲ್ಲನಗೌಡ್ರ, ಚಂದ್ರಶೇಖರ ಕುಳೇನೂರ ಕಾರ್ಯಕ್ರಮ ನಿರ್ವಹಿಸಿದರು.

ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಮಾನೆ ಭೂಮಿಪೂಜೆ

ವಿಸ್ಮಯವಾಣಿ ಸುದ್ದಿ ಹಾನಗಲ್:ಸ್ಥಳೀಯ ಪುರಸಭೆಯ ಹಲವು ವಾರ್ಡ್‌ಗಳಲ್ಲಿ 2025–26 ನೇ ಸಾಲಿನ ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮದಡಿ ಒಟ್ಟು 7.60 ಕೋಟಿ ರೂ. ವೆಚ್ಚದಲ್ಲಿ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಶ್ರೀನಿವಾಸ ಮಾನೆ ಭೂಮಿಪೂಜೆ ನೆರವೇರಿಸಿದರು.

ವಾರ್ಡ್ ನಂ 4, 5, 7, 8, 12, 13, 14, 18, 19 ಸೇರಿದಂತೆ ಹಲವೆಡೆ ಸಿಸಿ ರಸ್ತೆ, ಸಿಡಿ ನಿರ್ಮಾಣ ಇನ್ನಿತರ ಅಭಿವೃದ್ಧಿ ಕಾಮಗಾರಿಗಳಿಗೆ ಈ ಸಂದರ್ಭದಲ್ಲಿ ಚಾಲನೆ ನೀಡಿದ ಶಾಸಕ ಮಾನೆ, ಹಾನಗಲ್ ಪುರಸಭೆ ವ್ಯಾಪ್ತಿಯಲ್ಲಿ ಒಂದೇ ದಿನ ದಾಖಲೆಯ 7.60 ಕೋಟಿ ರೂ. ವೆಚ್ಚದಲ್ಲಿ ಹತ್ತಾರು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡುತ್ತಿರುವುದು ಸಂತಸ ತಂದಿದೆ. ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಸುಮಾರು 40 ಕೋಟಿ ರೂ.ಗಿಂತ ಹೆಚ್ಚು ಅನುದಾನ ದೊರಕಿಸಿ ಸಾರ್ವಜನಿಕರ ನೆಮ್ಮದಿಯ ಜೀವನಕ್ಕೆ ಮೂಲಸೌಕರ್ಯ ಅಭಿವೃದ್ಧಿ ಪಡಿಸುವ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ ಎಂದರು. ಪುರಸಭೆ ಮಾಜಿ ಅಧ್ಯಕ್ಷರಾದ ಯಲ್ಲಪ್ಪ ಕಿತ್ತೂರ, ರಾಧಿಕಾ ದೇಶಪಾಂಡೆ, ಮಮತಾ ಆರೆಗೊಪ್ಪ, ಖುರ್ಷಿದ್ ಹುಲ್ಲತ್ತಿ, ಪರಶುರಾಮ ಖಂಡೂನವರ, ನಾಗಪ್ಪ ಸವದತ್ತಿ, ಮಾಜಿ ಉಪಾಧ್ಯಕ್ಷೆ ವೀಣಾ ಗುಡಿ, ನಗರ ಕಾಂಗ್ರೆಸ್ ಅಧ್ಯಕ್ಷ ಮತೀನ್ ಶಿರಬಡಗಿ, ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜು ಗೊರಣ್ಣನವರ, ಮುಖಂಡರಾದ ಆದರ್ಶ ಶೆಟ್ಟಿ, ಎಂ.ಎಂ.ಬಡಗಿ, ಮೋಹನ ಬಸವಂತಕರ, ಘನಶ್ಯಾಮ ದೇಶಪಾಂಡೆ, ರವಿ ದೇಶಪಾಂಡೆ, ರಾಜೂ ಗುಡಿ, ಗನಿ ಪಾಳಾ ಸೇರದಿಂತೆ ಹಲವರು ಇದ್ದರು.

ಹೊಸ ರಾಷ್ಟ್ರೀಯ ಸಹಕಾರ ನೀತಿ ಕುರಿತು ಮಾಹಿತಿ ಕೇಳಿದ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್

ವಿಸ್ಮಯವಾಣಿ ಸುದ್ದಿ **ದಾವಣಗೆರೆ:** ಹೊಸ ರಾಷ್ಟ್ರೀಯ ಸಹಕಾರ ನೀತಿ ಕುರಿತು ದಾವಣಗೆರೆ ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ಕೇಂದ್ರ ಸಹಕಾರ ಸಚಿವಾಲಯಕ್ಕೆ ಪ್ರಶ್ನೆ ಕೇಳಿದ್ದರು. ಹೊಸ ರಾಷ್ಟ್ರೀಯ ಸಹಕಾರ ನೀತಿಯನ್ನು ದೇಶದ ಎಲ್ಲಾ ರಾಜ್ಯಗಳಲ್ಲಿ ಜಾರಿಗೆ ತಂದಿರುವುದೇ, ಅದರ ಅನುಷ್ಠಾನ ಮಾರ್ಗಸೂಚಿಗಳು, ಕಾಲಮಿತಿಗಳು ಹಾಗೂ ಅಳೆಯಬಹುದಾದ ಗುರಿಗಳನ್ನು ಪ್ರಕಟಿಸಿರುವರೇ ಎಂಬುದರ ಕುರಿತು ಮಾಹಿತಿ ಕೇಳಿದರು. ಜೊತೆಗೆ ಈ ನೀತಿ ರೂಪಿಸುವ ವೇಳೆ ರಾಜ್ಯ ಸರ್ಕಾರಗಳು ಮತ್ತು ಸಹಕಾರ ಸಂಸ್ಥೆಗಳೊಂದಿಗೆ ಸಮಾಲೋಚನೆ ನಡೆಸಲಾಗಿದೆಯೇ, ಸಹಕಾರ ಸಂಘಗಳ ಆಡಳಿತ, ಲೆಕ್ಕಪರಿಶೋಧನೆ, ಸಾಲ ಸೌಲಭ್ಯ ಮತ್ತು ಡಿಜಿಟಲೀಕರಣದಲ್ಲಿ ಸುಧಾರಣೆಗಳಾಗಿದೆಯೇ ಎಂಬುದರ ಬಗ್ಗೆ ವಿವರ ಕೇಳಿದರು.

ಡಿ. ಗ್ರೂಪ್ ನೌಕರರ ಪಳನಿಸ್ವಾಮಿ 23 ವರ್ಷಗಳಿಂದ ಒಂದೇ ಕಡೆ ಕರ್ತವ್ಯ : ವರ್ಗಾವಣೆಗೆ ಒತ್ತಾಯ

ವಿಸ್ಮಯವಾಣಿ ಸುದ್ದಿ ಚಾಮರಾಜನಗರ : ಜಿಲ್ಲಾ ಕೇಂದ್ರದ ನಗರಸಭೆಯಲ್ಲಿ ಕಳೆದ 23 ವರ್ಷಗಳಿಂದ ಒಂದೇ ಕಡೆ ಡಿ. ಗ್ರೂಪ್ ನೌಕರರಾಗಿರುವ ಪಳನಿಸ್ವಾಮಿ ವರ್ಗಾವಣೆಗೊಳ್ಳದೆ ಪ್ರಭಾವ ಬೆಳೆಸಿಕೊಂಡು ಕಂದಾಯ ವಿಭಾಗದಲ್ಲಿ ಅಕ್ರಮ ಖಾತೆಗಳನ್ನು ಮಾಡುವುದು ಹಾಗೂ ಕಂದಾಯ ದಾಖಲಾತಿ ತಿದ್ದಿ ಬಹಳಷ್ಟು ಅನ್ಯಾಯ ಮಾಡುತ್ತಿದ್ದು, ದಾಖಲೆ ಸಮೇತ ಈತನ ವಿರುದ್ಧ ದೂರು ನೀಡಿದರು ಯಾವುದೇ ಪ್ರಯೋಜನವಾಗಿಲ್ಲ. ಈ ಕೂಡಲೇ ಈತನ ವಿರುದ್ಧ ಶಿಸ್ತು ಕ್ರಮ ವಾಗಬೇಕು. ಮೊದಲು ಇತರೆಡೆ ಡಿ ಗ್ರೂಪ್ ನೌಕರರಾಗಿ ವರ್ಗಾವಣೆ ಮಾಡಬೇಕೆಂದು ನಗರದ ಉಪ್ಪಾರ ಬೀದಿಯ ನಾಗರಾಜು ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ. ಗ್ರೂಪ್‌ಯಲ್ಲಿ ಕಳೆದ 23 ವರ್ಷಗಳಿಂದ ಇದ್ದು, ಆ ಕೆಲಸವನ್ನು ಬಿಟ್ಟು ಕಂದಾಯ ಸೆಕ್ಷನ್‌ಲ್ಲಿದ್ದುಕೊಂಡು ಸಾರ್ವಜನಿಕರ ಖಾತೆಗಳನ್ನು ತಿದ್ದುವುದು ಹಾಗು ಹಣ ಕೊಟ್ಟವರಿಗೆ ಬೇನಾಮಿ ಆಸ್ತಿಗಳನ್ನು ಖಾತೆ ಮಾಡಿ, ನಗರಸಭೆಗೆ ವಂಚನೆ ಮಾಡಿದ್ದಾನೆ. ಅಲ್ಲದೇ 23 ವರ್ಷಗಳಿಂದ 31 ವಾರ್ಡುಗಳ ಆಸ್ತಿ ವಿವರ ಪತ್ರಗಳು ಮತ್ತು ದಾಖಲಾತಿಯನ್ನು ನೋಡುತ್ತಾ ಅವುಗಳನ್ನು ತನಗೆ ಇಷ್ಟಬಂದಂತೆ ತಿದ್ದಿರುವುದು ಕಂಡು ಬಂದಿದೆ. ಈ ಸಂಬಂಧ ನಗರಸಭೆ ಆಯುಕ್ತರು, ಜಿಲ್ಲಾಧಿಕಾರಿಗಳಿಗೆ ದೂರು ನೀಡಿದ್ದು, ಈತನ ವಿರುದ್ಧ ಕ್ರಮ ವಹಿಸಬೇಕಾದ

ಅಧಿಕಾರಿಗಳು ಮೀನಾಮೇಷ ಎನ್ನಿಸುತ್ತಿದ್ದಾರೆ. ಅಲ್ಲದೇ ಈತನ ಅಕ್ರಮವಾಗಿ ವೈಟನರ್ ಬಳಸಿ ದಾಖಲಾತಿಗಳನ್ನು ತಿದ್ದಿರುವುದು ಬಹಿರಂಗವಾಗಿದ್ದು, ಈತನ ವಿರುದ್ಧ ಕ್ರಮಕ್ಕೆ ನಗರಾಭಿವೃದ್ಧಿ ಇಲಾಖೆಯಲ್ಲಿ ದೂರು ನೀಡಿದ್ದು. ಅವರು ವರದಿ ನೀಡುವಂತೆ ನಗರಸಭೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು ಸಹ ಇನ್ನು ವರದಿಯು ಹೋಗಿಲ್ಲ. ಆತನ ವಿರುದ್ಧ ಯಾವುದೇ ಕ್ರಮವಾಗಿಲ್ಲ ಎಂದು ದೂರಿದ್ದಾರೆ.

ಪಳನಿಸ್ವಾಮಿ ಹೆಸರಿಗೆ ಮಾತ್ರ ಡಿ ಗ್ರೂಪ್ ನೌಕರರ. ಅದರೆ, ಈತ ಮಾಡುತ್ತಿರುವುದೆಲ್ಲ ಅಕ್ರಮಗಳು, ಖಾತೆಗೆ ಬದಲಾವಣೆಗೆ ಅರ್ಜಿ ಹಾಕಿದವರನ್ನು ಸಂಪರ್ಕ ಮಾಡಿ, ನಾನೇ ನಿಮಗೆ ಎಲ್ಲವನ್ನು ಮಾಡಿಸಿಕೊಡುತ್ತೇನೆ ಎಂದು ಸಾವಿರಗಟ್ಟಲೆ ಹಣ ಪಡೆದು ಬೇನಾಮಿ ಹೆಸರಿಗೆ ಖಾತೆಗಳ ವರ್ಗಾವಣೆ ಮಾಡಿರುವುದು ಬೆಳಕಿಗೆ ಬಂದಿದೆ. ನಗರದ ಉಪ್ಪಾರ ಬಡಾವಣೆಯ ವಾರ್ಡ್ ನಂ 15 ರಲ್ಲಿ 30*38 ಅಳತೆ ನಿವೇಶನ ಇ ಸ್ವತ್ತು ಕ್ಕಾಗಿ ಅರ್ಜಿ ಹಾಕಿದ್ದು, ಈ ನಿವೇಶನವು ನಮ್ಮ ತಂದೆ ಲೇಟ್ ಸಿದ್ದಶೆಟ್ಟಿ ಅವರು ಹೆಸನಲ್ಲಿದ್ದು, ಅವರ ಪೌತಿ ಆಗಿದ್ದು, ಈ ನಿವೇಶವನ್ನು ಅವರ ಮಗನಾಗ ನನ್ನ ಹೆಸರಿಗೆ ಖಾತೆ ವರ್ಗಾವಣೆಗೆ ಅರ್ಜಿ ಹಾಕಿದ್ದು, ಸ್ವಾಧೀನದಲ್ಲಿದ್ದರು ಕೂಡ ಕಂದಾಯ ಅಧಿಕಾರಿಗೆ ಸುಳ್ಳು ಹೇಳಿ ಮೂಲ ದಾಖಲಾತಿ ನೀಡುವಂತೆ ಷರಾ ಬರೆಸಿ, ನಮ್ಮ ನಿವೇಶದನ ಖಾತೆಯಾಗದಂತೆ ಮಾಡಿದ್ದಾರೆ. ಇದೇ ರೀತಿ ಬಹಳಷ್ಟು ಜನರಿಗೆ ತೊಂದರೆ ನೀಡುತ್ತಿದ್ದು, ಇದೇ ಸುಮತಿ ಅವರ ಹೆಸರಿಗೆ ಖಾತೆ ಮಾಡಲು ಸಹ ಇದೇ ರೀತಿ ತಗಾರಾರು ಮಾಡಿದ್ದಾರೆ. ಮಂಜುನಾಥ್ ಆರಾಧ್ಯ ಖಾತೆ ಬದಲಾವಣೆ ಮಾಡಿಕೊಡಲು ಸಹ ಮೂಲ ದಾಖಲಾತಿ ನಮ್ಮ ಬಳಿ ಇಲ್ಲ ಎನ್ನುವ ಮೂಲಕ ತೊಂದರೆ ನೀಡುತ್ತಿದ್ದಾರೆ.

ಒಂದು ವರ್ಷವಾದರು ಖಾತೆ ವರ್ಗಾವಣೆಯಾಗಿಲ್ಲ. ಇದಕ್ಕೆಲ್ಲ ಮೂಲ ಕಾರಣ ಪಳನಿ ಸ್ವಾಮಿ. ಈತ ನಗರಸಭೆ ಕಂದಾಯ ನಿರೀಕ್ಷಕರು, ಖಾತೆ ಗುಮಾಸ್ತರಿಗೆ ಇಲ್ಲದ ಛಾಡಿ ಹೇಳಿ ಸಾರ್ವಜನಿಕರಿಗೆ ತೊಂದರೆ ನೀಡುತ್ತಿದ್ದೇನೆ. ಈತ ಖಾತೆ ವಿಭಾಗದಲ್ಲಿ ತನ್ನದೇ ಕೈ ಚಳಕ ತೋರಿಸುತ್ತಿರುವುದು ಬಹಿರಂಗವಾಗಿದೆ. ಹೀಗಾಗಿ ಈ ಕೂಡಲೇ ಈತನ ವಿರುದ್ಧ ಕ್ರಮ ವಾಗಬೇಕು .ಇಲ್ಲದಿದ್ದರೆ ಈತನಿಂದ ಅನ್ಯಾಯಕ್ಕೀಡಾಗಿರುವ ಜೊತೆಗೂಡಿ ನಗರಸಭೆ ಮುಂದೆ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ನಾಗರಾಜು ಎಚ್ಚರಿಕೆ ನೀಡಿದ್ದರು.

ಗೋಷ್ಠಿಯಲ್ಲಿ ಮಂಜುನಾಥ, ಪರುಶು ಇತರರು ಇದ್ದರು.

ಐಸಿಎಐ ಲಾ ಸ್ಕೂಲ್‌ನಲ್ಲಿ ಅಣಕು ನ್ಯಾಯಾಲಯ ಸ್ಪರ್ಧೆಯಲ್ಲಿ ಆಲ್ ಅಮೀನ್ ಮತ್ತು ಸೇಂಟ್ ಜೋಸೆಫ್ ಲಾ ಕಾಲೇಜಿಗೆ ಪ್ರಶಸ್ತಿ

ವಿಸ್ಮಯವಾಣಿ ಸುದ್ದಿ ಬೆಂಗಳೂರು ; ಐಸಿಎಐ ಲಾ ಸ್ಕೂಲ್‌ನಲ್ಲಿ 1ನೇ ಎನ್. ಜೆ. ಯಶಸ್ವಿ ಸ್ಮಾರಕ ಅಣಕು ನ್ಯಾಯಾಲಯ ಸ್ಪರ್ಧೆಯಲ್ಲಿ ಅಲ್–ಅಮೀನ್ ಲಾ ಕಾಲೇಜಿನ ಅಮ್ಮೈರ್ ಸಯೀದ್, ಶರೀಫ್ ಬಿ.ಎಂ.ಎ ಮತ್ತು ಆರ್ಮಾನ್ ಶೇಖ್ ಸದಸ್ಯರ ತಂಡವು ವಿಜೇತರಾಗಿದ್ದು, ರೂ. 30,000 ನಗದು ಬಹುಮಾನವನ್ನು ಪಡೆದಿತು. ರನ್ನರ್–ಅಪ್ ತಂಡವಾಗಿ ಸೇಂಟ್ ಜೋಸೆಫ್ ಲಾ ಕಾಲೇಜಿನ ಸಾವನ್ನಾ ಮೇರಿ ಅಲೆಕ್ಸಾಂಡರ್, ನೆಹಾಲ್ ಬಿ.ವಿ. ಮತ್ತು ಮನಸ್ವಿ ಎಂ. ಶೆಟ್ಟಿ ಸದಸ್ಯರ ತಂಡವು ರೂ. 20,000 ಬಹುಮಾನ ಪಡೆಯಿತು. ಉತ್ತಮ ಮೆಮೋರಿಯಲ್ ಪ್ರಶಸ್ತಿಯನ್ನು ಬೆಂಗಳೂರು ಕೆಎಲ್‌ಇ ಲಾ ಕಾಲೇಜಿನ ಚಂದನಾ ಎಂ., ಎಸ್. ಯೋಗಿನಾಥ್ ಮತ್ತು ವಿನಯ್ ಕೆ.ಎಸ್. ಸದಸ್ಯರ ತಂಡವು ಪಡೆದು ರೂ. 5,000 ಬಹುಮಾನವನ್ನು ಗಳಿಸಿತು.ಉತ್ತಮ ಪುರುಷ ಮೂಟರ್ ಪ್ರಶಸ್ತಿಯನ್ನು ಎಸ್. ಯೋಗಿನಾಥ್ (ಕೆಎಲ್‌ಇ ಲಾ ಕಾಲೇಜು) ರೂ. 2,500 ನಗದು ಬಹುಮಾನ ಸಹಿತವಾಗಿ ಪಡೆದರು. ಉತ್ತಮ ಮಹಿಳಾ ಮೂಟರ್ ಪ್ರಶಸ್ತಿಯನ್ನು ಸೇಂಟ್ ಜೋಸೆಫ್ ಲಾ ಕಾಲೇಜಿನ ಸಾವನ್ನಾ ಮೇರಿ ಅಲೆಕ್ಸಾಂಡರ್ ಅವರಿಗೆ ರೂ. 2,500 ನಗದು ಬಹುಮಾನ ಸಹಿತವಾಗಿ ನೀಡಲಾಯಿತು.ಎರಡು ದಿನಗಳ ಕಾಲ ನಡೆದ ಹಲವು ಸುತ್ತುಗಳ ಬಳಿಕ, ಎರಡು ತಂಡಗಳು ಅಂತಿಮ ಸುತ್ತಿಗೆ ಆಯ್ಕೆಯಾಗಿ ತಮ್ಮ ವಾದಗಳನ್ನು ಗಣ್ಯ ನ್ಯಾಯಮೂರ್ತಿಗಳ ಪೀಠದ ಮುಂದೆ ಮಂಡಿಸಿದವು. ಈ ಪೀಠದಲ್ಲಿ ಕರ್ನಾಟಕ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಸುಭಾಷ್ ಬಿ. ಆದಿ, ಐಸಿಎಐ ವಿಶ್ವವಿದ್ಯಾಲಯ ಮಿಜೋರಂನ ಕುಲಪತಿಗಳಾದ ಪ್ರೊ. ಡಾ. ವೈ. ಆರ್. ಹರಗೋಪಾಲ್ ರೆಡ್ಡಿ ಹಾಗೂ ಬೆಂಗಳೂರು ವಿಶ್ವ ವಿದ್ಯಾಲಯದ ಮಾಜಿ ಕಾರ್ಯ ನಿರ್ವಹಣಾ ಕುಲಪತಿಗಳಾದ ಪ್ರೊ. ಡಾ. ವಿ. ಸುಧೇಶ್ ಉಪಸ್ಥಿತರಿದ್ದರು. ಸಮಾರೋಪ ಸಮಾರಂಭದಲ್ಲಿ ಐಎಫ್‌ಹೆಚ್‌ಇ ಬೆಂಗಳೂರು ಕ್ಯಾಂಪಸ್‌ನ ಪ್ರೊ–ವೈಸ್ ಚಾನ್ಸಲರ್ ಹಾಗೂ ಕ್ಯಾಂಪಸ್ ಮುಖ್ಯಸ್ಥರಾದ ಪ್ರೊ. ಡಾ. ಮುದ್ದು ವಿನಯ್ ಅವರು ಐಸಿಎಐ ಲಾ ಸ್ಕೂಲ್‌ನ ಶೈಕ್ಷಣಿಕ ಪರಂಪರೆ ಮತ್ತು ಉಪಕ್ರಮಗಳನ್ನು ವಿವರಿಸಿದರು. ಐಸಿಎಐ ಲಾ ಸ್ಕೂಲ್ ವಿಭಾಗದ ಮುಖ್ಯಸ್ಥರಾದ ಡಾ. ರಾಜಶ್ರೀ ಪಾಟೀಲ ಅವರು ಸಂಸ್ಥೆಯ ಶೈಕ್ಷಣಿಕ ಮತ್ತು ವೃತ್ತಿಪರ ಚಟುವಟಿಕೆಗಳ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಅಂತಿಮ ಸುತ್ತು ಹಲವು ವಾರಗಳ ವಿದ್ಯಾರ್ಥಿಗಳಿಗೆ .ಕರ್ನಾಟಕದ ವಿವಿಧ ಪ್ರಮುಖ ಕಾನೂನು ಶಿಕ್ಷಣ ಸಂಸ್ಥೆಗಳನ್ನು ಪ್ರತಿನಿಧಿಸುವ 10 ತಂಡಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದವು.

ಈ ಸ್ಪರ್ಧೆ ಭೂಸ್ವಾಧೀನ ಕ್ಷೇತ್ರದಲ್ಲಿ ಪರಿಣತಿ ಹೊಂದಿದ ಭವಿಷ್ಯದ ವೃತ್ತಿಪರರನ್ನು ರೂಪಿಸುವಲ್ಲಿ ವಿಶೇಷ ಮೂಟಿಂಗ್‌ಗಳ ಮಹತ್ವವನ್ನು ಮತ್ತೊಮ್ಮೆ ಪ್ರತಿಪಾದಿಸಿತು. ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ವಾದನಾ ಅನುಭವ ಮತ್ತು ಸಮಕಾಲೀನ ಭೂಸ್ವಾಧೀನ ವಿವಾದಗಳ ಪರಿಚಯವನ್ನು ಇದು ಒದಗಿಸಿತು.

ಕಡಗಂಚಿ ಯಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

ವಿಸ್ಮಯವಾಣಿ ಸುದ್ದಿ ; ಕಾರ್ಮೆಲ್ ಜ್ಯೋತಿ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ ಕಡಗಂಚಿ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮೌಂಟ್ ಕಾರ್ಮೆಲ್ ಆವರಣದಲ್ಲಿ ಹಮ್ಮಿಕೊಂಡಿತು. ಕಾರ್ಯಕ್ರಮವನ್ನು ಶ್ರೀಮತಿ ರಾಜಾಶ್ರೀ , ಪ್ರಿನ್ಸಿಪಾಲ್, ಅಜಿಮ್ ಪ್ರೇಮ್ಜಿ ದೀಪ ಬೆಳಗಿಸಿ ಉದ್ಘಾಟಿಸಿದರು. ನಂತರ ಮಾತನಾಡಿ ಸಮಾಜಕ್ಕೆ ಮಹಿಳೆಯರ ಕೊಡುಗೆ,ಎಲ್ಲಾ ಕ್ಷೇತ್ರದಲ್ಲಿ ಮಹಿಳೆಯರ ಪಾತ್ರ. ಮತ್ತು ಎಲ್ಲರೂ ಹೆಣ್ಣು ಮಕ್ಕಳನ್ನ ವಿದ್ಯಾವಂತರನ್ನಾಗಿ ಮಾಡುವಂತೆ ಕರೆಕೊಟ್ಟರು. ವಿವಿಧ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ನೀಡಲಾಯಿತು. ಕಾರ್ಯಕ್ರಮದಲ್ಲಿ ಆಯೋಜಕರಾದ ಫಾ.ವಿಲಿಯಂ ಮಿರಾಂದ, ಫಾ. ದೀಪಕ್, ಫಾ.ಸಂದೀಪ್, ಬ್ರದರ್ ಫ್ಲೆಮಿಂಗ್ ಉಪಸ್ಥಿತರಿದ್ದರು. ಎಲ್ಲರಿಗೂ ಊಟದ ವ್ಯವಸ್ಥೆ ಮಾಡಲಾಗಿತ್ತು

ದೋಹಾ ಬಂದರಿನಲ್ಲಿ ಸಿಲುಕಿದ ಕರ್ನಾಟಕದ 8 ಪ್ರವಾಸಿಗರ ರಕ್ಷಣೆಗೆ ಕೇಂದ್ರಕ್ಕೆ ಮನವಿ

ವಿಸ್ಮಯವಾಣಿ ಸುದ್ದಿ ದಾವಣಗೆರೆ : ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಹಿನ್ನೆಲೆಯಲ್ಲಿ ಕರ್ನಾಟಕದ ಎಂಟು ಮಂದಿ ಭಾರತೀಯ ಪ್ರವಾಸಿಗರು ಹಳೆಯ ದೋಹಾ ಬಂದರಿನಲ್ಲಿ ಸಿಲುಕಿಕೊಂಡಿರುವ ಮಾಹಿತಿ ಲಭ್ಯವಾಗಿದೆ. ಅವರ ಸುರಕ್ಷತೆ ಕುರಿತು ಆತಂಕ ವ್ಯಕ್ತವಾಗಿದ್ದು, ತಕ್ಷಣ ಕ್ರಮ ಕೈಗೊಳ್ಳುವಂತೆ ಭಾರತ ಸರ್ಕಾರದ ವಿದೇಶಾಂಗ ವ್ಯವಹಾರಗಳ ಸಚಿವಾಲಯಕ್ಕೆ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್ ಎಸ್ ಮಲ್ಲಿಕಾರ್ಜುನ್ ಹಾಗೂ ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ಮನವಿ ಮಾಡಿದ್ದಾರೆ.ಕೇಂದ್ರ ವಿದೇಶಾಂಗ ಸಚಿವರಾದ ಡಾ. ಸುಬ್ರಹ್ಮಣ್ಯಂ

ಜೈಶಂಕರ್ ಅವರಿಗೆ ಈ ಕುರಿತು ಮನವಿ ಸಲ್ಲಿಸಲಾಗಿದ್ದು, ಸಂಬಂಧಿತ ರಾಯಭಾರಿ ಕಚೇರಿ ಅಧಿಕಾರಿಗಳಿಗೆ ಅಗತ್ಯ ಸೂಚನೆ ನೀಡಿ ಪ್ರವಾಸಿಗರನ್ನು ಶೀಘ್ರದಲ್ಲೇ ಸುರಕ್ಷಿತವಾಗಿ ಭಾರತಕ್ಕೆ ಕರೆತರಲು ಕ್ರಮ ಕೈಗೊಳ್ಳುವಂತೆ ವಿನಂತಿಸಿದ್ದಾರೆ.ಸಿಲುಕಿಕೊಂಡಿರುವ ಪ್ರವಾಸಿಗರ ಸುರಕ್ಷತೆ ಹಾಗೂ ಶೀಘ್ರ ವಾಪಸ್ಸಿಗಾಗಿ ಕೇಂದ್ರ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂಬ ನಿರೀಕ್ಷೆ ವ್ಯಕ್ತವಾಗಿದೆ ಎಂದು ಸಚಿವರು ಹಾಗೂ ಸಂಸದರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿ ಜಿ ರವಿ ಕ್ಷಮೆ ಯಾಚನೆಗೆ ರೈತ ಸಂಘಟನೆ ಆಗ್ರಹ

ವಿಸ್ಮಯವಾಣಿ ಸುದ್ದಿ ಚನ್ನರಾಯಪಟ್ಟಣ: ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಪದಾಧಿಕಾರಿಗಳ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ರೈತ ಮುಖಂಡರಾದ ಸಿ ಜಿ ರವಿ ಅವರು ಈ ಕೂಡಲೇ ಕ್ಷಮೆ ಯಾಚಿಸಬೇಕು ಎಂದು ರೈತ ಸಂಘದ ರಾಜ್ಯಾಧ್ಯಕ್ಷೆಯಾದ ಶ್ರೀಮತಿ ನಾಗರತ್ನಮ್ಮ ಆಗ್ರಹಿಸಿದರು. ರವಿ ಅಣ್ಣನವರಿಗೆ 24 ಗಂಟೆಗಳ ಸಮಯವನ್ನು ಗಡುವು ನೀಡಲಾಗುವುದು, ಭ್ರಷ್ಟಾಚಾರದ ದಂದೆ ಮಾಡುತ್ತಿರುವ ರೈತ ಸಂಘ ಮತ್ತು ದಲಿತ ಸಂಘಗಳ ಮುಖಂಡರು ಯಾರು ಎಂದು ಬಹಿರಂಗಪಡಿಸಬೇಕು ಹಾಗೂ ತಾಲೂಕು ಕಚೇರಿಯಲ್ಲಿ ಭ್ರಷ್ಟಾಚಾರಕ್ಕೆ ಕುಮ್ಮಕ್ಕು ನೀಡುತ್ತಿರುವರು ಯಾರು ಎಂದು ಸಾಬೀತು ಮಾಡಬೇಕು, ಸಾಬೀತು ಮಾಡುವಲ್ಲಿ ವಿಫಲರಾದರೆ ತಾಲೂಕು ಕಚೇರಿ ಮುಂಭಾಗ ಇರುವ ಡಾಕ್ಟರ್ ಬಿ ಆರ್ ಅಂಬೇಡ್ಕರ್ ಅವರ ಪ್ರತಿಮೆಯ ಕೆಳಗೆ ಬಹಿರಂಗವಾಗಿ ಕ್ಷಮೆಯಾಚಿಸಬೇಕು, ಈ ವಿಚಾರ ಕುರಿತು ಮಾಧ್ಯಮದವರ ಮುಂದೆ ಬಹಿರಂಗವಾಗಿ ಹೇಳಿಕೆಯನ್ನು ನೀಡಬೇಕು ಎಂದರು.

ಈ ಎರಡು ಷರತ್ತುಗಳನ್ನು ಪಾಲಿಸದಿದ್ದರೆ ಚನ್ನರಾಯಪಟ್ಟಣ ಮಿನಿ ವಿಧಾನಸೌಧದ ಮುಂಭಾಗದಿಂದ ಗೌಡಯ್ಯ ರವಿ ಅವರ ಮನೆವರೆಗೂ ಕಾಲ್ನಡಿಗೆಯಲ್ಲಿ ಪಾದಯಾತ್ರೆ ಮಾಡಿ ಪ್ರತಿಭಟನೆ ಮಾಡಲಾಗುವುದು ಎಂದು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯದ್ಯಕ್ಷರಾದ ಶ್ರೀಮತಿ ಚಿನ್ನೇನಹಳ್ಳಿ ನಾಗರತ್ನಮ್ಮ, ರಾಜ್ಯ ಕಾರ್ಯದರ್ಶಿಗಳಾದ ಅರಸೀಕೆರೆ ರವೀಶ್, ಜಿಲ್ಲಾ ಮುಖಂಡರಾದ ಸೊಪ್ಪನಹಳ್ಳಿ ಶಿವಣ್ಣ, ತಾಲೂಕು ಅಧ್ಯಕ್ಷರಾದ ಮಡಬ ಮಂಜು ಹಾಜರಿದ್ದರು.

ನೋವಾ ಐವಿಎಫ್ ಫರ್ಟಿಲಿಟಿಯಲ್ಲಿ ಉಚಿತ ಬಂಜೆತನ ತಪಾಸಣಾ ಶಿಬಿರ

ವಿಸ್ಮಯವಾಣಿ ಸುದ್ದಿ ದಾವಣಗೆರೆ : ನೋವಾ ಐವಿಎಫ್ ಫರ್ಟಿಲಿಟಿ ಕೇಂದ್ರದ ಪ್ರಥಮ ವಾರ್ಷಿಕೋತ್ಸವ ಮತ್ತು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಸಾರ್ವಜನಿಕರಿಗಾಗಿ ವಿಶೇಷ ಉಚಿತ ಬಂಜೆತನ ತಪಾಸಣಾ ಶಿಬಿರವನ್ನು ಮಾರ್ಚ್ 12 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಅರುಣಾ ಚಿತ್ರಮಂದಿರದ ಬಳಿಯಿರುವ ಕೇಂದ್ರದಲ್ಲಿ ಆಯೋಜಿಸಲಾಗಿದೆ. ಸಂತಾನಹೀನತೆಯ ಸಮಸ್ಯೆಯಿಂದ ಬಳಲುತ್ತಿರುವ ದಂಪತಿಗಳಿಗಾಗಿ ಹಲವು ಉಚಿತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಈ ಶಿಬಿರದಲ್ಲಿ ಸಂಪೂರ್ಣ ಉಚಿತ ನೋಂದಣಿ ಮತ್ತು ಸಮಾಲೋಚನೆ ನಡೆಸಲಾಗುವುದು. ಇದರೊಂದಿಗೆ ಪುರುಷರಿಗೆ ಉಚಿತ ವೀರ್ಯಾಣು ಪರೀಕ್ಷೆ ಹಾಗೂ ಮಹಿಳೆಯರಿಗೆ ಉಚಿತ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಶಿಬಿರದ ಸ್ಥಳದಲ್ಲೇ ಚಿಕಿತ್ಸೆಗೆ ನೋಂದಾಯಿಸಿಕೊಳ್ಳುವ ದಂಪತಿಗಳಿಗೆ ವಿಶೇಷ ಸೌಲಭ್ಯಗಳನ್ನು ನೀಡಲಾಗುವುದು ಎಂದು ಸಂಸ್ಥೆಯು ತಿಳಿಸಿದೆ.

ಆಸಕ್ತರು ಹೆಚ್ಚಿನ ಮಾಹಿತಿಗಾಗಿ 9606477137, 89513 91003, ಸಂಖ್ಯೆಗಳನ್ನು ಸಂಪರ್ಕಿಸಬಹುದಾಗಿದೆ. ಬಂಜೆತನದ ಸಮಸ್ಯೆಯಿಂದ ಬಳಲುತ್ತಿರುವ ದಂಪತಿಗಳು ಈ ಸುವರ್ಣಾವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಸಂಸ್ಥೆಯು ಕೋರಿದೆ.

ವಿಪ್ರ ವಟು ಶಿಕ್ಷಣ ಶಿಬಿರ ಆಯೋಜನೆ

ವಿಸ್ಮಯವಾಣಿ ಸುದ್ದಿ ; ದಾವಣಗೆರೆಯ ಬ್ರಾಹ್ಮಣ ಸಮಾಜ ಸೇವಾ ಸಂಘದ ವತಿಯಿಂದ ನಗರದ ಬ್ರಾಹ್ಮಣ ವಿದ್ಯಾರ್ಥಿ ನಿಲಯದಲ್ಲಿ ವಿಪ್ರ ವಟು ಶಿಕ್ಷಣ ಶಿಬಿರವನ್ನು ಮೇ 03ರ ಭಾನುವಾರದಿಂದ ಮೇ 12ರ ವರೆಗೆ ಹಮ್ಮಿಕೊಳ್ಳಲಾಗಿದೆ.

ಪ್ರತಿದಿನ ಬೆಳಿಗ್ಗೆ 7–30ರಿಂದ ಸಂಜೆ 5–30ರ ವರೆಗೆ ಶಿಬಿರಾರ್ಥಿಗಳಿಗೆ ವಿವಿಧ ಶಿಕ್ಷಣ ಮತ್ತು ತರಬೇತಿ ನೀಡಲಾಗುತ್ತದೆ. ಶಿಬಿರದಲ್ಲಿ ಭಾಗವಹಿಸಲು ಆಸಕ್ತಿ ಇರುವ ವಟುಗಳ ಪೋಷಕರು ತಮ್ಮ ಹೆಸರನ್ನು ಏಪ್ರಿಲ್ 15ರ ಒಳಗಾಗಿ ಬ್ರಾಹ್ಮಣ ವಿದ್ಯಾರ್ಥಿ ನಿಲಯದ ಕಾರ್ಯಾಲಯದಲ್ಲಿ ನೋಂದಾಯಿಸಿಕೊಳ್ಳಬೇಕು.

ಹೆಚ್ಚಿನ ಮಾಹಿತಿಗಾಗಿ ಸಮಾಜದ ಬಾಂಧವರು ಮೊ: 9844130834, 9844575983 ಸಂಪರ್ಕಿಸಬಹುದಾಗಿದೆ ಎಂದು ಸಂಘದ ಅಧ್ಯಕ್ಷ ಡಾ. ಎಂ ಸಿ ಶಶಿಕಾಂತ್ ಮತ್ತು ವಿಪ್ರ ವಟು ಶಿಕ್ಷಣ ಸಮಿತಿಯ ಅಧ್ಯಕ್ಷ ವಿನಾಯಕ ಡಿ. ಜೋಶಿ ತಿಳಿಸಿದ್ದಾರೆ.

ಪ್ರಿಯ ಓದುಗರೇ, ಎಲ್ಲರೂ ನಮ್ಮ ವಿಸ್ಮಯವಾಣಿ ಪ್ರಾದೇಶಿಕ ಕನ್ನಡ ದಿನ ಪತ್ರಿಕೆಯನ್ನು ತಪ್ಪದೇ ಓದಿರಿ

ಪ್ರತಿಯೊಬ್ಬರು ಮಹಿಳೆಯರನ್ನು ಗೌರವಿಸಬೇಕು : ಟಿ.ಶಾಂತಮ್ಮ

ವಿಸ್ಮಯವಾಣಿ ಸುದ್ದಿ ಜಗಳೂರು : ಮಕ್ಕಳ ಲಾಲಾನೆಪಾಲನೆ, ಕುಟುಂಬ ನಿರ್ವಹಣೆಯೊಂದಿಗೆ ಮಕ್ಕಳ ಶಿಕ್ಷಣಕೊಡಿಸಲು ಮುಂದಾಗಿರುವ ಮಹಿಳೆಯರನ್ನು ಪ್ರತಿಯೊಬ್ಬರೂ ಗೌರವಿಸಿ ಪ್ರೋತ್ಸಾಹಿಸಬೇಕು ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮೇಲ್ವಿಚಾರಕಿ ಟಿ.ಶಾಂತಮ್ಮ ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಯೋರೋಪ್ ದೇಶದ ದುಡಿಯುವ ವರ್ಗದ ಮಹಿಳೆಯರ ಹೋರಾಟದಿಂದ ಆರಂಭವಾದ ವಿಶ್ವ ಮಹಿಳಾ ದಿನಾಚರಣೆಗೆ ದೇಶದಲ್ಲಿಯೂ 47 ವರ್ಷಗಳಿಂದ ಬೆಂಬಲಿಸಿ ಆಚರಿಸಲಾಗುತ್ತಿದೆ. ಮಹಿಳೆ ಸ್ವಸಹಾಯ ಸಂಘಗಳಲ್ಲಿ ತೊಡಗಿಕೊಂಡು ಆರ್ಥಿಕ ವ್ಯವಹಾರಗಳಲ್ಲಿ ಬ್ಯಾಂಕ್ ಗಳಲ್ಲಿ ವಿಶ್ವಾಸ,ನಂಬಿಕೆ ಗಳಿಸಿದ್ದಾಳೆ.

ಗ್ರಾಮಪಂಚಾಯಿತಿ ಕಸದವಾಹನದಿಂದ ರಾಷ್ಟ್ರಪತಿವರೆಗೂ ಮಹಿಳೆ ಸಾಧನೆಗೈದಿದ್ದಾಳೆ. ಅನಕ್ಷರಸ್ಥ ಮಹಿಳೆಯೂ ಸಿರಿಧಾನ್ಯ ಉತ್ಪಾದನೆಯಲ್ಲಿ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದ್ದಾಳೆ.

ನಾಡಿನಲ್ಲಿ ಜನಿಸಿದ ವೀರವನಿತೆಯರಾದ ಕಿತ್ತೂರು ರಾಣಿ ಚೆನ್ನಮ್ಮ,ಓನಕೆ ಓಬವ್ವ ಅವರು ಸ್ಪೂರ್ತಿಯಾಗಬೇಕು ಎಂದರು.

ಇಲಾಖೆಯಡಿ ಲಭ್ಯವಿರುವ ಸುಕನ್ಯ ಸಮೃದ್ದಿ ಯೋಜನೆ,ಮಹಿಳಾ ಸಾಂತ್ವಾನ ಕೇಂದ್ರ, ಬಾಲಮಂದಿರ, ರಾಜ್ಯ ಮಹಿಳಾ ನಿಲಯಗಳ ಸೌಲಭ್ಯಗಳನ್ನು ಮಹಿಳೆಯರು ಸದ್ಬಳಕೆಮಾಡಿಕೊಳ್ಳಬೇಕು. ಬಾಲ್ಯ ವಿವಾಹ ಕಾನೂನು ಪ್ರಕಾರ ಶಿಕ್ಷಾರ್ಹ ಅಪರಾಧವಾಗಿದ್ದು. ಬಾಲ್ಯ ವಿವಾಹ ಮಾಡಿದವರು, ಪೋಷಕರು, ಭಾಗವಹಿಸಿದ ಪ್ರತಿಯೊಬ್ಬರೂ ಶಿಕ್ಷೆಗೆ ಗುರಿ ನಿಶ್ಚಿತ ಜಾಗೃತರಾಗಬೇಕು ಎಂದು ಕಿವಿಮಾತು ಹೇಳಿದರು.

ವಕೀಲೆ ಶಿಲ್ಪಾ ಮಾತನಾಡಿ,ಮಹಿಳೆಯರಿಗೆ ಸಂವಿಧಾನಬದ್ದ ಹಕ್ಕುಗಳನ್ನು ಸದ್ಬಳಕೆಮಾಡಿಕೊಂಡು ಮುಖ್ಯವಾಹಿನಿಗೆ ಬರಬೇಕಿದೆ.ಬದುಕಿನಲ್ಲಿ ಸಾಧನೆಯ ಗುರಿ ಹೊಂದಿರಬೇಕು.ನಿರಂತರ ಪರಿಶ್ರಮ ಅಗತ್ಯ ಹೆಣ್ಣುಮಕ್ಕಳ ಸ್ವಾವಲಂಬಿ ಬದುಕಿಗೆ ಮೆಹಂದಿ, ಟೈಲರಿಂಗ್, ಬ್ಯೂಟಿಷನ್ ನಂತಹ ಕೌಶಲ್ಯಗಳು ಪೂರಕವಾಗಿವೆ. ಕಾಲೇಜು ಹಂತದಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಅಪರಿಚಿತರೊಂದಿಗೆ ಚಾಟಿಂಗ್ , ಶೇರ್ ಗಳಲ್ಲಿ ತೊಡಗಿ ತಮಗರಿವಿಲ್ಲದೆ ಭವಿಷ್ಯಕ್ಕೆ ಸಂಚಕಾರ ತಂದುಕೊಳ್ಳಬೇಡಿ.ಪೋಷಕರು ಗುಡ್ ಟಚ್, ಬ್ಯಾಡ್ ಟಚ್ ಗಳ ಕುರಿತು ಮನವರಿಕೆ ಮಾಡಬೇಕು ಎಂದು ಸಲಹೆ ನೀಡಿದರು. ಪ್ರಾಂಶುಪಾಲೆ ರಾಜೇಶ್ವರಿ ಪೂಜಾರ ಮಾತನಾಡಿ, ಶಿಕ್ಷಣದಿಂದ ಮಾತ್ರ ಮಹಿಳೆಯರು ಮುಖ್ಯವಾಹಿನಿಗೆ ಬರಲು ಸಾಧ್ಯ. ವಿದ್ಯಾಭ್ಯಾಸಕ್ಕೆ ಬಡತನ, ಲಿಂಗ ಯಾವುದೂ ಅಡ್ಡಿಯಲ್ಲ. ಸಾಧಿಸುವ ಛಲ ನಿಮ್ಮದಾಗಬೇಕು ಎಂದರು.

ಈ ಸಂದರ್ಭದಲ್ಲಿ ಕರವೇ ಸಂಘಟನೆಯ ಶಾಹಿನಾಬೇಗಂ, ಐಕ್ಯೂಎಸಿ ಸಂಚಾಲಕಿ ಪ್ರಾಧ್ಯಾಪಕಿ ಸಲ್ಮಾತಾಜ್, ಮಹಿಳಾ ಘಟಕದ ಸಂಚಾಲಕಿ ಪ್ರಾಧ್ಯಾಪಕಿ ವಿದ್ಯಾ,

ಪ್ರಾಧ್ಯಾಪಕರುಗಳಾದ ಕಲ್ಯಾಣ್, ಸತೀಶ್, ಶಶಿಧರ್, ಲೋಕೇಶ್, ಅತಿಥಿ ಉಪನ್ಯಾಸಕರ ಸಂಘ ಅಧ್ಯಕ್ಷ ವೆಂಕಟೇಶ್, ಅಜ್ಜಪ್ಪ, ಮಲ್ಲಿಕಾರ್ಜುನ್, ಮುಸೇಬ್ ಉಲ್ಲಾಖಾನ್, ಸೇರಿದಂತೆ ಇದ್ದರು.



ಬುಧವಾರದ ರಾಶಿ ಭವಿಷ್ಯ
11 ಮಾರ್ಚ್ 2026
ಸೂರ್ಯೋದಯ – 6:31 ಬೆ.
ಸೂರ್ಯಾಸ್ತ – 6:21 ಸಂಜೆ
ಶಾಲಿವಾಹನ ಶಕೆ –1947
ಸಂವತ್–2081
ವಿಶ್ವಾವಸು ನಾಮ ಸಂವತ್ಸರ, ಉತ್ತರ ಅಯಣ, ಕೃಷ್ಣ ಪಕ್ಷ,
ಪಾಲ್ಗುಣ ಮಾಸ,
ಶಿಶಿರ್ ಋತು,
ತಿಥಿ – ಅಷ್ಟಮಿ
ನಕ್ಷತ್ರ – ಜ್ಯೇಷ್ಠ 9:52 ರಾ.ವರೆಗೆ
ನಂತರ ಮೂಲ
ಯೋಗ – ವಜ್ರ
ಕರಣ – ಬಾಲವ
ರಾಹು ಕಾಲ – 12:00 ರಿಂದ 01:30 ವರೆಗೆ
ಯಮಗಂಡ – 07:30 ರಿಂದ 09:00 ವರೆಗೆ
ಗುಳಿಕ ಕಾಲ – 10:30 ರಿಂದ 12:00 ವರೆಗೆ
ಬ್ರಹ್ಮ ಮುಹೂರ್ತ – 4:55 ಬೆ. ರಿಂದ 5:43 ಬೆ.ವರೆಗೆ
ಅಮೃತ ಕಾಲ – 12:07 ಮ.ರಿಂದ 1:54 ಮ.ವರೆಗೆ
ಅಭಿಜಿತ್ ಮುಹುರ್ತ – ಇಲ್ಲ

ಮೇಷ ರಾಶಿ ; ಪತ್ನಿ ಕಡೆಯಿಂದ ಆಸ್ತಿ ಸಿಗಲಿದೆ,ಆಸ್ತಿ ಸಮಸ್ಯೆ ಬಗೆಹರಿಯುವುದು, ಹೆಂಡತಿಯ ಮಾತಿನಂತೆ ನಡೆದುಕೊಳ್ಳುತ್ತೀರಿ.

ವೃಷಭ ರಾಶಿ; ಪತ್ನಿ ಬಂಧುಗಳಿಂದ ಧನ ಸಹಾಯ,ಪತ್ನಿಯ ಮಾರ್ಗದರ್ಶನದಿಂದ ತೆಗೆದು-ಕೊಂಡ ತೀರ್ಮಾನಗಳು ಫಲ

ಮಿಥುನ ರಾಶಿ ; ದೀರ್ಘಕಾಲದ ಖಾಯಿಲೆ ಗುಣಮುಖ,ಆಸ್ತಿ ವಿಚಾರಕ್ಕಾಗಿ ಕೆಲವು ಕಾನೂನಿನ ಸವಾಲುಗಳು ಎದುರಾಗಲಿವೆ, ಸ

ಕರ್ಕಾಟಕ ರಾಶಿ; ವಾಹನ ದುರಸ್ತಿ ಪದೇ ಪದೇ ಎದುರಿಸಬೇಕಾಗುತ್ತದೆ, ಮನೆಯಲ್ಲಿ ವಾಸ್ತು ಶಾಸ್ತ್ರದ ಪ್ರಕಾರ ನವೀಕರಣದ ಕೆಲಸ

ಸಿಂಹ ರಾಶಿ ; ವಾಸದ ಮನೆ ವಾಸ್ತು ಪ್ರಕಾರ ಪರಿವರ್ತನೆ,ನಿಮ್ಮ ಸ್ವಾಭಿಮಾನ ನಿಮಗೆ ದಾರಿದೀಪವಾಗಲಿದೆ,ಆಸ್ತಿ ಪಾಲುದಾರಿಕೆ

ಕನ್ಯಾ ರಾಶಿ ; ವಿದೇಶದಿಂದ ಸಿಹಿ ಸುದ್ದಿ,ಮಾಡುವಂತ ಕೆಲಸದ ಜಾಗದಲ್ಲಿ ಸವಾಲುಗಳು ಎದುರಾಗುತ್ತವೆ. ಸಾಲ ಮಾಡಲೇಬೇಕಾದ ಸನ್ನಿವೇಶ ಸೃಷ್ಟಿ.

ತುಲಾ ರಾಶಿ ; ವಿಚ್ಛೇದನ ಪಡೆದ ಮಹಿಳೆಗೆ ಪರಿಹಾರ ವಿಳಂಬ, ಸಾಲ ಪಡೆದವರಿಂದ ಒತ್ತಡ ಮತ್ತು ಕಿರಿಕಿರಿ ಹೆಚ್ಚಾಗಬಹುದು.

ವೃಶ್ಚಿಕ ರಾಶಿ ; ದಂಪತಿಗಳಿಗೆ ಗಂಡು ಸಂತಾನದಿಂದ ಹರ್ಷ, ಕುಟುಂಬದ ಸಮೇತ ಬೇರೆ ಊರಿಗೆ ಹೋಗುವಿರಿ.

ಧನಸ್ಸು ರಾಶಿ; ಕೃಷಿಕರ ಮಕ್ಕಳಿಗೆ ಮದುವೆ ಯೋಗ,ನಿಮ್ಮ ಸ್ವಂತ ಆಸ್ತಿ ವಿಚಾರದಲ್ಲಿ ಇತರರು ಹಸ್ತಕ್ಷೇಪ ಮಾಡುತ್ತಿದ್ದಾರೆಂದು ಬಲವಾಗಿ ಅನಿಸುತ್ತದೆ.

ಮಕರ ರಾಶಿ : ಉಪನ್ಯಾಸಕರಿಗೆ ಖಾಯಂ ಉದ್ಯೋಗ,ದುಂದುವೆಚ್ಚ ಖರ್ಚಿನ ವಿಚಾರದಲ್ಲಿ ಬಹಳ ಎಚ್ಚರ,

ಕುಂಭ ರಾಶಿ : ಶಿಕ್ಷಣ ಇಲಾಖೆ ನಡೆಸುತ್ತಿರುವವರಿಗೆ ಆರ್ಥಿಕ ಬಿಕ್ಕಟ್ಟು,ವಿದೇಶ ಪ್ರಯಾಣ, ಸರಕಾರಿ ನೌಕರಿ ಭಾಗ್ಯ ಅದಕ್ಕಾಗಿ ಸಿದ್ಧತೆ ಮಾಡಿಕೊಳಿ

ಮೀನ ರಾಶಿ; ವಿದೇಶ ಪ್ರವಾಸಕ್ಕೆ ಸುಯೋಗ, ಇತರರ ವಿಚಾರದಲ್ಲಿ ಭಾಗವಹಿಸ ಬೇಡಿ . ಕಾಯಕದಲ್ಲಿ ತುಂಬ ಆಸಕ್ತಿ ತೋರಿಸುತ್ತೀರಿ.

ಜಾತಕ ವಿಮರ್ಶಕರು, ಜ್ಯೋತಿಷ್ಯಶಾಸ್ತ್ರ, ವಾಸ್ತುಶಾಸ್ತ್ರ, ಸಂಖ್ಯಾಶಾಸ್ತ್ರ ಹಾಗೂ ನಾಡಿಶಾಸ್ತ್ರ ಪ್ರವೀಣರು.

ಜಾತಕ ಆಧಾರದ (ಜನ್ಮ ದಿನಾಂಕ ಮತ್ತು ಸಮಯ ತಿಳಿಸಿದರೆ ಜಾತ ಕ ಬರೆದು ತಿಳಿ ಸಲಾಗುವುದು) ಜಾತಕದ ಆಧಾರ ಹಾಗೂ ಹಸ್ತಸಾಮುದ್ರಿಕೆ ಆಧಾರ ಮೇಲೆ ವಿವಾಹ, ಪ್ರೇಮ ವಿವಾಹ, ಪ್ರೇಮಿಗಳಲ್ಲಿ ಮನಸ್ತಾಪ, ಮದುವೆ ಸಾಲಾವಳಿ, ದಾಂಪತ್ಯ ಕಲಹ, ಕುಟುಂಬ ಕಲಹ, ಅತ್ತೆ-ಸೊಸೆ ಜಗಳ, ಸಂತಾನ ಭಾಗ್ಯ, ಸಾಲ ಬಾಧೆ, ಶತ್ರುಗಳಿಂದ ತೊಂದರೆ, ಹಣಕಾಸು ವ್ಯವಹಾರದಲ್ಲಿ ನಷ್ಟ, ವ್ಯಾಪಾರ ನಷ್ಟ, ಉದ್ಯೋಗದಲ್ಲಿ ಕಿರುಕುಳ, ವಿದೇಶ ಪ್ರವಾಸ, ಆಸ್ತಿ ಖರೀದಿ, ಜನವಶ ಧನವಶ, ಜನ್ಮ ರಾಶಿ ನಕ್ಷತ್ರಗಳ ಮೇಲೆ ವ್ಯಾಪಾರ, ರಾಶಿಗಳಿಗೆ ಅನುಗುಣವಾಗಿ ಜನ್ಮರಾಶಿ ಹರಳು, ಇನ್ನು ಮುಂತಾದ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಹಾಗೂ ಮಾರ್ಗದರ್ಶನ ನೀಡಲಾಗುವುದು. ನಿಮ್ಮ ಯಾವುದೇ ಸಮಸ್ಯೆಗಳ ಸಮಾಲೋಚನೆಗಾಗಿ ಕರೆ ಮಾಡಿರಿ. "ಆಚಾರ್ಯ ಗುರು ಪರಂಪರಿತಾ ಜ್ಯೋತಿಷ್ಯರು" ಸೋಮಶೇಖರ್ ಗುರೂಜಿ B.Sc ಜ್ಯೋತಿಷ್ಯ ಶಾಸ್ತ್ರ, ವಾಸ್ತುಶಾಸ್ತ್ರ, ಸಂಖ್ಯಾಶಾಸ್ತ್ರ ಹಾಗೂ ನಾಡಿಶಾಸ್ತ್ರ ಪರಿಣಿತರು.. 93534 88403

ಲೇಖಕಿಯರು ಸಮಾಜದ ಧ್ವನಿಯಾಗುವ ನಿಟ್ಟಿನಲ್ಲಿ ಸಾಹಿತ್ಯ ಕೃಷಿ ಮಾಡಲಿ

ವಿಸ್ಮಯವಾಣಿ ಸುದ್ದಿ ಬೆಂಗಳೂರು : ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ದಿನವೇ ಚೇತನ ಫೌಂಡೇಶನ್ ಹಾಗೂ ವಿಸ್ಮಯವಾಣಿ ಸಹಯೋಗದೊಂದಿಗೆ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಜರುಗಿದ ಅಖಿಲ ಕರ್ನಾಟಕ ಮಹಿಳಾ ಸಾಹಿತ್ಯ ಸಮ್ಮೇಳನವನ್ನು ಖ್ಯಾತ ರಂಗಭೂಮಿ ಮತ್ತು ಕಿರುತೆರೆ ಕಲಾವಿದೆ ಹೆಲನ್ ಮೈಸೂರು ಸಮ್ಮೇಳನವನ್ನು ಉದ್ಘಾಟಿಸಿ ಕಾಲ ಕಾಲಾಂತರದಿಂದಲೂ ಹೆಣ್ಣಿನ ಶೋಷಣೆ ನಡೆಯುತ್ತಲೇ ಬಂದಿದೆ. ಇಂತಹ ವೇದಿಕೆಯಲ್ಲಿ ಲೇಖಕಿಯರು ಸಮಾಜದ ಧ್ವನಿಯಾಗುವ ನಿಟ್ಟಿನಲ್ಲಿ ಸಾಹಿತ್ಯ ಕೃಷಿ ಮಾಡಲಿ ಎಂದು ಹಾರೈಸಿದರು.

ಸಮ್ಮೇಳನಾಧ್ಯಕ್ಷ ಸ್ಥಾನ ಅಲಂಕರಿಸಿದ ಡಾ. ವಿ. ಬಿ. ಹಿರೇಮಠ ಅವರು ಮಹಿಳಾ ಸಬಲೀಕರಣವಾಗಬೇಕಾದರೆ ಮಹಿಳೆಯರೇ ಎಲ್ಲಾ ಕ್ಷೇತ್ರದಲ್ಲಿ ಮುಂದೆ ಬರಬೇಕು. ಲಿಂಗ ಸಮಾನತೆ ಕೇವಲ ಪುಸ್ತಕ ಪುಟಗಳಲ್ಲಿ, ಪತ್ರಿಕೆಯ ತಲೆಬರಹವಾಗದೇ ಮನಸ್ಸು ಮನಸ್ಸುಗಳನ್ನು ಮುಟ್ಟಬೇಕು ಎಂದರು. ತಾವು ಕೇವಲ ಎಸ್ಸೆಸ್ಸೆಲ್ಸಿ ಓದಿದ್ದರೂ ತಮ್ಮ ಪತಿ ಡಾ. ವಿ. ಬಿ. ಹಿರೇಮಠ ಅವರ ಆಶಯದಂತೆ ತಮ್ಮ ಅಶ್ವಿನಿ ಪ್ರಕಾಶನವನ್ನು ಮುಂದುವರೆಸಿಕೊಂಡು ಹೋಗುತ್ತಿರುವುದಲ್ಲದೇ ಹೊಸ ಹೊಸ ಬರಹಗಾರರಿಗೆ ವೇದಿಕೆ ನೀಡಿ ಅವರನ್ನು ಬೆಳೆಸುವ ನಿಟ್ಟಿನಲ್ಲಿ ತಮಗೆ ಆತ್ಮತೃಪ್ತಿ ಇದೆ ಎಂದು ಭಾವುಕರಾಗುತ್ತ, ಪುಸ್ತಕ ಪ್ರಕಟಣೆಯ ನೋವು ನಲಿವುಗಳನ್ನು ಹಂಚಿಕೊಂಡು ಸರಕಾರ ಪುಸ್ತಕ ಸಗಟು ಖರೀದಿಯತ್ತ ಗಮನ ಹರಿಸದಿದ್ದರೆ ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕಕ್ಕೆ ಈ ಸರಕಾರಗಳು ಮಾಡುತ್ತಿರುವುದು ಅನ್ಯಾಯವಲ್ಲದೇ ಮತ್ತೇನು ಎಂದು ಪ್ರಶ್ನಿಸಿದರು.

ವೇದಿಕೆಯಲ್ಲಿ ಖ್ಯಾತ ಹಿನ್ನೆಲೆ ಗಾಯಕಿ ಡಾ. ಪ್ರಿಯದರ್ಶಿನಿ ಕೆಪಿಸಿಸಿ ಪದವೀಧರ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ದೇವಿಕಾ ಹುಬ್ಬಳ್ಳಿ ಚಲನಚಿತ್ರ ನಟ ಪ್ರಾಣ್ವಿಗೌಡ ಎಲ್ ಐ ಲಕ್ಕಮ್ಮನವರ ಹಾಗೂ ವಿಸ್ಮಯವಾಣಿ ಪತ್ರಿಕೆಯ ಸಂಪಾದಕ ಡಾ. ವಾಸುದೇವ್ ಮುಂತಾದವರಿದ್ದರು.

ಚೇತನ ಸಂಸ್ಥೆಯ ಮುಖ್ಯಸ್ಥ ಹಾಗೂ ವಿಸ್ಮಯವಾಣಿ ಪತ್ರಿಕೆಯ ಸುದ್ದಿ ಸಂಪಾದಕ ಚಂದ್ರಶೇಖರ ಮಾಡಲಗೇರಿ ಪ್ರಸ್ತಾವಿಕ ನುಡಿಯನ್ನಾಡಿದರು. ದಾನೇಶ ಬಿಂದಲಗಿ ಸ್ವಾಗತಿಸಿದರು. ಸಂಗಮನಾಥ ಸಜ್ಜನ ನಿರೂಪಿಸಿದರು.

ಸಮ್ಮೇಳನದಲ್ಲಿ ಬಾಲ ಕಲಾವಿದೆ ಅಕ್ಷರಾ ಡಿ. ರೆಡ್ಡಿ ಅಭಿನಯಿಸಿದ ಹೆಣ್ಣು ಭ್ರೂಣ ಹತ್ಯೆಯ ಕುರಿತ ಏಕಪಾತ್ರಾಭಿನಯ ಕಂಡು ಸಭಿಕರು ಮೂಕವಿಸ್ಮಿತರಾದರಲ್ಲದೇ ಪ್ರತಿಯೊಬ್ಬರ ಕಣ್ಣಾಲಿಗಳು ತುಂಬಿ ಬಂದವು. ಅವಳ ಮನೋಜ್ಞ ಅಭಿನಯ ಕಂಡು ಹಿರಿಯ ಲೇಖ-ಕ ಚಂದ್ರಕಾಂತ ಬಿರಾದಾರ ಹಾಗೂ ಸಮ್ಮೇಳನಾಧ್ಯಕ್ಷರಾಗಿದ್ದ ಡಾ. ವಿ. ವಿ. ಹಿರೇಮಠ ಅವರು ಕಲಾಕಾಣಿಕೆ ನೀಡಿ ಗೌರವಿಸಿದರು.

ಮಧ್ಯಾಹ್ನ ಜರುಗಿದ ಕವಿಗೋಷ್ಠಿ ಹಾಗೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಲೇಖಕಿ, ಸಾಂಸ್ಕೃತಿಕ ಚಿಂತಕಿ, ಶಿಕ್ಷಕರಾದ ಪಾರ್ವತಿ ಬಿ. ಎ ಅವರು ವಹಿಸಿಕೊಂಡಿದ್ದರು. ಕ್ರೈಸ್ಟ್ ಅಕಾಡೆಮಿಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ಮಹಿಳಾ ದಿನದ ವಿಶೇಷವಾಗಿ ಕಾವ್ಯ ವಾಚನ ಮಾಡಿದರು. ಒಂದೇ ಕಾಲೇಜಿನಲ್ಲಿ ಇಷ್ಟೊಂದು ಪ್ರಮಾಣದ ವಿದ್ಯಾರ್ಥಿಗಳನ್ನು ಸಾಹಿತ್ಯದೆಡೆಗೆ ಕರೆತರುವ ಸವಾಲಿನ ಕೆಲಸಕ್ಕೆ ಕೈ ಹಾಕಿ ಯಶಸ್ವಿಯಾದ ಕಾಲೇಜಿನ ಕನ್ನಡ ಭಾಷಾ ಉಪನ್ಯಾಸಕಿಯಾದ ಪ್ರೊ. ಶೆಲ್ವಿ ಬಾಲಕೃಷ್ಣನ್ ಅವರಿಗೆ ಸಂಸ್ಥೆಯ ಅಧ್ಯಕ್ಷ ಚಂದ್ರಶೇಖರ ಮಾಡಲಗೇರಿ ಅಭಿನಂದಿಸಿ ಎಲ್ಲ ವಿದ್ಯಾರ್ಥಿಗಳ ಸಾಹಿತ್ಯಕ ಆಸಕ್ತಿಯ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು. ಅಧ್ಯಕ್ಷತೆ ವಹಿಸಿದ ಡಾ. ಪಾರ್ವತಿ ಬಿ. ಎ ಅವರು ಎಲ್ಲ ಕಾವ್ಯಗಳನ್ನು ಚುಟುಕಾಗಿ ವಿಮರ್ಶಿಸಿ ಹರ್ಷ ವ್ಯಕ್ತಪಡಿಸಿದರು. ವೇದಿಕೆಯಲ್ಲಿ ಅಕ್ಕಮಹಾದೇವಿ ಗುರುಮಾತಾಜಿ ಸಾನಿಧ್ಯ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಹಿರಿಯ ಲೇಖಕರು, ಪತ್ರಕರ್ತರಾದ ಚಂದ್ರಕಾಂತ ಬಿರಾದಾರ, ನಿವೃತ್ತ ಉಪನ್ಯಾಸಕರಾದ ಡಾ. ಪ್ರೇಮಲತಾ ಹಿರೇಮಠ, ಸಮಾಜ ಮುಖಿ ಚಿಂತಕಿ, ರೈತಪರ ಹೋರಾಟಗಾರ್ತಿ ಆರಾಧನಾ ಬಣಕಾರ,

ದಾವಣಗೆರೆ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧೀಕ್ಷಕರಾದ ಪುಣ್ಯಜ್ಯೋತಿ, ಶ್ವೇತಾ ಮೋಹನ್, ಸುನಂದಾ ರೇವಣಕರ, ಚಿರದೀಪ್ತಿ ಪ್ರಿಯಾ ಸೇರಿದಂತೆ ಹಲವರಿದ್ದರು. ಇದೇ ಸಂಧರ್ಭದಲ್ಲಿ ವಿವಿಧ ಕ್ಷೇತ್ರದ ನಾಡಿನ ಎಪ್ಪತ್ತೈದು ಸಾಧಕ ಮಹಿಳೆಯರಿಗೆ ಅಂತರಾಷ್ಟ್ರೀಯ ವನಿತಾ ಪ್ರಶಸ್ತಿ, ವಸುಂಧರಾ ರಾಷ್ಟ್ರೀಯ ಪ್ರಶಸ್ತಿ, ಸಾವಿತ್ರಿಬಾಯಿ ಪುಲೆ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿ, ಇಂದಿರಾ ಪ್ರಿಯದರ್ಶಿನಿ ಅಂತರಾಷ್ಟ್ರೀಯ ಪ್ರಶಸ್ತಿ ಹಾಗೂ ಶಿವಮೊಗ್ಗದ ಶರಾವತಿ ಮಹಿಳಾ ಮಂಡಳಿಗೆ ಅತ್ಯುತ್ತಮ ಮಹಿಳಾ ಸಂಘ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸುನಂದಾ ಚಿನ್ನಾಪೂರ ಸ್ವಾಗತಿಸಿದರು, ಸಂಚಾಲಕ ವಿರೇಶ್ ಕೆ ಎಸ್ ನಿರೂಪಿಸಿದರು. ಬಾವುಟ ಬಸವರಾಜ ವಂದಿಸಿದರು.

ಇಂದಿನ ಪಂಚಾಂಗ
ಶ್ರೀ ಮನೃಪ ಶಾಲೀವಾಹನಕೆ
1947 ನೇ ಶ್ರೀ *ವಿಶ್ವವಸು* ನಾಮ ಸಂವತ್ಸರದ,
ಉತ್ತರಾಯಣ, ಶಶಿರ ಋತು *ಪಾಲ್ಗುಣ*
ಮಾಸ, *ಕೃಷ್ಣ* ಪಕ್ಷ *ಅಷ್ಟಮಿ* ತಿಥಿ ರಾತ್ರಿ 2-09
ರವರೆಗೆ ನಂತರ *ನವಮಿ* ತಿಥಿ
****
ಇಂದಿನ ನಕ್ಷತ್ರ
ಜೇಷ್ಠ ನಕ್ಷತ್ರ ರಾತ್ರಿ 8-16 ರವರೆಗೆ
ನಂತರ *ಮೂಲ* ನಕ್ಷತ್ರ
****
ವಜ್ರ ನಾಮಯೋಗ
ಬಾಲವ ನಾಮಕರಣ
****
ರಾಹುಕಾಲ
ಮಧ್ಯಾಹ್ನ 12 ರಿಂದ 1-30 ರವರೆಗೆ
****
ಯಮಗಂಡಕಾಲ
ಬೆಳಿಗ್ಗೆ 7-30 ರಿಂದ 9 ರವರೆಗೆ
****
ಈ ದಿನ ಶುಭ ಸಮಯ
ಬೆಳಿಗ್ಗೆ 6 ರಿಂದ 7-30 ರವರೆಗೆ
9 ರಿಂದ 12 ರವರೆಗೆ
1-30 ರಿಂದ 6 ರವರೆಗೆ
****
ದಾವಣಗೆರೆ ಜಿಲ್ಲೆಯಲ್ಲಿ
ಸೂರ್ಯೋದಯ 6-37 ಕ್ಕೆ
ಸೂರ್ಯಾಸ್ತ 6-36 ಕ್ಕೆ
****
ಇಂದಿನ ಮಳೆ
ಪೂರ್ವಾಭಾದ್ರ 3 ನೇ ಪಾದ

ಇಂದ:
ಪುರವರ್ಗ ಹಿರೇಮಠ ಶ್ರೀ ಕ್ಷೇತ್ರ,
ಆವರಗೊಳ್ಳ, ದಾವಣಗೆರೆ
ಮಠದ ನಂ 9901910299

ಪ್ರಿಯ ಓದುಗರೇ, ಎಲ್ಲರೂ ನಮ್ಮ ವಿಸ್ಮಯವಾಣಿ ಪ್ರಾದೇಶಿಕ ಕನ್ನಡ ದಿನ ಪತ್ರಿಕೆಯನ್ನು ತಪ್ಪದೇ ಓದಿರಿ

ನಗರಸಭೆಯಿಂದ ಬೀದಿ ಬದಿ ವ್ಯಾಪಾರಸ್ಥರಿಂದ ಜಕಾತಿ ವಸೂಲಿ ಮಾಡಲು ಪೌರಾಯುಕ್ತರಿಗೆ ಮನವಿ

ವಿಸ್ಮಯವಾಣಿ ಸುದ್ದಿ ಹರಿಹರ : ನಗರಸಭೆಯಿಂದಲೆ ಬೀದಿ ಬದಿ ವ್ಯಾಪಾರಸ್ಥರಿಂದ ಜಕಾತಿ ವಸೂಲಿ ಮಾಡಲು ಜಿಲ್ಲಾಧಿಕಾರಿಗಳು ಕ್ರಮ ಕೈಗೊಳ್ಳಬೇಕು.ಅವರ ಪ್ರಮುಖಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ, ಕರ್ನಾಟಕರಾಜ್ಯ ಸಂಯುಕ್ತ ಬೀದಿ ಬದಿ ವ್ಯಾಪಾರಸ್ಥರ ಸಂಘದಿಂದ ಮಂಗಳವಾರ, ನಗರಸಭೆ ಪೌರಾಯುಕ್ತೆ ಈರಮ್ಮಅವರ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಮನವಿ ಸಲ್ಲಿಕೆಯ ನೇತೃತ್ವ ವಹಿಸಿದ್ದ ಸಂಘದಜಿಲ್ಲಾ ಸಂಚಾಲಕಿ ಮಂಜಮ್ಮ ಡಿ.ಮಾತನಾಡಿ, ಜಕಾತಿ ವಸೂಲಿ ಮಾಡುವುದನ್ನುಖಾಸಗಿಯವರಿಗೆ ಹರಾಜಿನ ಮೂಲಕ ನೀಡಲಾಗಿದೆ.ಖಾಸಗಿಯವರಿಗೆಗುತ್ತಿಗೆ ನೀಡುವ ಬದಲು ನಗರಸಭೆಯಿಂದಲೆಜಕಾತಿ ವಸೂಲಿ ಮಾಡಿದರೆ ಬಡ ವ್ಯಾಪಾರಿಗಳಿಗೆ ಅನುಕೂಲವಾಗುತ್ತದೆ.

ಬೀದಿ ಬದಿ ವ್ಯಾಪಾರಸ್ಥರ (ಸಂರಕ್ಷಣೆ ಹಾಗೂ ಜೀವನೋಪಾಯದ ನಿಯಂತ್ರಣ) 2024 ರಕಾಯ್ದೆಯನ್ನು ಪರಿಣಾಮಕಾರಿಯಾಗಿಅನುಷ್ಠಾನ ತರಬೇಕು.ಕೂಡಲೆ ವೆಂಡಿಂಗ್‌ಕಮಿಟಿ ಸದಸ್ಯರ ಸಭೆ ನಡೆಸಬೇಕು. ವ್ಯಾಪಾರಿಗಳಿಗೆ ಗುರುತಿನಚೀಟಿ ವಿತರಿಸಬೇಕು.

ಆರೋಗ್ಯ ವಿಮಾ ಯೋಜನೆಗಳಡಿ ವ್ಯಾಪಾರಿಗಳನ್ನು ಸೇರಿಸಿ ಉಚಿತಅಥವಾರಿಯಾಯಿತಿದರದಲ್ಲಿವೈದ್ಯಕೀಯ ಸೌಲಭ್ಯಒದಗಿಸಬೇಕು.ಮಕ್ಕಳಿಗೆ ಶಿಕ್ಷಣ ಸೌಲಭ್ಯ, ವಿದ್ಯಾರ್ಥಿ ವೇತನ ಹಾಗೂ ಕಲ್ಯಾಣಯೋಜನೆಜಾರಿ ಮಾಡಬೇಕು.

2024 ರಕಾಯ್ದೆಯ ಪ್ರಕಾರ ಬೀದಿಬದಿ ವ್ಯಾಪರಸ್ಥರ ಸಮಿತಿಯನ್ನು ಪರಿಣಾಮಕಾರಿಯಾಗಿಕಾರ್ಯ ನಿರ್ವಹಿಸುವಂತೆ ಮಾಡಬೇಕು.ನಗರದಲ್ಲಿ ಹೆಚ್ಚುತ್ತಿರುವ ಬಿಡಾಡಿ ದನಗಳ ಹಾವಳಿ ತಡೆಗಟ್ಟಬೇಕು.ಈ ಹಿಂದೆ ಹಲವು ಬಾರಿ ಮನವಿ ಸಲ್ಲಿಸಲಾಗಿದ್ದರೂ ನಗರಸಭೆಯಿಂದ ಸ್ಪಂದನೆ ಸಿಕ್ಕಿಲ್ಲ ಎಂದುಮಂಜಮ್ಮಬೇಸರ ವ್ಯಕ್ತ ಪಡಿಸಿದರು.ಸಂಘದ ಹರಿಹರಘಟಕದಅಧ್ಯಕ್ಷಅವ್ಜುದ್ ಅಲಿ, ಕಾರ್ಯದರ್ಶಿ ಗಿರಿರಾಜ್, ಸಂಘಟನಾ ಕಾರ್ಯದರ್ಶಿ ಬಸವರಾಜ್, ಖಜಾಂಚಿ ಮೊಹಮ್ಮದ್‌ಇಕ್ಬಾಲ್‌ಇದ್ದರು.

ಮಾಜಿ ಸೈನಿಕರಿಗೆ ಭೂಮಿ ನೀಡಲು ಶಾಸಕ ಹರೀಶ್ ಒತ್ತಾಯ

ವಿಸ್ಮಯವಾಣಿ ಸುದ್ದಿ ಹರಿಹರ : ವಿಧಾನ ಸಭೆಯಲ್ಲಿ ನಡೆಯುತ್ತಿರುವ ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ್ದ ಶಾಸಕ ಬಿ. ಪಿ ಹರೀಶ್‌ರವರು ನಿವೃತ್ತ ಸೈನಿಕರಿಗೆ ಭೂಮಿಅಥವಾ ನಿವೇಶನ ಹಂಚಿಕೆ ಮಾಡದೆ, ಅವರನ್ನ ಕಚೇರಿಗಳಿಗೆ ಅಲೆದಾಡುವಂತೆ ಮಾಡಿದ್ದಿರಿಎಂದು ಸರ್ಕಾರಕ್ಕೆ ಪ್ರಶ್ನೆ ಮಾಡಿದರು. ದಿವಗಂತರಾದಅಪ್ಪಣ್ಣ ಹೆಗಡೆ, ದಾವಣಗೆರೆಯ ವೈ. ಎಂ ವೀರಣ್ಣ (ಮೋತಿ ವೀರಣ್ಣ)ರವರಿಗೆ ಸಂತಾಪ ಸೂಚಿಸಲಾಯಿತು. ಶಾಸಕ ಬಿ.ಪಿ ಹರೀಶ್ ಮಾತನಾಡಿ, ಅಪ್ಪಣ್ಣ ಹೆಗಡೆಅವರ ಬಗ್ಗೆ ಅಷ್ಟೊ ಮಾಹಿತಿಇಲ್ಲ, ಮೋತಿ ವೀರಣ್ಣನವರು ನಮ್ಮದಾವಣಗೆರೆಯವರು.ಅವರು 1983 ರಲ್ಲಿದಾವಣಗೆರೆ ನಗರಸಭೆ ಸದಸ್ಯರಾಗಿದ್ದರು. ಆಗ ನಾನು ಕೂಡ ನಗರಸಭೆ ಸದಸ್ಯಆಗಿದ್ದೆ, ದಾವಣಗೆರೆಅಭಿವೃದ್ಧಿಯಲ್ಲಿಅವರ ಪಾತ್ರ ಬಹಳಷ್ಟಿದೆ.ನಂತರ 1988ರಲ್ಲಿ ದಾವಣಗೆರೆ ವಿಧಾನ ಸಭೆ ಸದಸ್ಯರಾಗಿಆಯ್ಕೆಆಗಿದ್ದರುಅಂತ ಹೇಳಿದ್ದಿರಿ. ಆದರೆ, ನನಗೆ ಮಾಹಿತಿ ಇರುವ ಪ್ರಕಾರ 1989ರಲ್ಲಿ ಅವರು ವಿಧಾನಸಭೆ ಸದಸ್ಯರಾಗಿದ್ದರುಅನ್ನಿಸುತ್ತೆ.ಅವರುಕಾಂಗ್ರೆಸ್ ಪಕ್ಷದ ನಿಷ್ಠಾವಂತಕಾರ್ಯಕರ್ತರಾಗಿ ವಿಧಾನ ಸಭೆಗೆಆಯ್ಕೆಯಾಗಿದಾವಣಗೆರೆಯನ್ನ ಮತ್ತಷ್ಟುಅಭಿವೃದ್ಧಿ ಪಡಿಸಿದ್ದಾರೆ. ಇದರಿಂದದಾವಣಗೆರೆಜನತೆಅವರನ್ನ ಎಂದಿಗೂ ಮರೆಯುವುದಿಲ್ಲ. ಅವರಅಗಲಿಕೆಯಿಂದಅವರಕುಟುಂಬಕ್ಕೆದುಃಖವಾಗಿದೆಅದನ್ನ ತಡೆದುಕೊಳ್ಳುವ ಶಕ್ತಿಯನ್ನದೇವರುಅವರಿಗೆ ಶಕ್ತಿ ನೀಡಲಿ ಎಂದು ಶಾಸಕ ಬಿ.ಪಿ ಹರೀಶ್ ಸದನದಲ್ಲಿ ಸಂತಾಪ ಸೂಚಿಸಿದರು.

ಸಾರ್ವಜನಿಕರ, ಸಂಘಟಕರ ವಿರೋಧದ ಮಧ್ಯದಲ್ಲಿಯೇ ರಾಜಕಾಲುವೆ ನಿರ್ಮಾಣ

ವಿಸ್ಮಯವಾಣಿ ಸುದ್ದಿ ಹರಿಹರ : ನಗರದ ಬಿರೂರು-ಸಮ್ಮಸಗಿರಾಜ್ಯ ಹೆದ್ದಾರಿ ಪಕ್ಕದಲ್ಲಿರುವಎಸ್.ಜೆ.ವಿ.ಪಿ. ಕಾಲೇಜಿನ ಹಿಂಭಾಗದಲ್ಲಿ,ಸಣ್ಣ ನೀರಾವರಿಇಲಾಖೆಯಿಂದ ನಿರ್ಮಿಸುತ್ತಿರುವ, ರಾಜಕಾಲುವೆಯಲ್ಲಿಕಾಂಕ್ರೀಟ್‌ಚರಂಡಿ ನಿರ್ಮಾಣಕ್ಕೆಸಾರ್ವಜನಿಕರಿಂದ ವಿರೋಧ ವ್ಯಕ್ತವಾಗಿದೆ.

ಅಂದಾಜು120 ಅಡಿ ಅಗಲವಿರುವ ಈ ರಾಜಕಾಲುವೆಯ ಸ್ಥಳದಲ್ಲಿ 15 ರಿಂದ18 ಅಡಿ ಅಗಲದವರೆಗೆ ಮಾತ್ರಚರಂಡಿ ನಿರ್ಮಿಸುತ್ತಿದ್ದು, ಕಾಲುವೆಯ ಉಳಿದ ಜಮೀನುಒತ್ತುವರಿದಾರರ ಪಾಲಾಗಲು ಅನುಕೂಲ ಮಾಡಿಕೊಡಲಾಗುತ್ತಿದೆ ಎಂಬ ಆರೋಪ ಕೇಳಿ ಬಂದಿದೆ.ಪೂರ್ವ ಭಾಗದಿಂದ ನೂರಾರುಎಕರೆ ಜಮೀನುಗಳ ಮಳೆ ನೀರು, ದೇವರಬೆಳೆಕೆರೆ ಕಾಲುವೆಯ ಹೆಚ್ಚುವರಿ ನೀರು ಈ ರಾಜಕಾಲುವೆ ಮೂಲಕ ನದಿಗೆ ಸೇರುತ್ತದೆ.

ಹೀಗೆನ್ನುತ್ತಾರೆ ನಗರಸಭೆ ಮಾಜಿ ಸದಸ್ಯ :ಸಹಜವಾಗಿ ನೀರು ಹರಿದು ಬರುವ ಮಾರ್ಗಗಳು ಹಲವೆಡೆಒತ್ತುವರಿ ಮಾಡಿರುವುದರಿಂದ,ಈ ಹಳ್ಳಕ್ಕೆ ಹರಿದು ಬರುವ ನೀರಿನ ಪ್ರಮಾಣ ಈಚೆಗೆ ಕಡಿಮೆಯಾಗಿದೆ. ಈ ಹಿಂದೆ ಮಳೆಗಾಲದಲ್ಲಿ ಈ ಹಳ್ಳದಲ್ಲಿ ಹರಿಯುತ್ತಿದ್ದಅಪಾರ ಪ್ರಮಾಣದನೀರಿನಲ್ಲಿ ಈ ಭಾಗದಜನರು ಸ್ನಾನ ಮಾಡುವುದು, ಈಜುವುದು, ಬಟ್ಟೆ ತೊಳೆಯುವುದು ಮಾಡುತ್ತಿದ್ದರು. ರೂ.4.8 2ಕೋಟಿಅನುದಾನದಲ್ಲಿಕೈಗೊಂಡಿರುವಕಾಮಗಾರಿ ಈ ಭಾಗದ ಬದಲು ಜೆ.ಸಿ.ಬಡಾವಣೆ 1ನೇ ಮೇನ್ 4, 5,6ನೇ ಕಾಸ್ ಬಳಿಯ ಕಾಲುವೆಯಲ್ಲಿಕೈಗೊಂಡಿದ್ದರೆ ಆ ಭಾಗದಲ್ಲಿ ವಾಸಿಸುತ್ತಿರುವ ಹೆಚ್ಚಿನ ಜನರಿಗೆ ಅನು ಕೂಲವಾಗುತ್ತಿತ್ತು, ಹಳೆ ಪಿ.ಬಿ. ರಸ್ತೆ ಪಕ್ಕದಿಂದ ಹರಿದು ಬರುವ ಈ ಹಳ್ಳವನ್ನು ಮುಚ್ಚಿ ಈಗಾಗಲೆ ಹಲವು ಎಕರೆಜಮೀನು ಭೂಗಳ್ಳರ ಪಾಲಾಗಿದೆ, ಕಾಲುವೆ ಗಾತ್ರ ಕಿರಿದಾಗಿಸಿ ಇನ್ನಷ್ಟುಎಕರೆಜಮೀನು ಭೂಗಳ್ಳರ ಪಾಲಾಗುವಂತೆ ಮಾಡುವುದುಈ ಕಾಮಗಾರಿಯಉದ್ದೇಶವಾಗಿದೆ'ಎಂದುರೆಂದುನಗರಸಭೆ ಮಾಜಿ ಸದಸ್ಯ ಎಂ.ಎಸ್.ಬಾಬುಲಾಲ್‌ತಮ್ಮಅಭಿಪ್ರಾಯವನ್ನು ಪತ್ರಿಕೆಗೆ ತಿಳಿಸಿದರು.

ಸಾರ್ವಜನಿಕರಆರೋಪ :ಜೆ.ಸಿ.ಬಡಾವಣೆ 1ನೇ ಮೇನ್ ನ 5ನೇ ಕಾಸ್ ನಲ್ಲಿರುವ ಕೆಳ ಹಂತದ ಸೇತುವೆಯನ್ನು ಎತ್ತರಿಸಿರಿ, ಅಲ್ಲಿಉತ್ತಮವಾದರಸ್ತೆ ನಿರ್ಮಿಸಿರಿ, ಇದಕ್ಕಾಗಿ ರೂ.50 ಲಕ್ಷಅನುದಾನ ದೊರಕಿಸಿ, ಸಾವಿರಾರುಜನರ ಸಂಚಾರ-ಕ್ಕೆ ಅನುಕೂಲವಾಗುತ್ತದೆಎಂದು ಈ ಭಾಗದಜನಸಾಮಾನ್ಯರುದುಂಬಾಲು ಬಿದ್ದರೂ ಸ್ಪಂದಿಸದರಾಜಕಾರಣಿಗಳು ಒತ್ತುವರಿದಾರರಿಗೆ ಅನುಕೂಲ ಮಾಡಿಕೊಡಲು ರೂ.4.82 ಕೋಟಿಅನುದಾನ ಸದ್ದಿಲ್ಲದೆ ಹೇಗೆ ಬಿಡುಗ-ಡೆ ಮಾಡಿಸಿದರು ಎಂದುಕಾಮಗಾರಿ ಸ್ಥಳದಲ್ಲಿ ನಿಂತಿದ್ದಅನೇಕರು ಆಗ್ರಹಿಸಿದರು. ಎಸ್.ಜೆ.ವಿ.ಪಿ. ಕಾಲೇಜಿನ ಹಿಂಭಾಗಅಂದಾಜು 250 ಮೀಟ-ರ್‌ಉದ್ದಕ್ಕೆಕಾಂಕ್ರೀಟ್‌ಚರಂಡಿ ನಿರ್ಮಾಣಕಾಮಗಾರಿ ಕೈಗೊಳ್ಳಲಾಗಿದೆ.ಈ ಚರಂಡಿಯ ಅಗಲ 4 ರಿಂದ 5 ಮೀ.ವರೆಗೆಇರಲಿದೆ, ಕಂದಾಯಇಲಾಖೆಯಿಂದ ಸರ್ವೆ ಮಾಡಿಸಿ ಕಾಮಗಾರಿ ಕೈಗೊಳ್ಳಲಾಗಿದೆ ಎಂದು ಸಣ್ಣ ನೀರಾವರಿ ಇಲಾಖೆ ಎಇಇ ಹರೀಶ್‌ಪತ್ರಿಕೆಗೆ ಮಾಹಿತಿ ನೀಡಿದರು.

ಸಾಕ್ಷ್ಯ ಚಿತ್ರ ನಿರ್ಮಾಣದ ನಿರ್ದೇಶಕಿಯಾಗಿ ಹಾವೇರಿ ನಗರದ ಪ್ರಿಯಾಂಕ ಆಯ್ಕೆ

ವಿಸ್ಮಯವಾಣಿ ಸುದ್ದಿ ಹಾವೇರಿ : ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ 2025-26ನೇ ಸಾಲಿನ ಸಾಕ್ಷ್ಯ ಚಿತ್ರ ನಿರ್ಮಾಣದ ನಿರ್ದೇಶಕಿಯಾಗಿ ಹಾವೇರಿ ನಗರದ ಪ್ರಿಯಾಂಕ ಎಸ್.ಕೊಪ್ಪದ ಆಯ್ಕೆಯಾಗಿದ್ದಾ-ರೆ.ಎಸ್‌ಸಿಎಸ್‌ಪಿ,ಟಿಎಸ್‌ಪಿ ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿರ್ದೇಶಕರಿಂದ ರಾಜ್ಯದ ಕಲೆ,ಸಂಸ್ಕೃತಿ,ಜನಪದ ಕಲೆ, ವಿಶಿಷ್ಟ ಸಾಧನೆ ಪರಿಶಿಷ್ಟ ಜಾತಿ ಮಾಡಿದ ವ್ಯಕ್ತಿಗಳು, ಸಾಧಕರು ಮತ್ತು ಎಸ್‌ಸಿ, ಎಸ್‌ಟಿ ಜನರಿಗಾಗಿ ಸರ್ಕಾರ ರೂಪಿಸಿರುವ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತು ಸಾಕ್ಷ್ಯಚಿತ್ರ ನಿರ್ದೇಶಿಸಿ, ನಿರ್ಮಿಸಿ ಕೊಡಲು ಅರ್ಜಿ ಆಹ್ವಾನಿಸಲಾಗಿತ್ತು. ಇದರನ್ವಯ ಪರಿಣತ ತಾಂತ್ರಿಕ ಮೌಲ್ಯಮಾಪನ ಸಮಿತಿಯಲ್ಲಿ ಆಯ್ಕೆಯಾಗಿರುವ ಕುರಿತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಛಾಯಾ ಮತ್ತು ಚಲನಚಿತ್ರ ಶಾಖೆ ಜಂಟಿ ನಿರ್ದೇಶಕ ಮಂಜುನಾಥ ಡೊಳ್ಳಿನ ಕಾರ್ಯಾದೇಶ ನೀಡಿದ್ದಾರೆ.

ಇಂದು ಖೋ-ಖೋ ಪಂದ್ಯಾವಳಿ

ವಿಸ್ಮಯವಾಣಿ ಸುದ್ದಿ ದಾವಣಗೆರೆ: ಬಾಪೂಜಿ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ ಅಂಡ್ ರಿಸರ್ಚ್ ಹಾಗೂ ಬಾಪೂಜಿ ಇನ್ಸ್ಟಿಟ್ಯೂಟ್ ಆಫ್ ಹೈ-ಟೆಕ್ ಎಜುಕೇಶನ್ ಸಹಯೋಗದಲ್ಲಿ ದಾವಣಗೆರೆ ವಿಶ್ವವಿದ್ಯಾಲಯದ ವತಿಯಿಂದ 2025-26 ನೇ ಸಾಲಿನ ಅಂತರ ಕಾಲೇಜು ಪುರುಷರ ಖೋ-ಖೋ ಪಂದ್ಯಾವಳಿ ಹಾಗೂ ಪುರುಷ ಮತ್ತು ಮಹಿಳೆಯರ ವಿಶ್ವವಿದ್ಯಾಲಯ ತಂಡದ ಆಯ್ಕೆ ಪ್ರಕ್ರಿಯೆಯ ಉದ್ಘಾಟನಾ ಸಮಾರಂಭ ಮಾರ್ಚ್ 11ರ ಇಂದು ಬೆಳಿಗ್ಗೆ 10:30 ಕ್ಕೆ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದೆ. ಬಾಪೂಜಿ ಬಿ-ಸ್ಕೂಲ್ ಅಧ್ಯಕ್ಷರಾದ ಅಥಣಿ ಎಸ್. ವೀರಣ್ಣ ಉದ್ಘಾಟನೆ ನೆರವೇರಿಸಲಿದ್ದಾರೆ. ದಾವಣಗೆರೆ ವಿಶ್ವವಿದ್ಯಾಲಯದ ಕುಲಸಚಿವ ಎಸ್. ಬಿ. ಗಂಟಿ, ಸಿಂಡಿಕೇಟ್ ಸದಸ್ಯ ಹೆಚ್. ತಿಪ್ಪೇಸ್ವಾಮಿ ದಾವಣಗೆರೆ ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ವಿಭಾಗದ ಡೀನ್ ಮತ್ತು ನಿರ್ದೇಶಕ ಡಾ. ಕೆ. ವೆಂಕಟೇಶ್, ಬಿ.ಐ.ಹೆಚ್ ಇ ಪ್ರಾಂಶುಪಾಲ ಬಿ. ವೀರಪ್ಪ ಭಾಗವಹಿಸಲಿದ್ದಾರೆ. ಸಮಾರಂಭದ ಅಧ್ಯಕ್ಷತೆಯನ್ನು ಬಾಪೂಜಿ ಬಿ-ಸ್ಕೂಲ್ ನಿರ್ದೇಶಕ ಡಾ. ಸ್ವಾಮಿ ತ್ರಿಭುವನಂದ ವಹಿಸಲಿದ್ದಾರೆ. ಬಿ.ಎ.ಎಂ.ಆರ್ ಪ್ರಾಂಶುಪಾಲ ಪ್ರಕಾಶ್ ಎಸ್. ಅಳಲಗೇರಿ ಮತ್ತು ದೈಹಿಕ ನಿರ್ದೇಶಕ ಜಿ.ಆರ್. ಸದಾಶಿವಪ್ಪ ಉಪಸ್ಥಿತರಿರುವರು. ಇಂದು ಸಂಜೆ 5:30 ಕ್ಕೆ ಸಮಾರೋಪ ಸಮಾರಂಭ ಹಾಗೂ ಬಹುಮಾನ ವಿತರಣೆ ನಡೆಯಲಿದ್ದು, ದಾವಣಗೆರೆ ಶ್ವವಿದ್ಯಾಲಯದ ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ ರಾಜಕುಮಾರ ಎಂ.ಎಸ್, ಖೋ-ಖೋ ತರಬೇತುದಾರ ಮತ್ತು ಕರ್ನಾಟಕ ರಾಜ್ಯ ಖೋ-ಖೋ ಸಂಸ್ಥೆಯ ಕಾರ್ಯದರ್ಶಿ ಜೆ. ರಾಮಲಿಂಗಪ್ಪ, ದಾವಣಗೆರೆ ವಿಶ್ವವಿದ್ಯಾಲಯ ದೈಹಿಕ ಶಿಕ್ಷಣ ನಿರ್ದೇಶಕರ ಸಂಘದ ಕಾರ್ಯದರ್ಶಿ ವೀರೇಂದ್ರ ಕೆ.ಎಂ, ಉಪಾಧ್ಯಕ್ಷ ಚಂದ್ರಶೇಖರ್ ಸಿ. ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದ ಸಂಘಟನಾ ಕಾರ್ಯದರ್ಶಿಯಾಗಿ ದೈಹಿಕ ಶಿಕ್ಷಣ ನಿರ್ದೇಶಕ ಜಿ.ಆರ್. ಸದಾಶಿವಪ್ಪ ಉಪಸ್ಥಿತರಿರಲಿದ್ದಾರೆ.

ಹನಗವಾಡಿ ವೀರಭದ್ರೇಶ್ವರ ಬ್ರಹ್ಮರಥೋತ್ಸವ

ವಿಸ್ಮಯವಾಣಿ ಸುದ್ದಿ ಹರಿಹರ : ತಾಲ್ಲೂಕಿನ ಹನಗವಾಡಿ ಗ್ರಾಮದಲ್ಲಿ ವೀರಭದ್ರೇಶ್ವರ ಸ್ವಾಮಿಯ ಬ್ರಹ್ಮ ರಥೋತ್ಸವ ಹಾಗೂ ಗುಗ್ಗಳ ಕಾರ್ಯಕ್ರಮವು ನೂರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ಜರುಗಿ-ತು. ಪೂಜಾ ಕಾರ್ಯದಲ್ಲಿ ವೀರಭದ್ರೇಶ್ವರ, ರೇವಣ ಸಿದ್ದೇಶ್ವರ, ಬಸವೇಶ್ವರ ಸ್ವಾಮಿಗಳ ಪಲ್ಲಕ್ಕಿ ಮೆರವಣಿಗೆಯು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು.

ವಿಸ್ಮಯವಾಣಿ ಸುದ್ದಿ ಹರಿಹರ : ನಗರದತಾಲೂಕು ಪಂಚಾಯತಿ ಸಭಾಂಗಣದಲ್ಲಿತೋಟಗಾರಿಕೆ ಇಲಾಖೆ ವತಿಯಿಂದ ಮಧುವನ ಮತ್ತುಜೇನು ಸಾಕಾಣಿಕೆಅಭಿವೃದ್ಧಿಯೋಜನೆಯಡಿಯಲ್ಲಿ, ರೈತರಿಗೆತರಬೇತಿ ಹಾಗೂ ಎ.ಎಂ.ಸಿ ದ್ರವರೂಪಧಸೂಕ್ಷ್ಮಾಣುಜೀವಿಗಳ ಸಮ್ಮಿಶ್ರಣಗಳನ್ನು ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ ವಿತರಣೆಕಾರ್ಯಕ್ರಮವನ್ನು ಶಾಸಕ ಬಿ.ಪಿ ಹರೀಶ್ ಉದ್ಘಾಟಿಸಿ, ರೈತರಿಗೆ ಬೀಜಗಳು ವಿತರಿಸಿದರು. ದಾವಣಗೆರೆ ತರಳಬಾಳು ಕೃಷಿ ವಿಶ್ವವಿದ್ಯಾಲಯದ ಸಂಪನ್ಮೂಲ ವ್ಯಕ್ತಿಡಾ. ಅವಿನಾಶ್, ತೋಟಗಾರಿಕೆ ಇಲಾಖೆ ಅಧಿಕಾರಿ ಮಮತಾ ಮುಖಂಡರಾದ ಹರಗನಹಳ್ಳಿ ಮಂಜುನಾಥ್, ರೈತ ಮುಖಂಡರು ಉಪಸ್ಥಿತರಿದ್ದರು

ಸಂಭ್ರಮದ ಡೆಂಗಿಸಿದ್ದೇಶ್ವರ ಪಲ್ಲಕ್ಕಿ ಉತ್ಸವ

ವಿಸ್ಮಯವಾಣಿ ಸುದ್ದಿ ಮುರಗೋಡ : ಸಮೀಪದ ಹಿರೇಬೂದನೂರ ಗ್ರಾಮದ ಶ್ರೀಗುರು ಡೆಂಗಿಸಿದ್ದೇಶ್ವರ ಜಾತ್ರಾ ಮಹೋತ್ಸವ ನಿಮಿತ್ತ ಸೋಮವಾರ ನಾನಾ ಗ್ರಾಮದ ಪಲ್ಲಕ್ಕಿಗಳ ಉತ್ಸವ ಮೆರವಣಿಗೆ ಸುಮಂಗಲೆಯರ ಆರತಿ, ಕುಂಭಮೇಳ, ಡೊಳ್ಳು ಕುಣಿತ, ಭಂಡಾರ ಎರಚಾಟದೊಂದಿಗೆ ಸಂಭ್ರಮದಿಂದ ನೆರವೇರಿತು.

ಪಲ್ಲಕ್ಕಿ ಉತ್ಸವ ಸಂಚರಿಸುವಾಗ ಭಕ್ತರು ನಾನಾ ಜಯಘೋಷದ ಝೇಂಕಾರ ಮೊಳಗಿಸಿದರು. ಪಲ್ಲಕ್ಕಿ ಉತ್ಸವ ಮೆರವಣಿಗೆ ಶ್ರೀಗುರು ಡೆಂಗಿಸಿದ್ದೇಶ್ವರ ದೇವಸ್ಥಾನದಿಂದ ಗ್ರಾಮದ ನಾನಾ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಪಲ್ಲಕ್ಕಿಗೆ ಭಕ್ತರಿಂದ ನೀರು ಸುರಿದು ಉದುಬತ್ತಿ ಬೆಳಗಿ ಪೂಜೆ ಸಲ್ಲಿಸಿ, ಸಕ್ಕರೆ-ಬೆಲ್ಲ ಹಾಗೂ ಬಾಳೆಹಣ್ಣು ನೇವೈದ್ಯ ಅರ್ಪಿಸುವುದು ಸಾಮಾನ್ಯವಾಗಿತ್ತು.

ಸಾನಿಧ್ಯ ವಹಿಸಿದ್ದ ಶ್ರೀ ಸಿದ್ದಪ್ಪ ಸ್ವಾಮೀಜಿ ಹೆಗಡೆ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಮಂಜುಳಾ ನಾಯ್ಕರ ಚಾಲನೆ ನೀಡಿದರು.

ಯುವರಂಗ ಕಲಾವಿದ ಯಲ್ಲಪ್ಪ ನಾಯ್ಕರ, ಪಿಡಿಒ ಗುರುಪಾದ ಗಿರೆಣ್ಣವರ ನೇತೃತ್ವ ವಹಿಸಿದ್ದರು.

ಅಬ್ಬಾ ಇಷ್ಟೊಂದಾ! ಟೀಮ್ ಇಂಡಿಯಾಗೆ ಬಹುಮಾನ ಘೋಷಣೆ

ಟಿ20 ವಿಶ್ವಕಪ್ ಗೆದ್ದ ಟೀಮ್ ಇಂಡಿಯಾಗೆ ಬಿಸಿಸಿಐ ಬರೋಬ್ಬರಿ 131 ಕೋಟಿ ರೂ. ನಗದು ಬಹುಮಾನ ಘೋಷಿಸಿದೆ. ಈ ಬಹುಮಾನ ಮೊತ್ತವನ್ನು ಭಾರತ ತಂಡದ ಆಟಗಾರರಿಗೆ ಮತ್ತು ಸಿಬ್ಬಂದಿ ವರ್ಗಗಳಿಗೆ ಹಂಚಲಾಗುವುದು ಎಂದು ಬಿಸಿಸಿಐ ತನ್ನ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದೆ.

2024ರ ಟಿ20 ವಿಶ್ವಕಪ್ ಗೆದ್ದ ಭಾರತ ತಂಡಕ್ಕೆ 125 ಕೋಟಿ ರೂ. ಬಹುಮಾನ ಮೊತ್ತ ನೀಡಲಾಗಿತ್ತು. ಈ ಬಾರಿ 6 ಕೋಟಿ ರೂ. ಹೆಚ್ಚಿಸಲಾಗಿದೆ. ಅದರಂತೆ ಟೀಮ್ ಇಂಡಿ- ಯಾ ಬರೋಬ್ಬರಿ 131 ಕೋಟಿ ರೂ.ಗಳ ನಗದು ಬಹುಮಾನ ಪಡೆಯಲಿದ್ದಾರೆ.

ಇತ್ತ ಟಿ20 ವಿಶ್ವಕಪ್ ಗೆದ್ದ ಭಾರತ ತಂಡಕ್ಕೆ ಐಸಿಸಿ ಕಡೆಯಿಂದ ಸಿಕ್ಕಿರುವುದು 27.60 ಕೋಟಿ ರೂ. ಮಾತ್ರ. ಇದೀಗ ಚಾಂಪಿಯನ್ ಪಟ್ಟ ಅಲಂಕರಿಸಿದ ಟೀಮ್ ಇಂಡಿಯಾಗೆ ಭಾರತೀಯ ಕ್ರಿಕೆಟ್ ಬೋರ್ಡ್ ದುಪ್ಪಟ್ಟು ಮೊತ್ತದ ಬಹುಮಾನ ಘೋಷಿಸಿ ಗಮನ ಸೆಳೆದಿದ್ದಾರೆ.

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಫೈನಲ್‌ನಲ್ಲಿ ನ್ಯೂಝಿಲೆಂಡ್ ತಂಡವನ್ನು ಸೋಲಿಸುವ ಮೂಲಕ ಭಾರತ ಪ್ರತಿಷ್ಠಿತ ಟ್ರೋಫಿಯನ್ನು ಎತ್ತಿಹಿಡಿದಿದೆ. ಈ ಮೂಲಕ ಟಿ20 ವಿಶ್ವಕಪ್ ಇತಿಹಾಸದಲ್ಲೇ ಪ್ರಶಸ್ತಿ ಉಳಿಸಿಕೊಂಡ ಮೊದಲ ತಂಡವಾಗಿ ಟೀಮ್ ಇಂಡಿಯಾ ಐತಿಹಾಸಿಕ ಸಾಧನೆ ಮಾಡಿದೆ. ಈ ಮೂಲಕ ಮೂರನೇ ಬಾರಿ ಟಿ20 ವಿಶ್ವಕಪ್ ಮುಡಿಗೇರಿಸಿಕೊಂಡಿದೆ.

ಈ ಐತಿಹಾಸಿಕ ಸಾಧನೆಗಾಗಿ ಮಂಡಳಿಯು ಆಟಗಾರರು, ಸಹಾಯಕ ಸಿಬ್ಬಂದಿ ಮತ್ತು ಆಯ್ಕೆದಾರರನ್ನು ಮತ್ತೊಮ್ಮೆ ಅಭಿನಂದಿಸುತ್ತದೆ ಮತ್ತು ಭವಿಷ್ಯದಲ್ಲಿ ಅವರಿಗೆ ಯಶಸ್ಸು ಮುಂದುವರಿಯಲಿ ಎಂದು ಹಾರೈಸುತ್ತದೆ.

ಅಲ್ಲದೆ ಟಿ20 ವಿಶ್ವಕಪ್‌ನಲ್ಲಿ ಜಯಗಳಿಸಿದ ಟೀಮ್ ಇಂಡಿ- ಯಾಗೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) 131 ಕೋಟಿ ರೂಪಾಯಿ ನಗದು ಬಹುಮಾನವನ್ನು ನೀಡಲಿದೆ ಎಂದು ಘೋಷಿಸಿದೆ.

ಟಿ20 ವಿಶ್ವಕಪ್ ಮುಗಿದ ಬೆನ್ನಲ್ಲೇ ಟೂರ್ನಮೆಂಟ್ ತಂಡ ಪ್ರಕಟಿಸಿದ ಐಸಿಸಿ

2026 ರ ಟಿ20 ವಿಶ್ವಕಪ್ ಮುಗಿದ ಒಂದು ದಿನದ ನಂತರ ಎಂದಿನಂತೆ ಐಸಿಸಿ ಟೂರ್ನಮೆಂಟ್‌ನ ಅತ್ಯುತ್ತಮ ತಂಡವನ್ನು ಪ್ರಕಟಿಸಿದೆ. ಈ ತಂಡದಲ್ಲಿ ಭಾರತದ 4 ಆಟಗಾರರು ಸ್ಥಾನ ಪಡೆದಿದ್ದಾರೆ. ಆದಾಗ್ಯೂ ಫೈನಲ್‌ನಲ್ಲಿ ಟೀಂ ಇಂಡಿಯಾ ವಿರುದ್ಧ ಸೋತ ರನ್ನರ್ ಅಪ್ ನ್ಯೂಜಿಲೆಂಡ್ ತಂಡದ ಯಾವುದೇ ಆಟಗಾರನಿಗೆ ಈ ತಂಡದಲ್ಲಿ ಸ್ಥಾನ ಸಿಕ್ಕಿಲ್ಲ. ಟಿ20 ವಿಶ್ವಕಪ್ ಇತಿಹಾಸದಲ್ಲಿ ಅತ್ಯಂತ ವೇಗದ ಶತಕ ಬಾರಿಸಿದ ಫಿನ್ ಅಲೆನ್ ಕೂಡ ಈ ತಂಡಕ್ಕೆ ಆಯ್ಕೆಯಾಗಿಲ್ಲ. ಆಶ್ಚರ್ಯಕರ ಸಂಗತಿಯೆಂದರೆ ಜಿಂಬಾಬ್ವೆಯ ಯುವ ಓಪನರ್ ಬ್ರಿಯಾನ್ ಬೆನೆಟ್ ಕೂಡ ತಂಡದಲ್ಲಿ ಸ್ಥಾನ ಪಡೆದಿಲ್ಲ. ಹಾಗಿದ್ದರೆ, ಈಗ ಈ ತಂಡದಲ್ಲಿ ಯಾವ 11 ಆಟಗಾರರು ಸ್ಥಾನ ಪಡೆದಿದ್ದಾರೆ ಎಂಬುದನ್ನು ನೋಡುವುದಾದರೆ..

ಐಸಿಸಿ ಆಯ್ಕೆ ಮಾಡಿರುವ ಟಿ20 ವಿಶ್ವಕಪ್ ತಂಡದಲ್ಲಿ ಆರಂಭಿಕ ಆಟಗಾರರಾಗಿ ಪಾಕಿಸ್ತಾನದ ಆರಂಭಿಕ ಸಾಹಿಬ್‌ಜಾದಾ ಫರ್ಹಾನ್ ಮತ್ತು ಭಾರತದ ಆರಂಭಿಕ ಸಂಜು ಸ್ಯಾಮ್ಸನ್ ಆಯ್ಕೆಯಾಗಿದ್ದಾರೆ. ಇವರಿಬ್ಬರು ಈ ಆವೃತ್ತಿಯಲ್ಲಿ ಅತ್ಯಧಿಕ ರನ್ ಗಳಿಸಿದ ಆಟಗಾರರ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಇನ್ನು ಮೂರನೇ ಕ್ರಮಾಂಕದಲ್ಲಿ ಮತ್ತೊಬ್ಬ ಭಾರತೀಯ ಆಟಗಾರ ಇಶಾನ್ ಕಿಶನ್ ಸ್ಥಾನ ಪಡೆದಿದ್ದರೆ, ದಕ್ಷಿಣ ಆಫ್ರಿಕಾ ತಂಡದ ನಾಯಕ ಐಡೆನ್ ಮಾರ್ಕ್ರಾಮ್‌ಗೆ ನಂತರದ ಸಿಕ್ಕಿದೆ. ಇದರ ಜೊತೆಗೆ ಐಸಿಸಿಯ ಈ ತಂಡದ ನಾಯಕತ್ವವೂ ಮಾರ್ಕ್ರಾಮ್ ಪಾಲಾಗಿದೆ.

ಆಲ್‌ರೌಂಡರ್‌ಗಳ ಕೋಟಾದಲ್ಲಿ ಭಾರತದ ಸ್ಟಾರ್ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಆಯ್ಕೆಯಾಗಿದ್ದರೆ, ಅವರ ಜೊತೆಗೆ ಇಂಗ್ಲೆಂಡ್ ಸ್ಪಿನ್ ಆಲ್‌ರೌಂಡರ್ ವಿಲ್ ಜಾಕ್ಸ್ ಕೂಡ ಈ ತಂಡದಲ್ಲಿ ಅವಕಾಶ ಪಡೆದಿದ್ದಾರೆ. ಹಾಗೆಯೇ ವೆಸ್ಟ್ ಇಂಡೀಸ್ ಆಲ್‌ರೌಂಡರ್ ಜೇಸನ್ ಹೋಲ್ಡರ್ ಕೂಡ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಉಳಿದಂತೆ ಬೌಲಿಂಗ್ ವಿಭಾಗದಲ್ಲಿ ಜಸ್ಪ್ರೀತ್ ಬುಮ್ರಾ, ಲುಂಗಿ ಎನ್‌ಗಿಡಿ, ಆದಿಲ್ ರಶೀದ್ ಮತ್ತು ಬ್ಲೆಸಿಂಗ್ ಮುಜರಬಾನಿ ಸ್ಥಾನ ಪಡೆದಿದ್ದಾರೆ.

ನಿವೃತ್ತಿ ಗಾಸಿಪ್ : ಮೌನ ಮುರಿದ ಯಾದವ್

2024 ರ ಟಿ20 ವಿಶ್ವಕಪ್ ಮುಗಿದ ಬಳಿಕ ಭಾರತ ಟಿ20 ತಂಡದ ನಾಯಕತ್ವವಹಿಸಿಕೊಂಡ ಸೂರ್ಯಕುಮಾರ್ ಯಾದವ್ ನಾಯಕನಾಗಿ ತಂಡವನ್ನು ದಾಖಲೆಯ ಗೆಲುವುಗಳತ್ತ ಮುನ್ನಡೆಸಿದ್ದಾರೆ. ಆದಾಗ್ಯೂ ಆಟಗಾರನಾಗಿ ಸೂರ್ಯಕುಮಾರ್ ಸಾಕಷ್ಟು ಏರಿಳಿತಗಳನ್ನು ಕಂಡಿ- ದ್ದಾರೆ. ಟಿ20 ವಿಶ್ವಕಪ್ ಆರಂಭಕ್ಕೂ ಮುನ್ನ ಸೂರ್ಯಕುಮಾರ್ ಬರೋಬ್ಬರಿ 1 ವರ್ಷದಿಂದ ರನ್ ಬರ ಎದುರಿಸಿದ್ದರು. ಆದ- ರೆ ವಿಶ್ವಕಪ್ ಸಮೀಪವಾಗುತ್ತಿದ್ದಂತೆ ಫಾರ್ಮ್ ಕಂಡುಕೊಂಡಿದ್ದ ಸೂರ್ಯ, ಇದೀಗ ತಂಡವನ್ನು ದಾಖಲೆಯ ಗೆಲುವಿನತ್ತ ಮುನ್ನಡೆಸಿದ್ದಾರೆ. ಸೂರ್ಯ ನಾಯಕತ್ವದಲ್ಲಿ ಉತ್ತಮ ಪ್ರದರ್ಶನ ನೀಡಿದ ಟೀಂ ಇಂಡಿ- ಯಾ ಅಹಮದಾಬಾದ್‌ನಲ್ಲಿ ನಡೆದ ಟಿ20 ವಿಶ್ವಕಪ್ ಫೈನಲ್‌ನಲ್ಲಿ ನ್ಯೂಜಿಲೆಂಡ್ ತಂಡವನ್ನು ಸೋಲಿಸಿ ಟ್ರೋಫಿಯನ್ನು ಎತ್ತಿಹಿಡಿಯಿತು. ಆದಾಗ್ಯೂ, 35 ವರ್ಷದ ಸೂರ್ಯಕುಮಾರ್ ಯಾದವ್ ಪಂದ್ಯಾವಳಿಯ ನಂತರ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾಗುತ್ತಾರೆ ಎಂಬ ಊಹಾಪೋಹಗಳು ಪಂದ್ಯಾವಳಿಯ ಆರಂಭದಿಂದಲೂ ಕೇಳಿಬಂದಿದ್ದವು. ಇದೀಗ ಫೈನಲ್ ಮುಗಿದ ಬಳಿಕ ಮಾತನಾಡಿರುವ ಸೂರ್ಯ, ನಿವೃತ್ತಿಯ ಬಗ್ಗೆ ಹರಡಿರುವ ವದಂತಿಗಳಿಗೆ ತೆರೆ ಎಳೆದರು. ಭಾರತ ಚಾಂಪಿಯನ್ ಆದ ಹೊರತಾಗಿಯೂ ಫೈನಲ್ ಪಂದ್ಯದಲ್ಲಿ ನಾಯಕ ಸೂರ್ಯಕುಮಾರ್ ಯಾದವ್ ಯಾವುದೇ ರನ್ ಗಳಿಸದೆ ಔಟಾದರು. ಆದಾಗ್ಯೂ ಪಂದ್ಯಾವಳಿಯಲ್ಲಿ ಆಡಿದ ಒಂಬತ್ತು ಪಂದ್ಯಗಳಲ್ಲಿ ಒಟ್ಟು 242 ರನ್ ಕಲೆಹಾಕಿರುವ ಸೂರ್ಯ 2026 ರ ಟಿ20 ವಿಶ್ವಕಪ್‌ನಲ್ಲಿ ಭಾರತದ ಪರ ಅತಿ ಹೆಚ್ಚು ರನ್ ಗಳಿಸಿದ ಮೂರನೇ ಆಟಗಾರ ಎನಿಸಿಕೊಂಡಿದ್ದಾರೆ.



ನಿವೃತ್ತಿ ಬಗ್ಗೆ ಸೂರ್ಯ ಹೇಳಿದ್ದೇನು?

2026 ರ ಟಿ20 ವಿಶ್ವಕಪ್ ಫೈನಲ್ ಗೆದ್ದ ನಂತರ, ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಪತ್ರಿಕಾಗೋಷ್ಠಿಯಲ್ಲಿ ನಿವೃತ್ತಿಯ ಕುರಿತ ಪ್ರಶ್ನೆಗಳಿಗೆ ಹಾಸ್ಯಮಯವಾಗಿ ಪ್ರತಿಕ್ರಿಯಿಸಿದರು. ಪಂದ್ಯದ ನಂತರದ ಪತ್ರಿಕಾಗೋಷ್ಠಿಯಲ್ಲಿ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರೊಂದಿಗೆ ಹಾಜರಿದ್ದ ಸೂರ್ಯ, 'ಎಲ್ಲವೂ ಚೆನ್ನಾಗಿ ನಡೆಯುತ್ತಿರುವಾಗ, ನಿವೃತ್ತಿಯ ಬಗ್ಗೆ ಏಕೆ ಯೋಚಿಸಬೇಕು?. ಹೀಗಾಗಿ ನಾನು ನಿವೃತ್ತಿ ನಿರ್ಧಾರದ ಬಗ್ಗೆ ಯಾವ ಯೋಚನೆಯನ್ನು ಮಾಡಿಲ್ಲ. ಇನ್ನೂ ನನ್ನಲ್ಲಿ ಸಾಕಷ್ಟು ಕ್ರಿಕೆಟ್ ಉಳಿದಿದೆ.

ಸನತ್ ಜಯಸೂರ್ಯ ರಾಜೀನಾಮೆ;

ಮುಖ್ಯ ಕೋಚ್ ಆಗಿ ಗ್ಯಾರಿ ಕರ್ಸ್ಟನ್ ನೇಮಕ!

ಶ್ರೀಲಂಕಾ ಕ್ರಿಕೆಟ್ ತನ್ನ ಪುರುಷರ ತಂಡದ ಮುಖ್ಯ ಕೋಚ್ ಆಗಿ ಗ್ಯಾರಿ ಕರ್ಸ್ಟನ್ ಅವರನ್ನು ನೇಮಿಸಿದೆ. ಪಲ್ಲೆಕೆಲೆಯಲ್ಲಿ ಇಂಗ್ಲೆಂಡ್ ವಿರುದ್ಧ ಶ್ರೀಲಂಕಾ ಸೋತ ನಂತರ ಪತ್ರಿಕಾಗೋಷ್ಠಿಯಲ್ಲಿ ಸನತ್ ಜಯಸೂರ್ಯ ರಾಜೀನಾಮೆ ಘೋಷಿಸಿದ್ದರು. ಬಳಿಕ ಈ ಬೆಳವಣಿಗೆ ಸಂಭವಿಸಿದೆ.

'ನನ್ನ ಒಪ್ಪಂದ ಜೂನ್‌ನಲ್ಲಿ ಕೊನೆಗೊಳ್ಳುತ್ತದೆ. ಆದರೆ, ಅದಕ್ಕೂ ಮೊದಲು ನಾನೇ ಈ ಹುದ್ದೆಯಿಂದ ನಿರ್ಗಮಿಸುತ್ತೇನೆ. ನನ್ನ ರಾಜೀನಾಮೆಯನ್ನು ಅಂಗೀಕರಿಸುವಂತೆ ಶ್ರೀಲಂಕಾ ಕ್ರಿಕೆಟ್‌ನೊಂದಿಗೆ ಮಾತನಾಡುತ್ತೇನೆ' ಎಂದು ಶನಿವಾರ ಪಾಕಿಸ್ತಾನ ವಿರುದ್ಧ ಶ್ರೀಲಂಕಾ ಸೋತ ನಂತರ ಜಯಸೂರ್ಯ ಸುದ್ದಿಗಾರರಿಗೆ ತಿಳಿಸಿದರು. 'ನಾವು ಇನ್ನೂ ಉತ್ತಮವಾಗಿ ಆಡಬೇಕಿತ್ತು. ಕ್ಷಮಿಸಿ ಮತ್ತು ಅಭಿಮಾನಿಗಳಲ್ಲಿ ಕ್ಷಮೆಯಾಚಿಸುತ್ತೇನೆ' ಎಂದು ಶ್ರೀಲಂಕಾ 1996ರ ಏಕದಿನ ವಿಶ್ವಕಪ್ ಗೆದ್ದಾಗ ಪ್ಲೇಯರ್ ಆಫ್ ದ ಟೂರ್ನಮೆಂಟ್ ಪ್ರಶಸ್ತಿ ಪಡೆದಿದ್ದ ಜಯಸೂರ್ಯ ಹೇಳಿದರು. 3 ವಾರಗಳಿಗಿಂತ ಕಡಿಮೆ ಅವಧಿಯಲ್ಲಿ, ಖಐಐ ಜಯಸೂರ್ಯ ಅವರ ಬದಲಿಗೆ ಕೋಚ್ ಅನ್ನು ಕಂಡುಕೊಂಡಿದೆ. ಪತ್ರಿಕಾ ಪ್ರಕಟಣೆಯಲ್ಲಿ, ಕ್ರಿಕೆಟ್ ಸಂಸ್ಥೆಯು ದಕ್ಷಿಣ ಆಫ್ರಿಕಾದ ಮಾಜಿ ಕ್ರಿಕೆಟಿಗ ಮತ್ತು ಗೌರವಾನ್ವಿತ ಕೋಚ್ ಗ್ಯಾರಿ ಕರ್ಸ್ಟನ್ ಅವರನ್ನು ಮುಂದಿನ 2 ವರ್ಷಗಳ ಕಾಲ ತಮ್ಮ ಮುಖ್ಯ ಕೋಚ್ ಆಗಿ ದೃಢಪಡಿಸಿತು. ಕರ್ಸ್ಟನ್ ಟಿ20 ವಿಶ್ವಕಪ್ ಸಮಯದಲ್ಲಿ ನಮೀಬಿಯಾಕ್ಕೆ ಸಲಹೆಗಾರರಾಗಿ ಕೆಲಸ ಮಾಡುತ್ತಿದ್ದರು. ಆದರೆ, ಭಾರತದ 2011ರ ವಿಶ್ವಕಪ್ ವಿಜೇತ ಅಭಿಯಾನದ ಭಾಗವಾಗಿದ್ದಕ್ಕಾಗಿ ಅವರನ್ನು ಸ್ಮರಿಸಲಾಗುತ್ತದೆ. ಏಪ್ರಿಲ್ 15 ರಂದು ಕರ್ಸ್ಟನ್ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಅಂದರೆ ಅವರು ಮಾರ್ಚ್‌ನಲ್ಲಿ ಶ್ರೀಲಂಕಾದ ಅಫ್ಘಾನಿಸ್ತಾನ ವಿರುದ್ಧದ ವೈಟ್-ಬಾಲ್ ಸರಣಿಯ ಭಾಗವಾಗಿರುವುದಿಲ್ಲ.

ಬಾಲ್ಯದ ಗೆಳತಿ ವಂಶಿಕಾರೊಂದಿಗೆ ಸಪ್ತಪದಿ ತುಳಿಯಲಿದ್ದಾರೆ ಕುಲದೀಪ್ ಯಾದವ್; ಮಾರ್ಚ್ 14ರಂದು ವಿವಾಹ

ಭಾರತದ ಸ್ಟಾರ್ ಸ್ಪಿನ್ನರ್ ಕುಲದೀಪ್ ಯಾದವ್ ಮಾರ್ಚ್ 14 ರಂದು ಮಸ್ಸೂರಿಯ ರೆಸಾರ್ಟ್‌ನಲ್ಲಿ ತಮ್ಮ ಬಾಲ್ಯದ ಗೆಳತಿ ವಂಶಿಕಾ ಅವರೊಂದಿಗೆ ವಿವಾಹವಾಗಲಿದ್ದಾರೆ. ನಂತರ ಮಾರ್ಚ್ 17 ರಂದು ಲಕ್ನೋದಲ್ಲಿ ಅದ್ದೂರಿ ವಿವಾಹ ಆರತಕ್ಷತೆ ನಡೆಯಲಿದೆ. 2026ರ ಟಿ20 ವಿಶ್ವಕಪ್ ಪಂದ್ಯಾವಳಿಯಿಂದಾಗಿ ಕುಲದೀಪ್ ಮೊದಲಿಗೆ 2025ರ ನವೆಂಬರ್‌ನಲ್ಲಿ ನಿಗದಿಯಾಗಿದ್ದ ವಿವಾಹವನ್ನು ಮುಂದೂಡಿದ್ದರು ಎಂದು ಮಾಧ್ಯಮಗಳು ವರದಿ ಮಾಡಿದ್ದವು.

ಇವರಿಬ್ಬರೂ ಕಾನ್ಪುರದವರಾಗಿದ್ದು, ಕಳೆದ ವರ್ಷ ಲಕ್ನೋದ ಹೋಟೆಲ್‌ನಲ್ಲಿ ನಿಶ್ಚಿತಾರ್ಥ ಮಾಡಿಕೊಂಡರು. ವಂಶಿಕಾ ಸದ್ಯ ಎಲ್‌ಐಸಿ ಉದ್ಯೋಗಿಯಾಗಿ ಕೆಲಸ ಮಾಡುತ್ತಿದ್ದಾರೆ.
ತಂಡದ ಯಶಸ್ಸಿನ ಹೊರತಾಗಿಯೂ, ಕುಲದೀಪ್ ಟಿ20 ವಿಶ್ವಕಪ್‌ನಲ್ಲಿ ಕೇವಲ ಒಂದು ಬಾರಿ ಮಾತ್ರ ಕಾಣಿಸಿಕೊಂಡರು. ಗುಂಪು ಹಂತದಲ್ಲಿ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ವಿರುದ್ಧ 1/14 ಗಳಿಸುವ ಮೂಲಕ ಉತ್ತಮ ಪ್ರದರ್ಶನ ನೀಡಿದರು.
ಈಮಧ್ಯೆ, ಸ್ಪಿನ್ನರ್ ತಂದೆ ರಾಮ್ ಸಿಂಗ್ ಯಾದವ್ ಕಳೆದ ವಾರ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ಭೇಟಿ ಮಾಡಿ ವೈಯಕ್ತಿಕವಾಗಿ ವಿವಾಹ ಆಮಂತ್ರಣವನ್ನು ನೀಡಿದ್ದಾರೆ. ಈ ವಿವಾಹದಲ್ಲಿ ಬಿಸಿಸಿಐನ ಉನ್ನತ ಅಧಿಕಾರಿಗಳು ಮತ್ತು ಹಲವಾರು ಹಾಲಿ ಮತ್ತು ಮಾಜಿ ಕ್ರಿಕೆಟಿಗರು ಭಾಗವಹಿಸಲಿದ್ದಾರೆ. ಕುಲದೀಪ್ ಅವರ ದೀರ್ಘಕಾಲದ ತರಬೇತುದಾರ ಕಪಿಲ್ ದೇವ್ ಪಾಂಡೆ, ಮಾರ್ಚ್ 13 ರಂದು ಮಸ್ಸೂರಿಯ ರೆಸಾರ್ಟ್‌ನಲ್ಲಿ ಹಳದಿ ಮತ್ತು ಮೆಹೆಂದಿ ಸಮಾರಂಭಗಳೊಂದಿಗೆ ವಿವಾಹ ಪ್ರಾರಂಭವಾಗಲಿದೆ ಎಂದು ದೃಢಪಡಿಸಿದರು. ಈಮಧ್ಯೆ, ನ್ಯೂಜಿಲೆಂಡ್ ವಿರುದ್ಧ ಟೀಂ ಇಂಡಿಯಾದ ಟಿ20 ವಿಶ್ವಕಪ್ 2026ರ ಫೈನಲ್ ಗೆಲುವಿನ ಬಗ್ಗೆ ಕುಲದೀಪ್ ಸಂತೋಷ ವ್ಯಕ್ತಪಡಿಸಿದ್ದು, 'ಇದು ಒಂದು ಪ್ರಮುಖ ಗೆಲುವಾಗಿತ್ತು. ಟೂರ್ನಮೆಂಟ್ ತುಂಬಾ ಚೆನ್ನಾಗಿ ನಡೆಯಿತು ಮತ್ತು ನಾವು ಇದಕ್ಕಾಗಿ ಬಹಳ ಸಮಯದಿಂದ ತಯಾರಿ ನಡೆಸುತ್ತಿದ್ದೆವು. ನೀವು ಕ್ರಿಕೆಟ್ ಆಡುವುದು ಇದಕ್ಕಾಗಿಯೇ. ನೀವು ಪ್ರತಿ ಬಾರಿ ಐಸಿಸಿ ಟೂರ್ನಮೆಂಟ್‌ನಲ್ಲಿ ಭಾಗವಹಿಸಿದಾಗ, ನೀವು ಟ್ರೋಫಿಯನ್ನು ಗೆಲ್ಲಲು ಬಯಸುತ್ತೀರಿ. ನಾನು ತಂಡವನ್ನು ಅಭಿನಂದಿಸುತ್ತೇನೆ ಮತ್ತು ನಮ್ಮನ್ನು ಬೆಂಬಲಿಸಿದ್ದಕ್ಕಾಗಿ ಅಭಿಮಾನಿಗಳಿಗೆ ಧನ್ಯವಾದ ಹೇಳುತ್ತೇನೆ. ಸಂಜು ಸ್ಯಾಮ್ಸನ್ ಉತ್ತಮ ಪ್ರದರ್ಶನ ನೀಡಿದ್ದಕ್ಕಾಗಿ ನನಗೆ ತುಂಬಾ ಸಂತೋಷವಾಗಿದೆ. 12 ವರ್ಷದೊಳಗಿನವರಿಂದಲೂ ನನ್ನ ಕ್ರಿ- ಕೆಟ್ ಪ್ರಯಾಣವನ್ನು ಅವರೊಂದಿಗೆ ಹಂಚಿಕೊಂಡಿದ್ದೇನೆ ಮತ್ತು ವರ್ಷಗಳಲ್ಲಿ ಅವರ ಕಠಿಣ ಪರಿಶ್ರಮದ ಪ್ರತಿಫಲವನ್ನು ಅವರು ಪಡೆಯುವುದನ್ನು ನೋಡಿ ನನಗೆ ತುಂಬಾ ಸಂತೋಷವಾಗಿದೆ' ಎಂದರು.

ಸುದ್ದಿ ಚೂರು



ವಿಸ್ಮಯವಾಣಿ ಸುದ್ದಿ : 10/03/26 ಇಂದಿನ ಅಲಂಕಾರದಲ್ಲಿ ಶ್ರೀ ಗುರು ರಾಘವೇಂದ್ರ ಸ್ವಾಮಿಗಳು ಹಾಗೂ ಶ್ರೀ ವಾದೀಂದ್ರ ತೀರ್ಥರು ಗುರುವೇ ಶರಣಂ

****

ಕಲಾಕುಂಚ ಮಹಿಳಾ ವಿಭಾಗದಿಂದ "ಆಕರ್ಷಕ ಗೃಹಿಣಿ" ಸ್ಪರ್ಧೆಯಲ್ಲಿ ಭಾಗವಹಿಸಿದ ವಿಜೇತರು

ವಿಸ್ಮಯವಾಣಿ ಸುದ್ದಿ ದಾವಣಗೆರೆ: ಕಲಾಕುಂಚ ಮಹಿಳಾ ವಿಭಾಗದಿಂದ ಇತ್ತೀಚಿಗೆ

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಹಮ್ಮಿಕೊಳ್ಳಲಾದ "ಆಕರ್ಷಕ ಗೃಹಿಣಿ" ಸ್ಪರ್ಧೆಯಲ್ಲಿ ವಿಜೇತರಾದವರು ಪ್ರಥಮ ಶ್ರೀಮತಿ ಸಿಂಧು ಕಾಂತರಾಜ್, ದ್ವಿತೀಯ ಶ್ರೀಮತಿ ಚೈತ್ರಾ ನಾಗರಾಜ್, ತೃತೀಯ ಶ್ರೀಮತಿ ರಾಧಾ ಭರತ್ ಪಡೆದಿರುತ್ತಾರೆ ಎಂದು ಕಲಾಕುಂಚ ಮಹಿಳಾ ವಿಭಾಗದ ಅಧ್ಯಕ್ಷರಾದ ತೀರ್ಪುಗಾರರಲ್ಲಿ ಒಬ್ಬರಾದ ಹೇಮಾ ಶಾಂತಪ್ಪ ಪೂಜಾರಿಯವರು ತಿಳಿಸಿದ್ದಾರೆ.

ಈ ಸ್ಪರ್ಧೆಯಲ್ಲಿ ತೀರ್ಪುಗಾರರಾಗಿ ಕಲಾಕುಂಚ ಮಹಿಳಾ ವಿಭಾಗದ ಸಂಸ್ಥಾಪಕರಾದ ಶ್ರೀಮತಿ ಜ್ಯೋತಿ ಗಣೇಶ್‌ಶೆಣೈ, ಕಲಾಕುಂಚ ಎಲೆಬೇತೂರು ಶಾಖೆಯ ಅಧ್ಯಕ್ಷರಾದ ಡಾ॥ ನಿರ್ಮಲಾ ವಿಶ್ವನಾಥ್ ಕುಲಕರ್ಣಿ, ಕಲಾಕುಂಚ ಸಿದ್ದವೀರಪ್ಪ ಬಡಾವಣೆಯ ಶಾಖೆಯ ಅಧ್ಯಕ್ಷರಾದ ಶ್ರೀಮತಿ ಲಲಿತಾ ಕಲ್ಲೇಶ್, ಸಮಿತಿ ಸದಸ್ಯರಾದ ಶ್ರೀಮತಿ ಲೀಲಾ ಸುಭಾಷ್ ಮುಂತಾದವರು ತೀರ್ಪು ನೀಡಿದರು.

ಈ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಹಾಗೂ ಭಾಗವಹಿಸಿದವರಿಗೆ ಸರ್ವರಿಗೂ ಕನ್ನಡ ತಾಯಿ ಶ್ರೀ ಭುವನೇಶ್ವರಿ ಸ್ಮರಣಿಕೆ, ಅಭಿನಂದನಾ ಪತ್ರ ವಿತರಿಸಲಾಯಿತು ಎಂದು ಕಲಾಕುಂಚ ಮಹಿಳಾ ವಿಭಾಗದ ಸಮಿತಿ ಸದಸ್ಯರಾದ ಶ್ರೀಮತಿ ಶಿಲ್ಪಾ ಉಮೇಶ್ ಪ್ರಕಟಿಸಿದ್ದಾರೆ.

****

ಯೋಗ, ಧ್ಯಾನ ಮಾಡಿ; ಶಾರೀರಿಕ, ಮಾನಸಿಕ ಆರೋಗ್ಯ ವೃದ್ಧಿಸಿ: ಪ್ರಕಾಶ್ ಹೆಬ್ಬಾರ್

ವಿಸ್ಮಯವಾಣಿ ಸುದ್ದಿ ಹೊನ್ನಾಳಿ: 'ಮಹಿಳೆಯರು ಪ್ರತಿ ದಿನ ಯೋಗ, ಧ್ಯಾನ ಮಾಡುವ ಮೂಲಕ ಶಾರೀರಿಕ ಹಾಗೂ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು' ಎಂದು ಪತಂಜಲಿ ಯೋಗ ಸಮಿತಿಯ ಅಧ್ಯಕ್ಷ ಪ್ರಕಾಶ್ ಹೆಬ್ಬಾರ್ ಹೇಳಿದರು.

ಭಾನುವಾರ ಪಟ್ಟಣದಲ್ಲಿ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪತಂಜಲಿ ಸಂಸ್ಥೆಯ ಕಾರ್ಯದರ್ಶಿ ರುದ್ರೇಶ್, ಅಂಬಿಕಾ ಹೆಬ್ಬಾರ್, ಪಂಕಜಾ, ಅರುಣಕುಮಾರ್, ಶೀಲಾ, ಸುಧಾ ಕವಿತ್, ವಿದ್ಯಾ ಡಿಂಪಲ್, ರಾಘವೇಂದ್ರ ವೈಶ್ಯ, ಸುರೇಶ್ ಕುಂಬಾರ್, ದಿಲೀಪ್, ಹರೀಶ್, ಚಂದ್ರಪ್ಪ, ಬಸವರಾಜಪ್ಪ, ಸಿಂಗಪ್ಪ, ಮಂಜುನಾಥ್, ರವಿಕುಮಾರ್ ಹಾಜರಿದ್ದರು.

ಪ್ರಿಯ ಓದುಗರೇ, ಎಲ್ಲರೂ ನಮ್ಮ ವಿಸ್ಮಯವಾಣಿ ಪ್ರಾದೇಶಿಕ ಕನ್ನಡ ದಿನ ಪತ್ರಿಕೆಯನ್ನು ತಪ್ಪದೇ ಓದಿರಿ

"ವಾರಕ್ಕೊಂದು ಮನವಿ" ವಿಭಿನ್ನ ಹೋರಾಟ

ವಿಸ್ಮಯವಾಣಿ ಸುದ್ದಿ ದಾವಣಗೆರೆ, – ಕರ್ನಾಟಕ ಚಾಲಕರ ಒಕ್ಕೂಟದಿಂದ ಹಲವಾರು ಬಾರಿ ದಾವಣಗೆರೆಯಲ್ಲಿ ಹೊಸ ಆಟೋಗಳಿಗೆ ಪರ್ಮಿಟ್‌ಗಳನ್ನು ನಿಲ್ಲಿಸುವಂತೆ ಹಾಗೂ ಡ್ರೈವರ್ ಡಿಸ್ಲೇ ಜಾರಿಗೊಳಿಸುವಂತೆ ಒತ್ತಾಯಿಸಿ ಅನೇಕ ಬಾರಿ ಮನವಿ ನೀಡಿದರೂ ಈ ಎರಡೂ ಬೇಡಿಕೆಗಳನ್ನು ಇಂದಿಗೂ ಸಂಬಂಧಪಟ್ಟವರು ಈಡೇರಿಸಿಲ್ಲ. ನಗರದಲ್ಲಿ ಈಗಾಗಲೇ ಮಿತಿಮೀರಿದ ಆಟೋಗಳಿದ್ದರೂ ಇಂದಿಗೂ ನಿರಂತರವಾಗಿ ಹೊಸಪರ್ಮಿಟ್‌ಗಳನ್ನು ನೀಡುತ್ತಿರುವುದರಿಂದ ದಿನೇ ದಿನೇ ನಗರದಲ್ಲಿ ಆಟೋಗಳ ಸಂಖ್ಯೆ ಮಿತಿಮೀರುತ್ತಿದೆ.

ಇದರಿಂದ ಈಗಿರುವ ಆಟೋಚಾಲಕರಿಗೆ ಸಂಪಾದನೆಯಿಲ್ಲದೆ ಬದುಕು ದುಸ್ತರವಾಗುತ್ತಿದೆ. ನಗರದಲ್ಲಿ ಆಟೋಚಾಲನೆ ಎನ್ನುವುದು ಎಲ್ಲರಿಗೂ ಸುಲಭದ ಕೆಲಸವಾಗಿದ್ದು ಗಾರೆ ಕೆಲಸದವರಿಂದ ಹಿಡಿದು ಸೊಪ್ಪು ತರಕಾರಿ ಮಾರುವವರೂ ಸಹ ಬಿಡುವಿನ ಸಮಯದಲ್ಲಿ ಆಟೋ ಚಾಲನೆ ಮಾಡುತ್ತಿರುವುದರಿಂದ ಪ್ರಾಮಾಣಿಕ ಆಟೋ ಚಾಲಕರಿಗೆ ಇದರಿಂದ ತೊಂದರೆಯಾಗುವುದರ ಜೊತೆಗೆ ಸಂಚಾರಿ ನಿಯಮಗಳ ಅರಿವಿರದ ಇಂತಹವರಿಂದ ಸಾರ್ವಜನಿಕರಿಗೂ ನಿತ್ಯ ಕಿರಿಕಿರಿ ಉಂಟಾಗುತ್ತಿದ್ದು,

ಇಂತಹವರು ಮಾಡುವ ಅಚಾತುರ್ಯಗಳಿಂದ ಒಟ್ಟಾರೆಯಾಗಿ ಪ್ರಾಮಾಣಿಕ ಆಟೋ ಚಾಲಕರಿಗೂ ಅವಮಾನವಾಗುತ್ತಿದೆ. ಡ್ರೈವರ್ ಡಿಸ್‌ಪ್ಲೇ ಜಾರಿಗೊಳಿಸುವುದರಿಂದ ಕೇವಲ ಲೈಸೆನ್ಸ್ ಇರುವವರು ಮಾತ್ರ ಆಟೋ ಚಾಲನೆ ಮಾಡಬಹುದಾಗಿದೆ.

ಎಸ್.ಎಸ್. ಮಲ್ಲಿಕಾರ್ಜುನರದ್ದು ಹಿಟ್ಲರ್ ಸಂಸ್ಕೃತಿ: ಯಶವಂತರಾವ್ ಜಾಧವ್

ವಿಸ್ಮಯವಾಣಿ ಸುದ್ದಿ ದಾವಣಗೆರೆ: ಕಾಂಗ್ರೆಸ್ ಪಕ್ಷದಲ್ಲಿ ಆಂತರಿಕ ಪ್ರಜಾಪ್ರಭುತ್ವವೇ ಇಲ್ಲ. ಅಲ್ಪಸಂಖ್ಯಾತರಿಗೆ ಅನ್ಯಾಯ ಮಾಡಿರುವುದು ಎಸ್. ಎಸ್. ಮಲ್ಲಿಕಾರ್ಜುನ್ ಅವರೇ. ಯಾರೇ ವಿಧಾನಸಭೆ ಮತ್ತು ಲೋಕಸಭೆಗೆ ಟಿಕೆಟ್ ಕೇಳಿದರೆ ಮಟ್ಟ ಹಾಕುವ ಕೆಲಸ ಈ ಹಿಂದಿನಿಂದಲೂ ಮಾಡಿಕೊಂಡು ಬಂದಿದ್ದಾರೆ. ಬಿಜೆಪಿ ಬಗ್ಗೆ ಎಚ್ಚರಿಕೆಯಿಂದ ಮಾತನಾಡಬೇಕು ಎಂದು ದಾವಣಗೆರೆ ಜಿಲ್ಲಾ ಬಿಜೆಪಿ ಘಟಕದ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್ ಆಕ್ರೋಶ ವ್ಯಕ್ತಪಡಿಸಿದರು.

ಮಂಗಳವಾರ ಪತ್ರಿಗಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಪಕ್ಷದಲ್ಲಿ ಆಂತರಿಕ ಪ್ರಜಾಪ್ರಭುತ್ವ ಇದೆ. ಸಾಮಾನ್ಯ ಕಾರ್ಯಕರ್ತನೂ ರಾಜ್ಯಮಟ್ಟದ ನಾಯಕರಿಗೆ ಪ್ರಶ್ನೆ ಮಾಡುವ ಹಕ್ಕು ಬಿಜೆಪಿಯು ಕಾರ್ಯಕರ್ತರಿಗೆ ನೀಡಿದೆ. ಕೆಲವು ವಿಚಾರ ಬಗ್ಗೆ ರಾಜ್ಯ ನಾಯಕರು ಬಂದಾಗ ನಮ್ಮ ವಿಚಾರ ವ್ಯಕ್ತಪಡಿಸಿದ್ದೇವೆ. ಅದನ್ನೇ ಮಲ್ಲಿಕಾರ್ಜುನ್ ಅವರು ಬಿಜೆಪಿಯವರು ಹೊಡೆದಾಡಿಕೊಂಡಿದ್ದಾರೆ ಎಂದಿದ್ದಾರೆ ಎಂದು ಹೇಳಿದರು.

ಕಾಂಗ್ರೆಸ್ ನಲ್ಲಿ ಆಂತರಿಕ ಪ್ರಜಾಪ್ರಭುತ್ವ ಇದೆಯಾ? ಬೆನ್ನಿಗೆ ಚೂರಿ ಹಾಕುವ ಸಂಸ್ಕೃತಿ ಕಾಂಗ್ರೆಸ್ ನದ್ದು. ಚನ್ನಯ್ಯ ಒಡೆಯರ್ ರಿಂದ ಹಿಡಿದು ಇಲ್ಲಿಯವರೆಗೆ ಮಲ್ಲಿಕಾರ್ಜುನ್ ತನ್ನ ವಿರುದ್ಧ ನಿಂತವರನ್ನು ಮಟ್ಟ ಹಾಕಿದರು. ಬಿ. ವೀರಣ್ಣ ಟಿಕೆಟ್ ಕೇಳಿದ್ದಕ್ಕೆ ಅಟ್ರಾಸಿಟಿ ಕೇಸ್ ಹಾಕಿ ಮೂರು ತಿಂಗಳು ಊರು ಬಿಡಿಸಿದ್ದರು. ಈ ರೀತಿ ಹಿನ್ನೆಲೆ ಇರುವ ಮಲ್ಲಿಕಾರ್ಜುನ್ ಅವರು ಸಾಧಾರಣ ಮನುಷ್ಯನಲ್ಲ. ದಾವಣಗೆರೆ ಜನರು ಎಲ್ಲಾ ಆಟಗಳನ್ನು ನೋಡಿದ್ದಾರೆ ಎಂದು ಹೇಳಿದರು.

ಬಿಜೆಪಿ ಮತ್ತು ಕಾಂಗ್ರೆಸ್ ನಡುವಿನ ಚುನಾವಣೆ ಆದರೂ ಈಗ ಎಸ್. ಎಸ್. ಮಲ್ಲಿಕಾರ್ಜುನ್ ಕುಟುಂಬ ಮತ್ತು ಅಲ್ಪಸಂಖ್ಯಾತರ ನಡುವೆ ಟಿಕೆಟ್ ಗೆ ಹೋರಾಟ ನಡೆಯುತ್ತಿದೆ. ಯಾರೇ ಸ್ಪರ್ಧೆ ಮಾಡಿದರೂ ಕಟಿಬದ್ಧರಾಗಿ ಎಂಟೂ ಆಕಾಂಕ್ಷಿಗಳು ಸನ್ನದ್ಧವಾಗಿವೆ. ಒಡಕಿಲ್ಲ. ಭಿನ್ನಾಭಿಪ್ರಾಯ ಇಲ್ಲ. ರಾಜ್ಯ ನಾಯಕರು ಬಂದಾಗ ವಿಷಯ ಹಂಚಿಕೊಂಡಿದ್ದೇವೆ. ಅದನ್ನೇ ದೊಡ್ಡದಾಗಿ ಬಿಂಬಿಸುವ ಅಗತ್ಯವಿಲ್ಲ ಎಂದು ಯಶವಂತರಾವ್ ಜಾಧವ್ ಹೇಳಿದರು.

ಪತ್ರಿಕಾ ಗೋಷ್ಠಿಯಲ್ಲಿ ಮಹಾನಗರ ಪಾಲಿಕೆ ಮಾಜಿ ಸದಸ್ಯ ಶಿವನಗೌಡ ಟಿ. ಪಾಟೀಲ್, ಟಿಂಕರ್ ಮಂಜಣ್ಣ ಮತ್ತಿತರರು ಹಾಜರಿದ್ದರು

ಕಾಂಗ್ರೆಸ್ ನಲ್ಲಿ ಆಂತರಿಕ ಪ್ರಜಾಪ್ರಭುತ್ವ ಇದೆಯಾ? ಕಾಂಗ್ರೆಸ್ ನ ರಾಜ್ಯ ಮತ್ತು ರಾಷ್ಟ್ರ ನಾಯಕರು ನಿರ್ಧರಿಸಿ 2008ರಲ್ಲಿ ಸೈಯದ್ ಸೈಫುಲ್ಲಾ ಅವರಿಗೆ ಬಿ ಫಾರಂ ನೀಡಿದ್ದರು. ಹೆಲಿಕಾಪ್ಟರ್ ನಲ್ಲಿ ಬಿ ಫಾರಂ ಬಂದಿತ್ತು. ಆಗ ಬಿ ಫಾರಂ ತಿದ್ದಿ ಅಭ್ಯರ್ಥಿ ಇಲ್ಲದೇ ಹಾಗೆ ಮಾಡಿದ್ದೀರಾ. ಅಲ್ಪಸಂಖ್ಯಾತನಿಗೆ ಕೊಟ್ಟ ಬಿ ಫಾರಂ ತಿದ್ದಿ ಅನ್ಯಾಯ ಮಾಡಿದ್ದು ನೆನಪಿಲ್ಲವೇ ಎಂದು ಪ್ರಶ್ನಿಸಿದರು.

2024–25ನೇ ಸಾಲಿನಲ್ಲಿ 498 ಕೋಟಿ ಮಾರುಕಟ್ಟೆ ಶುಲ್ಕ ಸಂಗ್ರಹ: ಸಚಿವ ಶಿವಾನಂದ ಪಾಟೀಲ

ಕೃಷಿ ಮಾರಾಟ ಕಾಯ್ದೆ ಮರುಸ್ಥಾಪನೆಯಿಂದ ಎಪಿಎಂಸಿಗಳಲ್ಲಿ 30 ಲಕ್ಷ ಮೆಟ್ರಿಕ್ ಟನ್‌ನಿಂದ 164 ಮೆಟ್ರಿಕ್ ಟನ್‌ಗೆ ವಹಿವಾಟು ಏರಿಕೆ:

- **2024–25ನೇ ಸಾಲಿನಲ್ಲಿ 498 ಕೋಟಿ . ಮಾರುಕಟ್ಟೆ ಶುಲ್ಕ ಸಂಗ್ರಹ,**
- **60 ಪೈಸೆ ಮಾರುಕಟ್ಟೆ ಶುಲ್ಕದಲ್ಲಿ 3 ಪೈಸೆ ನೆರವು ನಿಧಿಗೆ ಜಮಾ**
- **ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಹೇಳಿಕೆ**

ವಿಸ್ಮಯವಾಣಿ ಸುದ್ದಿ ಬೆಂಗಳೂರು: ಆರ್ಥಿಕವಾಗಿ ಹಿಂದುಳಿದ ಎಪಿಎಂಸಿಗಳ ಪ್ರಾಂಗಣ ಅಭಿವೃದ್ಧಿ ಉದ್ದೇಶಕ್ಕೆ ಮಾರುಕಟ್ಟೆ ನೆರವು ನಿಧಿ ಸ್ಥಾಪನೆ ಮಾಡಲಾಗಿದೆ ಎಂದು ಕಬ್ಬು ಅಭಿವೃದ್ಧಿ, ಸಕ್ಕರೆ, ಜವಳಿ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ.



ವಿಧಾನಪರಿಷತ್‌ನಲ್ಲಿ ಮಂಗಳ ವಾರ ಸದಸ್ಯ ಅಬ್ದುಲ್ ಜಬ್ಬಾರ್ ಅವರ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಸಚಿವರು, ಎಪಿಎಂಸಿಗಳು ಸಂಗ್ರಹ ಮಾಡುವ 60 ಪೈಸೆ ಶುಲ್ಕದಲ್ಲಿ ಮೂರು ಪೈಸೆಯನ್ನು ಮಾರುಕಟ್ಟೆ ನೆರವು ನಿಧಿಗೆ ಜಮಾ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಈ ನೆರವು ನಿಧಿಯಿಂದಲೇ ಹಲವು ಎಪಿಎಂಸಿ ಪ್ರಾಂಗಣಗಳ ಅಭಿವೃದ್ಧಿ ಮಾಡಲಾಗುತ್ತಿದೆ ಎಂದು ತಿಳಿಸಿದರು.2024–25ನೇ ಸಾಲಿನಲ್ಲಿ 498 ಕೋಟಿ ರೂ. ಮಾರುಕಟ್ಟೆ ಶುಲ್ಕ ಸಂಗ್ರಹವಾಗಿದೆ. ಎಪಿಎಂಸಿ ಕಾಯ್ದೆ ಮರುಸ್ಥಾಪನೆಯಿಂದ 2023–24ನೇ ಸಾಲಿನಲ್ಲಿ ವಹಿವಾಟು ಪ್ರಮಾಣ ಹೆಚ್ಚಾಗಿದ್ದು, ಎಪಿಎಂಸಿ ಆವರಣದಲ್ಲಿ 85,626 ಕೋಟಿ ರೂ.ಗಳಿಗೂ ಅಧಿಕ ಮೌಲ್ಯದ ಕೃಷಿ ಉತ್ಪನ್ನಗಳ ಆವಕವಾಗಿದೆ.

2023–24ನೇ ಸಾಲಿನಲ್ಲಿ 30 ಲಕ್ಷ ಮೆಟ್ರಿಕ್ ಟನ್ ವಹಿವಾಟು ನಡೆದಿದ್ದು ಈ ಪ್ರಮಾಣ 2024–25ನೇ ಸಾಲಿನಲ್ಲಿ 164 ಲಕ್ಷ ಮೆಟ್ರಿಕ್ ಟನ್‌ಗೆ ಏರಿಕೆಯಾಗಿದೆ. ಕಾಯ್ದೆ ಮರುಸ್ಥಾಪನೆ ಮಾಡಿ ಎಲ್ಲ ಎಪಿಎಂಸಿಗಳನ್ನು ರೈತಸ್ನೇಹಿ ಹಾಗೂ ವರ್ತಕಸ್ನೇಹಿಯಾಗಿ ರೂಪಿಸಲಾಗಿದೆ. ಮಾರುಕಟ್ಟೆ ಪ್ರಾಂಗಣಗಳ ಜೊತೆಗೆ ಪ್ರಾಂಗಣದ ಹೊರಗಿನ ವಹಿವಾಟು ನಿಯಂತ್ರಿಸಲು ಎಪಿಎಂಸಿಗಳಿಗೆ ಅಧಿಕಾರ ನೀಡಲಾಗಿದೆ ಎಂದು ವಿವರಿಸಿದ್ದಾರೆ.

ಪ್ರಸ್ತುತ ಆನ್‌ಲೈನ್ ಚಟುವಟಿಕೆ ಹೆಚ್ಚಳವಾಗುತ್ತಿದ್ದು, ಅಧಿಸೂಚಿತ ಉತ್ಪನ್ನಗಳಲ್ಲಿ ವ್ಯವಹರಿಸುತ್ತಿರುವುದರಿಂದ ಅಂತಹ ಚಟುವಟಿಕೆಗಳನ್ನು ಕಾನೂನು ವ್ಯಾಪ್ತಿಗೊಳಪಡಿಸುವ ಅಗತ್ಯವಿದೆ. ಹೀಗಾಗಿ ಇ ಕಾಮರ್ಸ್ ಫ್ಲಾಟ್‌ಫಾರಂ ವ್ಯಾಖ್ಯಾನ ಮತ್ತು ಅದರ ಸ್ಥಾಪನೆ, ನಿರ್ವಹಣೆ, ಜವಾಬ್ದಾರಿ, ಕರ್ತವ್ಯಗಳು ಮತ್ತು ದಂಡನಾತ್ಮಕ ಕ್ರಮಗಳಿಗೆ ಅವಕಾಶ ಕಲ್ಪಿಸಿ ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ತರಲಾಗಿದೆ

ಕೃಷಿ ಮಾರಾಟ ರಂಗದಲ್ಲಿ ಸುಧಾರಣೆ ತರುವ ಉದ್ದೇಶದಿಂದ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966 ಹಾಗೂ ನಿಯಮಾವಳಿ 1968ಕ್ಕೆ ತಿದ್ದುಪಡಿ ಮಾಡಲಾಗಿದೆ.

ಎಂದು ತಿಳಿಸಿದ್ದಾರೆ. ರೈತರ ಹಿತದೃಷ್ಟಿಯಿಂದಲೇ ಕಳೆದ ಮೂರು ವರ್ಷಗಳಲ್ಲಿ ಎಪಿಎಂಸಿ ಕಾಯ್ದೆಗೆ ಕೆಲವು ತಿದ್ದುಪಡಿ ತರಲಾಗಿದ್ದು, ಇದರಿಂದ ಪರಿಣಾಮಕಾರಿ ಬದಲಾವಣೆಗಳಾಗಿವೆ. ಎಪಿಎಂಸಿಗಳ ವಹಿವಾಟು ಪ್ರಮಾಣ ಹೆಚ್ಚಳವಾಗಿದೆ. ಎಲ್ಲ ಎಪಿಎಂಸಿಗಳನ್ನು ಆಕರ್ಷಕ ಮತ್ತು ಕ್ರಿಯಾತ್ಮಕಗೊಳಿಸಲು ಸಾಧ್ಯವಾಗಿದೆ. ಉಗ್ರಾಣ, ಸೈಲೋಸ್, ಶೀತಲಗೃಹ, ಪ್ಯಾಕ್ ಹೌಸ್‌ಗಳು, ಶ್ರೇಣೀಕರಿಸುವ ಮತ್ತು ಪ್ಯಾಕ್ ಮಾಡುವ ಘಟಕವನ್ನು ಉಪ ಪ್ರಾಂಗಣ ಎಂದು ಘೋಷಣೆ ಮಾಡುವ ಅಧಿಕಾರವನ್ನು ಕೃಷಿ ಮಾರಾಟ ಇಲಾಖೆ ನಿರ್ದೇಶಕರಿಗೆ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಒಳಮೀಸಲಾತಿಯಿಲ್ಲದೇ ಉದ್ಯೋಗ ಭರ್ತಿ ಮಾಡುವ ಕಾಂಗ್ರೆಸ್ : ಖಂಡನೆ

ವಿಸ್ಮಯವಾಣಿ ಸುದ್ದಿ ಹಾವೇರಿ: ಒಳಮೀಸಲಾತಿಯಿಲ್ಲದೇ ಉದ್ಯೋಗ ಭರ್ತಿ ಮಾಡುವ ಕಾಂಗ್ರೆಸ್ ಸರ್ಕಾರದ ಮಹಾದ್ರೋಹವನ್ನು ಖಂಡಿಸಿ ಮಾರ್ಚ–12 ಗುರುವಾರ ಬೆಳಿಗ್ಗೆ–11 ಘಂಟೆಗೆ ಬೆಂಗಳೂರಿನ ಫ್ರೀಡಂ ಪಾರ್ಕನಲ್ಲಿ ಕರ್ನಾಟಕದ ಸಮಸ್ತ ಒಳಮೀಸಲಾತಿ ಹೋರಾಟಗಾರರ ನೇತೃತ್ವದಲ್ಲಿ ಒಳಮೀಸಲಾತಿ ಹೋರಾಟ ಸಮಿತಿ ವತಿಯಿಂದ ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ. ಬೃಹತ್ ಪ್ರತಿಭಟನೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ರಾಜ್ಯ ಸಂಘಟನಾ ಸಂಚಾಲಕರು ಹಾಗೂ ರಾಜ್ಯ ಮುಖಂಡರಾದ ಉಡಚಪ್ಪ ಮಾಳಗಿ ಹೇಳಿದರು.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿದ ಅವರು ಒಳಮಿಸಲಾತಿಗಾಗಿ ಸುಮಾರು 35 ವರ್ಷಗಳ ಕಾಲ ನಿರಂತರವಾಗಿ ಹೋರಾಟ ಮಾಡುತ್ತಾ ಬರುತ್ತಿದ್ದು,ಒಳಮೀಸಲಾತಿಯನ್ನು ತಪ್ಪಿಸುವ ಹುನ್ನಾರ ನಡೆಯುತ್ತಿದೆ. ಒಳಮೀಸಲಾತಿಯನ್ನು ಅನ್ವಯವಾಗದಂತೆ 56 ಸಾವಿರ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂದು ಸಚಿವ ಸಂಪುಟದಲ್ಲಿ ಹೇಳಲಾಗುತ್ತಿದೆ.ನಿವೃತ್ತ ನ್ಯಾಯಮೂರ್ತಿ ನಾಗಮೋಹನ್‌ದಾಸ್ 17% ರಷ್ಟು ಪರಿಶಿಷ್ಟ ಜಾತಿಗಳ ಮೀಸಲಾತಿ ಹೆಚ್ಚಿಸಲು ಶಿಫಾರಸ್ಸು ಮಾಡಿರುತ್ತಾರೆ.

ಪರಿಶಿಷ್ಟ ಜಾತಿಯ ಪಟ್ಟಿಗೆ ಮಡಿವಾಳ ಸಮುದಾಯ ಸೇರ್ಪಡೆಗೆ ಆಗ್ರಹ

ವಿಸ್ಮಯವಾಣಿ ಸುದ್ದಿ ದಾವಣಗೆರೆ: ಮಡಿವಾಳ ಸಮುದಾಯವನ್ನು ಪರಿಶಿಷ್ಟ ಜಾತಿಯ ಪಟ್ಟಿಗೆ ಸೇರಿಸುವಂತೆ ಆಗ್ರಹಿಸಿ ಮಾರ್ಚ್ 16ರ ಸೋಮವಾರ ಬೆಳಿಗ್ಗೆ 8ಗಂಟೆಯಿಂದ ಅಹೋರಾತ್ರಿ ಪ್ರತಿಭಟನೆಯನ್ನು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ನಡೆಸಲಾಗುವುದು ಎಂದು ದಾವಣಗೆರೆ ಜಿಲ್ಲಾ ಮಡಿವಾಳ ಮಾಚಿದೇವ ಸಂಘದ ಕಾರ್ಯಾಧ್ಯಕ್ಷ ಹೆಚ್.ಜಿ.ಉಮೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲಿಂಗೈಕ್ಯ ಜಗದ್ಗುರು ಮಾಚಿದೇವ ಯೋಗಾನಂದಪುರಿ ಮಹಾ ಸ್ವಾಮೀಜಿಯವರ ಅಶೀರ್ವಾದದೊಂದಿಗೆ ಜಗದ್ಗುರು ಡಾ.ಶ್ರೀ ಬಸವ ಮಾಚಿದೇವ ಮಹಾಸ್ವಾಮಿಗಳು, ಜಗದ್ಗುರು ಶ್ರೀ ಮಾಚಿದೇವ ಮಹಾಸಂಸ್ಥಾನ ಮಠ, ಚಿತ್ರದುರ್ಗ ಹಾಗೂ ಶ್ರೀ ಮುಕ್ತಾನಂದ ಸ್ವಾಮೀಜಿ, ಶ್ರೀಕ್ಷೇತ್ರ ಕರಿಂಜೆ. ಮೂಡಬಿದ್ರೆ, ದಕ್ಷಿಣ ಕನ್ನಡ ಇವರ ಸಾನಿಧ್ಯ ಹಾಗೂ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಮಡಿವಾಳರ ಕ್ಷೇಮಾಭಿವೃದ್ಧಿ ಸಂಘ ಸೇರಿದಂತೆ ರಾಜ್ಯದ

ಎಲ್ಲಾ ಜಿಲ್ಲಾ ಮಡಿವಾಳ ಸಂಘಟನೆಗಳು, ಯುವ ಘಟಕಗಳು ಸೇರಿದಂತೆ ಮಹಿಳಾ ಘಟಕಗಳು ಈ ಹೋರಾಟದಲ್ಲಿ ಪಾಲ್ಗೊಳ್ಳಲಿವೆ.

ಸಮುದಾಯದ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಹಿನ್ನಡೆಯನ್ನು ಆಧರಿಸಿ ವರದಿಯಲ್ಲಿ ಈ ಶಿಫಾರಸು ಮಾಡಲಾಗಿದೆ. ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದರೂ, ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿ ಅಥವಾ ಜಾರಿಗೊಳಿಸುವಲ್ಲಿ ವಿಳಂಬ ಮಾಡುತ್ತಿದೆ. ದೇಶದ 18ರಾಜ್ಯಗಳಲ್ಲಿ 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ಸಮುದಾಯವನ್ನು ಈಗಾಗಲೇ ಎಸ್ಸಿ ಪಟ್ಟಿಗೆ ಸೇರಿಸಲಾಗಿದೆ.

ಆದರೆ ಕರ್ನಾಟಕ ಸೇರಿದಂತೆ ದಕ್ಷಿಣದ ಕೆಲ ರಾಜ್ಯಗಳಲ್ಲಿ ಮಾತ್ರ ಮಡಿವಾಳ ಸಮುದಾಯವನ್ನು ಪರಿಶಿಷ್ಟ ಜಾತಿಯ ಪಟ್ಟಿಗೆ ಸೇರಿಸಿಲ್ಲ.

ಈ ಎಲ್ಲಾ ವಿಚಾರಗಳ ಅನುಷ್ಠಾನಕ್ಕೆ ಆಗ್ರಹಿಸಿ ಬೆಂಗಳೂರು ಚಲೋ ಕಾರ್ಯಕ್ರಮದಲ್ಲಿ ಸಮಾಜ ಬಾಂಧವರು ಮಾರ್ಚ್ 16ರಂದು ಒಂದು ದಿನ ತಮ್ಮ ಎಲ್ಲಾ ಅಂಗಡಿಗಳೂ ಬಂದ್ ಮಾಡಿ ಈ ಹೋರಾಟದಲ್ಲಿ ಪಾಲ್ಗೊಳ್ಳಬೇಕು.

ಅಲ್ಲದೇ ಬೆಂಗಳೂರಿಗೆ ಆಗಮಿಸುವವರು ಆಯಾ ಜಿಲ್ಲಾ ಮಟ್ಟದ ಹಾಗೂ ತಾಲೂಕಿನ ಪದಾಧಿಕಾರಿಗಳನ್ನು ಸಂಪರ್ಕಿಸಿ ಹೆಸರು ನೋಂದಾಯಿಸಬೇಕು ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಆರ್.ಎನ್. ಧನಂಜಯ, ಸುರೇಶ್ ಎಂ.ಕೋಗುಂಡೆ, ಡೈಮಂಡ್ ಮಂಜುನಾಥ್, ಪಿ.ಮಂಜುನಾಥ್, ಜಿ.ವಿಜಯ ಕುಮಾರ್, ಅಂಜಿನಪ್ಪ ಪೂಜಾರ್, ಎಂ.ರುದ್ರೇಶ್, ಡಾ.ಎಂ.ಪರಶುರಾಮ, ಶ್ರೀನಿವಾಸ್ ಪೂಜಾರ್, ಹೆಚ್. ಮಂಗಳಮ್ಮ, ನಾಗಮ್ಮ, ಪುಷ್ಪಾ, ಕಂಚಿಕೆರೆ ಹನುಮಂತಪ್ಪ, ಎಂ.ವೈ.ಸತೀಶ್. ಶುಭಾಷ್ ಎಮ್ ಇತರರು ಇದ್ದರು.

ಗ್ಯಾರಂಟಿ ಹಣ ದೇವಸ್ಥಾನ ನಿರ್ಮಾಣಕ್ಕೆ: ಶಾಮನೂರು ಟಿ. ಬಸವರಾಜ

ವಿಸ್ಮಯವಾಣಿ ಸುದ್ದಿ ಮಲ್ಲಿಗೇನಹಳ್ಳಿ(ನ್ಯಾಮತಿ): 'ರಾಜ್ಯ ಸರ್ಕಾರದ ಯೋಜನೆಯಾದ ಪಂಚ ಗ್ಯಾರಂಟಿಯನ್ನು ಮಹಿಳೆಯರು ಸದುಪಯೋಗ ಪಡಿಸಿಕೊಳ್ಳುವ ಮೂಲಕ ಸ್ವಾವಲಂಬಿ ಜೀವನ ನಡೆಸುತ್ತಿದ್ದಾರೆ' ಎಂದು ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಶಾಮನೂರು ಟಿ. ಬಸವರಾಜ ಹೇಳಿದರು.

ನ್ಯಾಮತಿ ತಾಲ್ಲೂಕು ಮಲ್ಲಿಗೇನಹಳ್ಳಿ ಗ್ರಾಮದಲ್ಲಿ ಭಾನುವಾರ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾ ಘಟಕ, ತಾಲ್ಲೂಕು ಘಟಕ, ದಾವಣಗೆರೆ ಮಹಿಳಾ ಮತ್ತು ಶಿಶು ಅಭಿವೃದ್ಧಿ

'ಗ್ರಾಮದ ಮಹಿಳೆಯರು ತಮ್ಮ ಗೃಹಲಕ್ಷ್ಮಿ ಹಣವನ್ನು ಕ್ರೋಢೀಕರಿಸಿ ಆಂಜನೇಯಸ್ವಾಮಿ ದೇವಸ್ಥಾನ ನಿರ್ಮಾಣ ಕಾಮಗಾರಿಗೆ ಕೊಡುವ ಮೂಲಕ ರಾಜ್ಯಕ್ಕೆ ಮಾದರಿಯಾಗಿದ್ದಾರೆ. ಗೃಹಲಕ್ಷ್ಮಿ ಹಣದಿಂದ ಕುಟುಂಬ ನಿರ್ವಹಣೆಯೊಂದಿಗೆ ಸಮಾಜಮುಖಿ ಕೆಲಸಕ್ಕೆ ಬಳಸುತ್ತಿರುವುದು ಶ್ಲಾಘನೀಯ' ಎಂದರು.

ಇಲಾಖೆ ಆಶ್ರಯದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಟಿಸಿ ಅವರು ಮಾತನಾಡಿದರು.

ದಾವಣಗೆರೆ ಮಹಿಳಾ ಮತ್ತು ಶಿಶು ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ರಾಜನಾಯ್ಕ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾ ಘಟಕದ ಸದಸ್ಯ ಗಿರೀಶ, ತಾಲ್ಲೂಕು ಘಟಕದ ಸದಸ್ಯ ಬೆಳಗುತ್ತಿ ಎಸ್.ಕೆ.ತೀರ್ಥಲಿಂಗಪ್ಪ, ದೇವಸ್ಥಾನ ಸಮಿತಿ ಅಧ್ಯಕ್ಷ ಎಂ.ಜಿ.ಬಸವರಾಜಪ್ಪ, ಕಾರ್ಯದರ್ಶಿ ಜಿ.ಎಚ್.ಪರಮೇಶ್ವರಪ್ಪ, ಸಿಡಿಪಿಒ ಎಸ್.ಎಸ್.ಜ್ಯೋತಿ, ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಎಲ್.ನಾಗರಾಜ, ಮಾಜಿ ಸದಸ್ಯರಾದ ಹನುಮಂತಪ್ಪ, ಯಶೋದಮ್ಮ, ಪಿಡಿಒ ಮಂಜುನಾಥ ಚಾರಿ ಮತ್ತು ಸಿಬ್ಬಂದಿ, ಸ್ಥಳೀಯ ಅಂಗನವಾಡಿ ಕಾರ್ಯಕರ್ತೆಯರು, ಮಹಿಳಾ ಸಂಘಟನೆಗಳ ಸದಸ್ಯರು ಉಪಸ್ಥಿತರಿದ್ದರು.

ಚುರುಕುಗೊಂಡ ಬಿಸಿಲು; ಕಲ್ಲಂಗಡಿ ಹಣ್ಣಿಗೆ ಹೆಚ್ಚಿದ ಬೇಡಿಕೆ

ವಿಸ್ಮಯವಾಣಿ ಸುದ್ದಿ ಬಸವಾಪಟ್ಟಣ: ಶಿವರಾತ್ರಿ ನಂತರ ಹೆಚ್ಚುತ್ತಿರುವ ಬಿಸಿಲು ಈಗ ಇನ್ನೂ ಚುರುಕುಗೊಂಡಿದ್ದು, ಜನರು ತಂಪು ನೀಡುವ ಕಲ್ಲಂಗಡಿ ಹಣ್ಣಿನ ಮೊರೆ ಹೋಗುತ್ತಿದ್ದಾರೆ. 'ತಮಿಳುನಾಡಿನ ದಿಂಡಿಗಲ್ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಬೆಳೆಯುವ ತಿಳಿ ಹಸಿರು ಬಣ್ಣದ ನಾಮಧಾರಿ ಕಲ್ಲಂಗಡಿ ಹಣ್ಣು ಈಗ ಎಲ್ಲ ಕಡೆ ಜನಪ್ರಿಯವಾಗಿದ್ದು, ಇದರ ಬೇಡಿಕೆ ಹೆಚ್ಚಾಗಿದೆ. ತಮಿಳುನಾಡಿನಲ್ಲಿ ಈ ಹಣ್ಣಿನ ದರ ಟನ್ ಒಂದಕ್ಕೆ 17,000 ಇದ್ದು, ಅಲ್ಲಿಂದ ಇಲ್ಲಿಗೆ ಸಾಗಣೆ ವೆಚ್ಚ ಮತ್ತು ಇತರ ಖರ್ಚುಗಳನ್ನು ಸೇರಿಸಿದರೆ ಕೆ.ಜಿ.ಗೆ 26 ತಗಲುತ್ತದೆ. ಅದರ ಮೇಲೆ ಮೂರು ಅಥವಾ ನಾಲ್ಕು ರೂಪಾಯಿ ಲಾಭದಲ್ಲಿ ಮಾರುತ್ತಿದ್ದೇವೆ' ಎನ್ನುತ್ತಾರೆ ಹಣ್ಣಿನ ಸಗಟು ವ್ಯಾಪಾರಿ ಸೈಯದ್ ಅಫಾನ್.'ಮಾರ್ಚ್ ತಿಂಗಳಲ್ಲಿ ಬೇಸಿಗೆ ಕಾಲಿಡುತ್ತಿದ್ದಂತೆ ಕತ್ತರಿಸಿ ಮಾರುವ ಕಲ್ಲಂಗಡಿ ಹಣ್ಣಿಗೆ ಬೇಡಿಕೆ ಹೆಚ್ಚಾಗುತ್ತದೆ. ಈ ಬಾರಿ ಬನಾಸ್ಪತ್ರೆ ಹಣ್ಣಿನ ಉತ್ಪಾದನೆ ಹೆಚ್ಚಾಗಿಲ್ಲ. ಆದ್ದರಿಂದ ಕಲ್ಲಂಗಡಿಗೆ ಜನ ಮುಗಿ ಬೀಳುತ್ತಿದ್ದಾರೆ. ಚಿಕ್ಕ ಗಾತ್ರದ ಕಡು ಹಸಿರು ಬಣ್ಣದ ಕಲ್ಲಂಗಡಿಯನ್ನು ರಾಜ್ಯದಲ್ಲಿ ಬೆಳೆಯುತ್ತಿದ್ದು, ರುಚಿ ಮತ್ತು ಮಾಧುರ್ಯ ಹೆಚ್ಚಾಗಿರುವ ತಮಿಳುನಾಡಿನ ಕಲ್ಲಂಗಡಿ ನಮ್ಮಲ್ಲಿ ಹೇರಳವಾಗಿ ಖರ್ಚಾಗುತ್ತಿದೆ.

ಭಾರತಕ್ಕೆ ಟ್ರಂಪ್ ಸೂಪರ್ ಪ್ರಧಾನಿ, ಮೋದಿ ಡಮ್ಮಿ: ಎಸ್.ವಿಜಯಕುಮಾರ್ ಆರೋಪ

ವಿಸ್ಮಯವಾಣಿ ಸುದ್ದಿ ಹರಿಹರ: 'ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತದ ಸೂಪರ್ ಪ್ರಧಾನಿ ಆಗಿದ್ದು, ನರೇಂದ್ರ ಮೋದಿಯವರು ಡಮ್ಮಿ ಪ್ರಧಾನಿಯಾಗಿ ಉಳಿದಿದ್ದಾರೆ' ಎಂದು ಹರಿಹರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಉಸ್ತುವಾರಿ ಕಾರ್ಯದರ್ಶಿ ಎಸ್.ವಿಜಯಕುಮಾರ್ ಆರೋಪಿಸಿದರು.

ಹೊರವಲಯದ ಪ್ರೊ.ಬಿ.ಕೃಷ್ಣಪ್ಪ ಭವನದಲ್ಲಿ ಸೋಮವಾರ ಪಕ್ಷದ ಬಿ.ಎಲ್.ಎ 2ಗಳಿಗೆ ಆಯೋಜಿಸಿದ್ದ ತರಬೇತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

'ರಷ್ಯಾದಿಂದ ಕಚ್ಚಾ ತೈಲ ಖರೀದಿಸಬಾರದು ಎಂದು ಟ್ರಂಪ್ ಮಾಡಿದ ಆದೇಶದಂತೆ ಭಾರತ ನಡೆದುಕೊಂಡಿದೆ. ಯುದ್ಧದ ಕಾರಣ ರಷ್ಯಾದಿಂದ 30 ದಿನಗಳವರೆಗೆ ತೈಲ ಖರೀದಿಸಬಹುದೆಂದು ಟ್ರಂಪ್ ಹೇಳಿದ ನಂತರ ತೈಲ ತರಿಸಿಕೊಳ್ಳಲಾಗುತ್ತಿದೆ. ಅಮೆರಿಕ ಅಧ್ಯಕ್ಷರು ಭಾರತಕ್ಕೆ ನೀಡುತ್ತಿರುವ ಆದೇಶಗಳನ್ನು ಗಮನಿಸಿದರೆ ಬ್ರಿಟೀಷರ ದಾಸ್ಯದ ದಿನಗಳು ನೆನಪಿಗೆ ಬರುತ್ತಿವೆ' ಎಂದು ಹೇಳಿದರು.

'ಯಾವ ಪ್ರಧಾನಿಯ ಅವಧಿಯಲ್ಲೂ ಭಾರತಕ್ಕೆ ಇಂತಹ ದುಃಸ್ಥಿತಿ ಬಂದಿರಲಿಲ್ಲ. 'ವಿಶ್ವ ಗುರು' ಎಂದು ಘೋಷಿಸಿಕೊಂಡವರು ದೇಶವನ್ನು ದಾಸ್ಯಕ್ಕೆ ತಳ್ಳಿದ್ದಾರೆ.

ಕಳಂಕ ಹೊತ್ತ ಹರಿಹರದ ರಾಜ ಕಾಲುವೆ ಸ್ಥಗಿತ ಆಗ್ರಹ

ವಿಸ್ಮಯವಾಣಿ ಸುದ್ದಿ ಹರಿಹರ: ಅವೈಜ್ಞಾನಿಕ ಹಾಗೂ ಒತ್ತುವರಿದಾರರಿಗೆ ಅನುಕೂಲಕರದ ಕಳಂಕ ಹೊತ್ತ ಹರಿಹರದ ರಾಜ ಕಾಲುವೆಯಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಕೈಗೊಂಡಿರುವಕಾಂಕ್ರೀಟ್ ಚರಂಡಿ ನಿರ್ಮಾಣ ಕಾಮಗಾರಿಯನ್ನು ಸ್ಥಗಿತಗೊಳಿಸಲು ಆಗ್ರಹಿಸಿ ಮಂಗಳವಾರ ರಾಜ ಕಾಲುವೆ ರಕ್ಷಣಾ ಸಮಿತಿಯಿಂದ ನಗರಾಭಿವೃದ್ಧಿಕೋಶದಯೋಜನಾಧಿಕಾರಿ ಮಹಾಂತೇಶ್‌ಅವರಿಗೆ ಮನವಿ ನೀಡಲಾಯಿತು.

ನಂತರ ಸಮಿತಿಯವರು ಮಾತನಾಡಿ, ಜನ ಸಾಮಾನ್ಯರು ಗಮನಿಸಿದರೂ ಕೂಡ ಈ ಕಾಮಗಾರಿ ಅವೈಜ್ಞಾನಿಕ ಅಷ್ಟೇಅಲ್ಲ, ಭೂಗಳ್ಳರು ಬೆಲೆ ಬಾಳುವ ಕಾಲುವೆಯ ಹಲವು ಕೋಟಿರೂ.ಮೌಲ್ಯದ ಹಲವು ಎಕರೆಜಮೀನನ್ನು ವಶಪಡಿಸಿಕೊಳ್ಳಲು ಅನುವು ಮಾಡಿಕೊಡುವಂತಿದೆ ಎಂಬ ಅಭಿಪ್ರಾಯಕ್ಕೆ ಸಹಜವಾಗಿ ಬರುತ್ತಾರೆಎಂದು ಆರೋಪಿಸಿದರು. ಹಳೆ ಪಿ.ಬಿ. ರಸ್ತೆ ಪಕ್ಕದಿಂದ ಹರಿದು ಬರುವ ಈ ಹಳ್ಳವನ್ನು ಮುಚ್ಚಿದ ಪರಿಣಾಮ ಈಗಾಗಲೆ ಹಲವು ಎಕರೆಜಮೀನು

ವಿಸ್ತಾರವಾಗಿರುವ ಕಾಲುವೆಯಲ್ಲಿ 15 ರಿಂದ 18 ಅಡಿ ಅಗಲದವರೆಗೆ ಮಾತ್ರಚರಂಡಿ ಹಾಗೂ ತಡೆಗೋಡೆ ನಿರ್ಮಿಸುವ ಬದಲುಕಾಲುವೆಯ ಇಡೀ ಭಾಗದಲ್ಲಿ ಕಾಂಕ್ರೀಟ್ ಚರಂಡಿ ಹಾಗೂ ತಡೆಗೋಡೆ ನಿರ್ಮಿಸಬೇಕಿತ್ತು.

ಭೂಗಳ್ಳರ ಪಾಲಾಗಿದೆ, ಇದರ ಪರಿಣಾಮವಾಗಿಯೆಕೆಲವು ವರ್ಷಗಳಿಂದ ನಗರದ ಕಾಳಿದಾಸ ನಗರ, ನೀಲಕಂಠನಗರ, ಬೆಂಕಿನಗರ ಹಾಗೂ ಇತರೆಜನವಸತಿ ಪ್ರದೇಶಗಳಲ್ಲಿ ಮಳೆ ನೀರು ನುಗ್ಗಿ ಪ್ರವಾಹದ ಸ್ಥಿತಿಯನ್ನು ನಿರ್ಮಿಸುತ್ತಿದೆ. ಈ ಕಾಮಗಾರಿಯನ್ನು ತಕ್ಷಣ ನಿಲ್ಲಿಸಬೇಕು. ಈ ಅನುದಾನವನ್ನು ಜೆ.ಸಿ.ಬಡಾವಣೆಯ 4ನೇ ಕ್ರಾಸ್ ಪ್ರದೇಶದಇದೇ ಕಾಲುವೆ ಭಾಗದಲ್ಲಿಎತ್ತರದ ಸೇತುವೆ, ಉತ್ತಮಅಪ್ರೋಚಿಂಗ್‌ರಸ್ತೆ ನಿರ್ಮಿಸಬೇಕು.

ಜೆ.ಸಿ.ಬಡಾವಣೆಯ 10 ಅಥವಾ 11ನೇ ಕ್ರಾಸಿನ ಮೂಲಕ ಈ ಕಾಲುವೆಗೆ ಸುಸಜ್ಜಿತ ಸೇತುವೆ ಹಾಗೂ ಮುಂದೆ ಕಾಲುವೆ ಮೇಲೆ ಹಳೆ ಪಿ.ಬಿ.ರಸ್ತೆಗೆ (ಭಾಗೀರಥಿಕಲ್ಯಾಣ ಮಂಟಪದಎದುರಿಗೆ) ಜೋಡಿಸುವಂತೆರಸ್ತೆ ನಿರ್ಮಿಸಿದರೆ ಮಿನಿ ರಿಂಗ್‌ರೋಡ್ ಆಗಲಿದೆ. ನಂತರ ಹರಿಹರ ತಹಶೀಲ್ದಾರ್ ಸಂತೋಷ್‌ಕುಮಾರ್ ಜಿ., ನಗರಸಭೆ ಪೌರಾಯುಕ್ತೆ ಈರಮ್ಮ ಅವರಿಗೂ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಸಮಿತಿಯ ಪದಾಧಿಕಾರಿಗಳಾದ ತಾಲ್ಲೂಕು ಪಂಚಾಯ್ತಿ ಮಾಜಿ ಅಧ್ಯಕ್ಷ ಟಿ.ಜೆ.ಮುರುಗೇಶಪ್ಪ, ಪಿ.ಜೆ.ಮಹಾಂತೇಶ್, ಎಂ.ಎಸ್.ಬಾಬುಲಾಲ್, ಬಿ.ಮಗ್ದುಮ್, ಜಫ್ರುಲ್ಲಾ, ಕಡ್ಲೆಗೊಂದಿ ತಿಮ್ಮಣ್ಣ, ಇಮ್ತಿಯಾಜ್ ಜಲಾಲ್, ಮೊಹಮ್ಮದ್ ಗೌಸ್ ಇದ್ದರು.

Published by & Owned by : B. VASUDEVA , No. 445/1, J. H. Patel Badavane, Opp, 6th Park, Samanuru, Davangere, Karnataka State. Printed by, Printed at : MANJU MUDRANA At. Kumduvada Kere Road, Near Kadappa Bavi, Davangere, Karnataka State, Editor : B. VASUDEVA No. 445/1, J. H. Patel Badavane, Opp, 6th Park, Samanuru, Davangere, Karnataka State